A.—Sri Kadidal MANJAPPA (Minister for Revenue and Public Works).—

(*a*) Hoskote Taluk ... 15
Anekal Taluk ... 8

(*b*) Please see Statement below.

Statement showing the number of Breached Tanks.

Sl. No.	*Name of Village and Tank*			*Name of Hobli*
	Hosakote Taluk.—			
1.	Marasanahalli Byadarakere	...	...	Nandagudi
2.	Kondarahalli Tank	...	...	Do
3.	Hindigahal Kumbaranakere	...	...	Do
4.	Vadigenahalli Kodagikere	...	...	Jodigenahalli
5.	Kattiganahalli Vadakukere	...	...	Do
6.	Kamarasanahalli Tank	...	...	Do
7.	Dad-Dasarahalli Dhamyakere	...	...	Do
8.	Hancharahathi Kirekere	...	...	Biderahalli
9.	Hosahalli Tank	...	...	Sulebele
10.	Sathyavara Tank	...	...	Do
11.	Dod-Nallurhalli Kodigekere	...	...	Hosakote
12.	Pandithan Agrahara Tank	...	...	Do
13.	Bidarhalli Kodagikere	...	...	Biderahalli
14.	Chick Banahalli Tank (Jodi)	...	...	Do
15.	Kannamangala Modikere,	...	...	Do
	Anekal Taluk.—			
1.	Sabamangala Tank	...	...	Anekal
2.	Bidaragere Mullikere	...	...	Do
3.	Hiliage Cholakatte	...	...	Attibele
4.	Shallepur Bathalevanakere	...	...	Sarasapura
5.	Buthanahalli Kodagikere	...	...	Jigani
6.	Buthanahalli Muthrayanakere	...	...	Do
7.	Ragihalli Muthrayanakere	...	...	Do
8.	Sonnaykanapura Hosakere	...	...	Anekal

Privilege Motion.

Mr. SPEAKER.—Regarding the Privilege Motion, I am not able to give my decision today, because, I have not been able to get the copies of long hand speeches made by Hon'ble Members. Therefore, I will give my decision on Monday.

DISCUSSION ON FACT FINDING COMMITTEE REPORT—(*Contd*).

*ಶ್ರೀ ಬಿ. ಮಾಧವಾಚಾರ್ (ಭದ್ರಾವತಿ).—ಸ್ವಾಮಿ, ನಿನ್ನೆಯ ದಿವಸ ರಾಜ್ಯವಿಂಗಡಣೆಯ ಸಮಿತಿಯವರ ಅಂಕಿ ಅಂಶಗಳ ವರದಿಯ ವಿಚಾರವಾಗಿ ಮಾತನಾಡುತ್ತಾ, ಪ್ರಾಂತ್ಯನಿರ್ಮಾಣದ ಪ್ರಶ್ನೆಯಲ್ಲಡಗಿರುವ ನೈತಿಕ ತಳಹದಿಯನ್ನು ಪ್ರಸ್ತಾಪಮಾಡಿದೆ. ಹಾಗೂ ವರದಿಯಲ್ಲಿ ಕಂಡುಬಂದಂತೆ ಆ ಪ್ರಾಂತ್ಯ ಸ್ವಲ್ಪಕಾಲ ಕೊರತೆಯಿಂದ ಕೂಡಿದ್ದರೂ ಕ್ರಮೇಣ ಕರ್ಣಾಟಕದ ಭವಿಷ್ಯಕ್ಕೆ ಬಹಳ ಒಳ್ಳೆಯ ದಿನಗಳಿಂದ ಕೂಡಿದೆ ಎಂಬುದನ್ನು ಕೂಡ ಪ್ರಸ್ತಾಪಮಾಡಿದೆ. ಈ ಹೊತ್ತು ನಾನು ಹೇಳುವ ವಿಷಯವೇನೆಂದರೆ, ಸಾಮಾನ್ಯವಾಗಿ ಕೆಲವರು ಈ ವರದಿಯ ಮೇಲೆ ಮಾತನಾಡುತ್ತಾ, ಮೊದಲನೆಯದಾಗಿ, ಮೈಸೂರಿನಲ್ಲಿ ಭಿನ್ನಾಭಿಪ್ರಾಯವಿರುವುದರಿಂದ ಇದು ಈ ಪ್ರಾಂತ್ಯ ನಿರ್ಮಾಣಕ್ಕೆ ಸಹಕಾರಿಯಾಗಿಲ್ಲವೆಂಬ ವಾದವನ್ನು ಮುಂದಿಟ್ಟರು. ಆದರೆ, ನಮ್ಮ ರಾಜಕೀಯ ಸಂಸ್ಥೆಗಳು ಆಗಿಂದಾಗ್ಗೆ ತೆಗೆದುಕೊಂಡ ನಿರ್ಣಯಗಳ ದೃಷ್ಟಿಯಿಂದಲೂ, ರಾಜ್ಯಾಂಗ ರಚನಾ ಸಭೆಯಲ್ಲಿ ಕೈಕೊಂಡ ನಿರ್ಣಯದ ದೃಷ್ಟಿಯಿಂದಲೂ ಈ ಮಾತು ಸಮಂಜಸವಾಗುವುದಿಲ್ಲ. ಸಾರ್ವಜನಿಕಾಭಿಪ್ರಾಯವೆಂದು ಕೆಲವರು ಹೇಳುತ್ತಾರೆ. ಸಾರ್ವಜನಿಕಾಭಿಪ್ರಾಯ ಈ ವಿಚಾರದಲ್ಲಿ ಸ್ವಲ್ಪ ಭಿನ್ನಾಭಿಪ್ರಾಯದಿಂದ ಕೂಡಿದೆಯನ್ನುವುದೇನೋ ನಿಜ. ಆದರೆ ನಮ್ಮ ದೇಶದಲ್ಲಿ ಯಾವುದು ಅತ್ಯಗತ್ಯವಾಗಿ ಆಗಬೇಕಾದುದು, ಯಾವುದು ನಮ್ಮ ರಾಷ್ಟ್ರದ ಮತ್ತು ನಮ್ಮ ಸಮಾಜದ ಏಳಿಗೆಗೆ ಸಹಕಾರಿಯಾಗಿದೆ ಎಂಬ ಬಗ್ಗೆ ಇತ್ಯರ್ಥಪಡಿಸುವಾಗ ಜನತೆಯನ್ನು ಕೇಳುವ ಸಂಪ್ರದಾಯ ಎಲ್ಲಿಯೂ ಇಲ್ಲ, ಉದಾಹರಣೆಗೆ ಈ ಹೊತ್ತು ಹರಿಜನರ ಪ್ರಶ್ನೆ, ಅಸ್ಪೃಶ್ಯತಾನಿವಾರಣೆ ಇದನ್ನು ತೆಗೆದುಕೊಳ್ಳೋಣ. ಈ ವಿಷಯದಲ್ಲಿ ಜನತೆಯನ್ನು ಕೇಳುವುದಾದರೆ,

* Asterisk indicates that the speech has not been revised by the Member concerned.

ಕೆಲವು ಕಡೆ ತೀರ ವಿರೋಧಾಭಿಪ್ರಾಯಬರಬಹುದು. ಸಾಮಾನ್ಯವಾಗಿ ಗರಡಿಯ ಮನೆಯಲ್ಲಿ ಹರಿಜನರು ಹೋಗಬೇಕೆಂದರೆ ಅವಕಾಶ ಸಿಕ್ಕುತ್ತಿಲ್ಲ. ಆದರೂ ಕೂಡ ನಮ್ಮ ರಾಷ್ಟ್ರದ ಏಳಿಗೆಯಾಗಬೇಕಾದರೆ, ಈ ವಿಷಯದಲ್ಲಿ ಸುಧಾರಣೆ ಅಗತ್ಯವಾಗಿ ಆಗಬೇಕಾದರೆ, ವಿರೋಧ ಬರಲಿ, ಏನೇ ಬರಲಿ, ಈ ಒಂದು ನೀತಿಗೆ ಕಟ್ಟುಬಿದ್ದು, ಎಲ್ಲರ ಬೆಂಬಲವನ್ನೂ ಪಡೆಯುತ್ತಿದ್ದೇವೆಂಬ ಅಭಿಪ್ರಾಯದಿಂದ ಮುನ್ನಡೆಯುತ್ತೇವೆ. ಹೀಗೆಯೇ ಮದ್ಯಪಾನನಿರೋಧ ಪ್ರಶ್ನೆ; ಅನೇಕ ಕಡೆಗಳಲ್ಲಿ ಇದಕ್ಕೆ ವಿರೋಧಬರಬಹುದು. ಆದರೂ ಅದನ್ನು ಕೈಬಿಟ್ಟಿಲ್ಲ. ಹೀಗೆ ನ್ಯಾಯವಾದ ಸಿದ್ಧಾಂತಗಳೇನಿವೆಯೋ ಅವುಗಳನ್ನು ಕಾರ್ಯರೂಪಕ್ಕೆ ತರುವ ಅವಕಾಶ ದೊರಕಿದಾಗ ನಾವು ಯಾವುದೋ ಕಾರಣದಿಂದ ನಮ್ಮ ಮನಸ್ಸನ್ನು ಬದಲಾಯಿಸಿ ಹಿಂದಕ್ಕೆ ಹೋಗುವ ಆಲೋಚನೆಮಾಡುವುದು ಖಂಡಿತವಾಗಿ ನಮ್ಮ ಶ್ರೇಯಸ್ಸಿಗೆ ಕಾರಣವಾಗುವುದಿಲ್ಲವೆಂದು ತಿಳಿದುಕೊಂಡಿದ್ದೇನೆ. ಆದುದರಿಂದ ಪ್ರಜಾವಾಣಿ ರಾಷ್ಟ್ರವಿಂಗಡಣೆಗೆ ಅನುಕೂಲವಾಗಿಲ್ಲವೆನ್ನುವ ವಾದ ಅಷ್ಟು ಸಾಧುವಾಗಿ ಕಂಡುಬರುವುದಿಲ್ಲ. ಕೋಮುವಾರು ದೃಷ್ಟಿಯಿಂದು ಈ ಪ್ರಶ್ನೆಯನ್ನು ನೋಡಬಾರದೆಂಬ ಅಭಿಪ್ರಾಯವನ್ನು ರಾಜಪ್ರಮುಖರು ತಮ್ಮ ಭಾಷಣದಲ್ಲಿ ಪ್ರಸ್ತಾಪಮಾಡಿದ್ದಾರೆ. ಇದು ಬಹಳ ಒಳ್ಳೆಯ ಮಾತು. ಇಂದಿನ ಜಾತ್ಯಾತೀತ ರಾಷ್ಟ್ರದ ತತ್ವವನ್ನು ಮುಂದಿಟ್ಟುಕೊಂಡು ರಾಷ್ಟ್ರೀಯ ಕಾರ್ಯವನ್ನು ರೂಪಿಸಿಕೊಂಡು ಬರುವಾಗ ಕೋಮುವಾರು ಭಾವನೆಗೆ ಹೆಚ್ಚಿನ ಪ್ರಾಧಾನ್ಯವನ್ನು ಅಥವಾ ಪ್ರಾಶಸ್ತ್ಯವನ್ನು ಕೊಡುವುದು ಎಳ್ಳಷ್ಟೂ ವಿವೇಕವಲ್ಲ. ಅಲ್ಲದೆ ಈಗ ರಚಿಸಬೇಕೆಂದಿರುವ ಪ್ರಾಂತ್ಯದಲ್ಲಿ ಯಾವುದೊಂದು ಕೋಮೇ ಆಗಲಿ ಅಷ್ಟೊಂದು ಹೆಚ್ಚು ಸಂಖ್ಯೆಯಲ್ಲಿ ಬರುವಹಾಗಿಲ್ಲ. ಯಾವ ಒಂದು ಕೋಮೂ ಶೇಕಡ 20ಕ್ಕಿಂತ ಹೆಚ್ಚಾಗಿಲ್ಲವೆಂದು ಹೇಳುತ್ತಾರೆ. ಇಷ್ಟೊಂದು ಭಿನ್ನ ಕೋಮುಗಳ ಸಂಘಟನೆಯಿರುವಾಗ ಯಾರೂ ಯಾರಮೇಲೂ ಯಾವ ವಿಧವಾದ ಬಲಾತ್ಕಾರವನ್ನೂ ಹೊರಿಸುವುದಕ್ಕೆ ಸಾಧ್ಯವಿಲ್ಲ. ನಮಗೆ ಸ್ವಾತಂತ್ರ್ಯವಿದೆ, ತಿಳಿವಳಿಕೆಯಿದೆ, ಪ್ರಜಾಪ್ರಭುತ್ವವಿದೆ, ರಾಜ್ಯಾಂಗವಿದೆ ; ಇದೆಲ್ಲವೂ ಇರುವಾಗ ಇಂಥ ಒಂದು ಕಲ್ಪನೆ ಖಂಡಿತವಾಗಿ ನಮ್ಮ ಈ ದೊಡ್ಡ ಕಾರ್ಯಕ್ಕೆ ಅಡ್ಡಿಬರುವುದು ಸಾಧುವಲ್ಲವೆಂದು ತಿಳಿದುಕೊಂಡಿದ್ದೇನೆ.

ಈ ಪುನರ್ವಿಂಗಡಣೆಯ ಕಾರ್ಯದಲ್ಲಿ ಇನ್ನೊಂದು ತೊಡಕು ಮುಂದೆ ಬರಬಹುದು. ಭಾಷೆ ಪ್ರಧಾನವಾಗಿರಬೇಕೆಂದು ಹೇಳುವುದೇ ಹೊರತು ಭಾಷೆ ಒಂದೇ ಇದಕ್ಕೆ ತಳಹದಿಯಾಗಿರಬಾರದು ಎಂಬುದನ್ನು ಒಪ್ಪಿಕೊಂಡಿದ್ದೇವೆ. ಈ ವಿಷಯದಲ್ಲಿ ಕೆಲವರು ಸಂಶಯವನ್ನು ವ್ಯಕ್ತಪಡಿಸಿದರು. ಈ ಪ್ರಶ್ನೆಯೇ ನಮ್ಮ ಮುಂದೆ ಇಲ್ಲ. ಕೋಲಾರ ಎಲ್ಲ ದೃಷ್ಟಿಯಿಂದಲೂ ನಮ್ಮ ಸಂಸ್ಥಾನದ ಅಂಗವಾಗಿರುವುದರಿಂದ, ಅಲ್ಲಿನ ಪ್ರಜಾಭಿಪ್ರಾಯ ಮೈಸೂರಿನೊಡನೆ ಇರಬೇಕೆಂದಿರುವುದರಿಂದ . . . .

ಶ್ರೀ ಬಿ. ವಿ. ನಾರಾಯಣರೆಡ್ಡಿ (ಬಾಗೇಪಲ್ಲಿ–ಗುಡಿಬಂಡ).—ಈ ಸಭೆಯಲ್ಲಿ ಕೋಲಾರದಿಂದ ಬಂದಿರುವ ಸದಸ್ಯರೆಷ್ಟೋಜನರಿದ್ದಾರೆ. ಅವರೂ ತಮ್ಮ ಅಭಿಪ್ರಾಯವನ್ನು ಕೊಡುವುದಕ್ಕವಕಾಶವಿದೆ. ಹೀಗಿರುವಾಗ, ಅವರು 'ಅಲ್ಲಿರುವ ಪ್ರಜಾಭಿಪ್ರಾಯ ಕೇಳಬೇಕಾಗಿಲ್ಲ, ಸದಸ್ಯರೇ ತೀರ್ಮಾನಮಾಡಲಿ' ಎಂದು ಹೇಳುತ್ತಾರೆ. ಹೀಗಿರುವುದರಿಂದ ಅಲ್ಲಿನ ಸದಸ್ಯರಿಗೇ ಈ ವಿಚಾರವನ್ನು ಏಕೆ ಬಿಡಬಾರದು ? ಇವರೇಕೆ ಹೀಗೆ ಮಾತನಾಡಬೇಕು ? We will represent our own selves. . . .

Mr. SPEAKER.—Any Hon'ble Member is not precluded from making relevant references to the subject in question. But I may request Hon'ble Members to avoid, as far as possible, any statement that may be unpleasant and not required for the purpose.

Sri B. MADHAVACHAR.—Where is the unpleasantness in my statement that Kolar is a part of Mysore and that the reorganisation of States is done on linguistic basis. . . .

Mr. SPEAKER.—Not in this particular statement, but in general.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಪ್ರಜಾಭಿಪ್ರಾಯ ಹೀಗಿದೆ ಎಂದು ಹೇಳಿದರು. ಅಲ್ಲಿ ಪ್ರಜಾಭಿಪ್ರಾಯ ಹಾಗಿಲ್ಲವೆಂದು ನಾನೇಕೆ ಹೇಳಬಾರದು ?

Mr. SPEAKER.—The Hon'ble Member will be given an opportunity to make a speech.

ಶ್ರೀ ಬಿ. ಮಾಧವಾಚಾರ್.—ರಾಜ್ಯಗಳ ಎಲ್ಲೆ ಕಟ್ಟುಗಳನ್ನು ನಿರ್ಣಯಿಸುವಾಗ ಬಹುಶಃ ಕೆಲವು ಕಡೆಗಳಲ್ಲಿ ತೀವ್ರವಾದ ಮತ್ತು ಆಗ್ರಹ ಪೂರ್ವಕವಾದ ಅಭಿಪ್ರಾಯಗಳನ್ನು ಸೂಚಿಸುವುದು ಸಾಧ್ಯವಿದೆ. ಉದಾಹರಣೆಗೆ, ದಕ್ಷಿಣ ಕನ್ನಡ ಜಿಲ್ಲೆ, ಕಾಸರಗೋಡು ಬಳಿಯ ದಕ್ಷಿಣ ಭಾಗ, ಬೆಳಗಾಂ ಜಿಲ್ಲೆಯ ಕೆಲವು ಭಾಗ ಈ ಪ್ರದೇಶಗಳ ಭವಿಷ್ಯವನ್ನು ನಿರ್ಣಯಿಸುವಾಗ ಬಹುಶಃ ತೀವ್ರ ಭಿನ್ನಾಭಿಪ್ರಾಯಗಳು ಬರಬಹದು.

(SRI H. M. CHANNABASAPPA in the Chair.)

ಇಂಥ ಸಂದರ್ಭದಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಯಾವುದೇ ರೀತಿಯಲ್ಲಿಯೂ ಉದ್ರೇಕಕ್ಕೆ ಅವಕಾಶ ಕೊಡದೆ ಕೇಂದ್ರ ಸರ್ಕಾರದವರು ನೇಮಕ ಮಾಡಲಿರುವ ಅಥವಾ ಮಾಡಬೇಕಾದಂಥ ಬೌಂಡರಿ ಕಮಿಷನ್ನಿನ ಮುಂದೆ ಮನಃ ಪೂರ್ವಕವಾಗಿ ನಮ್ಮ ವಾದಗಳನ್ನೂ ಅಂಕಿ ಅಂಶಗಳನ್ನೂ ಸಂಸ್ಕೃತಿ ಮತ್ತು ಇತಿಹಾಸಗಳಿಗೆ ಸಂಬಂಧಪಟ್ಟ ವಿವರಗಳನ್ನೂ ಇಡೋಣ. ಆದರೆ ಅಲ್ಲಿಯ ತೀರ್ಮಾನ ಹೊರಬಿದ್ದ ಬಳಿಕ ಅದನ್ನು ಬಹಳ ಸಂತೋಷದಿಂದ ನಾವೆಲ್ಲರೂ ಭಾರತೀಯರು, ಒಟ್ಟು ಭಾರತದ ಹಿತ ದೃಷ್ಟಿಯಿಂದ ಕೆಲಸ ಮಾಡಬೇಕು ಎಂಬ ಭಾವನೆಯಿಂದ ಸ್ವೀಕರಿಸೋಣ. ನಮ್ಮ ಪ್ರಯತ್ನಗಳು ಎಲ್ಲಿಯವರೆಗೆ ನಡೆಯಬೇಕೋ ಅಲ್ಲಿಯವರೆಗೆ ಶ್ರದ್ಧಾಪೂರ್ವಕವಾಗಿ ಕೆಲಸ ಮಾಡೋಣ. ಅಂತಿಮವಾಗಿ ಶಾಸನಬದ್ಧವಾಗಿ ಈ ಮಾರ್ಗಗಳನ್ನು ಕೇಂದ್ರ ಸರ್ಕಾರ ಒದಗಿಸಿಕೊಡುವಾಗ ಅದರಿಂದ ಹೊರಬಿದ್ದ ತೀರ್ಮಾನಗಳನ್ನು ಸಂತೋಷದಿಂದ ಸ್ವೀಕರಿಸೋಣ. ನಮ್ಮ ಮೈಸೂರಿನ ಶಾಸನ ಸಭಾ ನಾಯಕರೂ ಇತರ ನಾಯಕರೂ ಈ ವಿಚಾರದಲ್ಲಿ ಸಲ್ಲಿಸಿರತಕ್ಕ ಸೇವೆಯ ಸ್ಮರಣೆಯನ್ನು ನಾನು ಈ ಸಂದರ್ಭದಲ್ಲಿ ಮಾಡಿದರೆ ಅನುಚಿತವಾಗಲಾರದೆಂದು ಭಾವಿಸಿದ್ದೇನೆ. ಈ ಪ್ರಶ್ನೆ ಅನೇಕ ವರ್ಷಗಳಿಂದ ರಾಷ್ಟ್ರನಾಯಕರ ಗಮನವನ್ನು ಸೆಳೆಯುತ್ತಿದ್ದರೂ ಯಾವುದೊಂದು ಖಚಿತವಾದ

(ಶ್ರೀ ಬಿ. ಮಾಧವಾಚಾರ್.)

ನಿರ್ಧಾರಕ್ಕೂ ಬಾರದೆ ಹಾಗೆಯೇ ಇಟ್ಟುಕೊಂಡು ಬಂದಿದ್ದರು. ಬಹುಶಃ ಭಾರತ ವಿಭಜನೆಯನಂತರ ನಾನಾ ತೊಡಕುಗಳೂ ಇತರ ಅನೇಕ ಬಿಕ್ಕಟ್ಟಿನ ಪ್ರಶ್ನೆಗಳೂ ಬಂದದ್ದರಿಂದ ಅವುಗಳಿಗೆ ಗಮನ ಕೊಡಬೇಕಾಗಿ ಬಂದು ಇದು ಹಿಂದಕ್ಕೆ ತಳ್ಳಲ್ಪಟ್ಟಿತ್ತು. ಆಂಧ್ರ ಪ್ರಾಂತ್ಯ ನಿರ್ಮಾಣವಾದಮೇಲೆ ಕನ್ನಡಿಗರಲ್ಲಿ ಒಂದು ಲವಲವಿಕೆಯುಂಟಾಗಿ ಮತ್ತೊಮ್ಮೆ ಈ ಪ್ರಶ್ನೆಯನ್ನು ಮುಂದಿಡಲವಕಾಶವಾಯಿತು. ನಮ್ಮ ಸಭಾನಾಯಕರು ಈ ಪ್ರಶ್ನೆಯ ಪ್ರಾಮುಖ್ಯತೆಯನ್ನು ಮನಗಂಡು ಸ್ಫೂರ್ತಿಗೊಂಡು, ಪ್ರಭಾವಯುತವಾದ ರೀತಿಯಲ್ಲಿ, ಇದನ್ನು ಇತ್ಯರ್ಥಪಡಿಸಬೇಕೆಂಬ ಧೋರಣೆಯಿಂದ ನಾನಲ್ ನಗರದ ಕಾಂಗ್ರೆಸ್ ಅಧಿವೇಶನದಲ್ಲಿ ರಾಷ್ಟ್ರನಾಯಕರ ಗಮನವನ್ನು ಸೆಳೆದದ್ದು ನನ್ನ ಜ್ಞಾಪಕದಲ್ಲಿದೆ. ಬಹುಶಃ ಇದರ ಪರಿಣಾಮವಾಗಿಯೇ ಫಜಲ್ ಅಲಿ ಸಮಿತಿಯಾಯಿತೇನೋ ಎನ್ನಿಸುತ್ತದೆ. ಹಾಗೆಯೇ ಅವರು ನೆರೆಹೊರೆಯ ಪ್ರಾಂತ್ಯಗಳಲ್ಲಿ ಪ್ರವಾಸ ಕೈಗೊಂಡಾಗ ಅಲ್ಲಿನ ಜನರ ಆಶಾಲತೆಗೆ ಜಲಧಾರೆಯನ್ನೆರೆದುದಕ್ಕಾಗಿ ಇವರಿಗೆ ಅಲ್ಲಿನ ಜನತೆ ಕೃತಜ್ಞತೆಯನ್ನು ವ್ಯಕ್ತಪಡಿಸಿದ್ದಾರೆ. ಮೈಸೂರಿನವರ ಉದಾರ ನೀತಿಗಾಗಿ ಇವರು ಹೊರ ಜಿಲ್ಲೆಗಳ ಕನ್ನಡಿಗರ ಕೃತಜ್ಞತೆಯನ್ನು ದೊರಕಿಸಿಕೊಂಡರು. ಹಾಗೆ ಕೃತಜ್ಞತೆಗೆ ಪಾತ್ರರಾಗಿರುವ ಈ ಸನ್ನಿವೇಶದಲ್ಲಿ ಯಾವುದಾದರೂ ರೀತಿಯಲ್ಲಿ ಕಳವಳವುಂಟಾಗದಂತೆ ನೋಡಿಕೊಳ್ಳಬೇಕಾದುದೂ ಮತ್ತು ನಮ್ಮ ಸಭಾ ನಾಯಕರು ತೆಗೆದುಕೊಂಡ ನಿಲುವಿಗೆ ಬೆಂಬಲಕೊಡಬೇಕಾದುದೂ ಈ ಸಂದರ್ಭದಲ್ಲಿ ನನ್ನ ಕರ್ತವ್ಯಗಳಲ್ಲೊಂದಾಗಿದೆಯೆಂದು ಭಾವಿಸಿದ್ದೇನೆ. ನಾನು ಇನ್ನು ವಿಶೇಷವಾಗಿ ಈ ವಿಚಾರದಲ್ಲಿ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ನನ್ನ ಅಭಿಪ್ರಾಯವನ್ನು ಸೂಕ್ಷ್ಮವಾಗಿ ಸಭೆಯ ಮುಂದಿಟ್ಟಿದ್ದೇನೆ. ನಮ್ಮ ಈ ಸಭಾಸದಸ್ಯರ ಅಭಿಪ್ರಾಯಗಳು, ಮೈಸೂರು ಸರ್ಕಾರ ಫಜಲಾಲಿ ಸಮಿತಿಯ ಮುಂದಿಡತಕ್ಕ ಸಲಹೆ, ಫಜಲಾಲಿ ಸಮಿತಿ ಪಾರ್ಲಿಮೆಂಟಿನ ಮುಂದಿಡತಕ್ಕ ಸಲಹೆ, ಹಾಗೂ ಲೋಕಸಭೆ ಕೈಗೊಳ್ಳುವ ತೀರ್ಮಾನ ಇವುಗಳ ಪರಿಣಾಮವಾಗಿ ನಮ್ಮ ಮೈಸೂರು ಇನ್ನಷ್ಟು ವಿಶಾಲವಾಗಿ ನಮ್ಮ ನೆರೆಹೊರೆಯ ಜಿಲ್ಲೆಗಳ ಜನರು ಮೈಸೂರಿನೊಡನೆ ಸೇರಿ ಮೈಸೂರನ್ನೊಳಗೊಂಡ ವಿಶಾಲ ಕರ್ನಾಟಕ ನಿರ್ಮಾಣವಾಗಬೇಕೆಂಬ ಯಾವ ಅಪೇಕ್ಷೆಯನ್ನು ರೂಪಿಸಿಕೊಂಡು ಬಂದಿದ್ದೆವೋ ಅದು ಕಾರ್ಯಗತವಾಗಿ ಸಫಲವಾಗಲಿ, ತನ್ಮೂಲಕ ಈ ಪ್ರದೇಶದ ಜನರ ಏಳಿಗೆ ಭರದಿಂದ ಸಾಗಲಿ.

ನಮ್ಮ ಸರ್ಕಾರದವರು ಸಂಭವಿಸಬಹುದಾದಂಥ ಪುನರ್ವಿಂಗಡಣೆ ದೃಷ್ಟಿಯನ್ನು ಈಗಾಗಲೇ ಗಮನದಲ್ಲಿಟ್ಟುಕೊಂಡು ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ನಮಗೆ ನ್ಯಾಯವಾಗಿ ಸಿಕ್ಕಬಹುದಾದಂತಹ ವಿಶೇಷ ಸೌಲಭ್ಯಗಳ ಬಗ್ಗೆ, ಅಂದರೆ ಅದಕ್ಕಾಗಿ ಜೀವನದ ಪ್ರಗತಿಗೆ ಬೇಕಾದಂಥ ರೈಲು, ರಸ್ತೆಗಳು ಇವುಗಳ ನಿರ್ಮಾಣದ ಬಗ್ಗೆ ವಿಶೇಷ ಪ್ರಯತ್ನಗಳನ್ನು ಮಾಡಲಿ ಎಂದು ಹಾರೈಸಿ ನನಗೆ ಈಗ ಮಾತನಾಡಲು ಅವಕಾಶಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ಅಭಿನಂದಿಸಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಶಿವನಂಜೇಗೌಡ (ಮೈಸೂರು ತಾಲ್ಲೂಕು).—ಅಧ್ಯಕ್ಷರೇ, ಈಗ ಶೇಷಾದ್ರಿ ಸಮಿತಿಯ ವರದಿಯ ಮೇಲೆ ಭಾಷಣಗಳು ಆಗುತ್ತಿವೆ. ಇದನ್ನು ನೋಡಿದರೆ ಎಷ್ಟು ವಿಚಿತ್ರವಾಗಿ ಕಾಣುತ್ತದೆಂದು ನನಗಂತೂ ಹೇಳತೀರದು. ಶೇಷಾದ್ರಿ ಸಮಿತಿಯವರು ಕರ್ಣಾಟಕ ಪ್ರಾಂತ್ಯ ಆಗಬೇಕೇ ಅಥವಾ ಬೇಡವೇ ಎಂಬ ಅಭಿಪ್ರಾಯವನ್ನು ಹೇಳಲಿಲ್ಲ ಎಂದು ಕೆಲವರು ಹೇಳಿದರು. ಆದರೆ ಈ ವಿಚಾರದಲ್ಲಿ ಅಂಕಿಅಂಶಗಳು ಏನು ಇವೆಯೋ ಅವನ್ನು ಮಾತ್ರ ಆ ಸಮಿತಿಯವರು ಬರೆದಿಟ್ಟಿದ್ದಾರೆ. ಅಷ್ಟೇ ಸಾಕು. ಅದು ನಮಗೆ ಒಳ್ಳೆಯ ನಿದರ್ಶನ. ಕರ್ಣಾಟಕ ಪ್ರಾಂತವಾದರೆ ಮೈಸೂರು ದೇಶ ಮುಂದಕ್ಕೆ ಹೋಗುತ್ತದೆಯೋ ಅಥವಾ ಹಿಂದಕ್ಕೆ ಬರುತ್ತದೆಯೋ ಎಂಬುದನ್ನು ಅವರು ಸ್ಪಷ್ಟಪಡಿಸಿದ್ದಾರೆ. 30 ವರುಷಗಳಹಿಂದೆ ಮೈಸೂರಿನಲ್ಲಿ ಕಾಂಗ್ರೆಸ್ ಹುಟ್ಟಿತು ಎಂದು ಹೇಳುತ್ತಾರೆ. ಅದು ನಿಜವಲ್ಲ. 1931ನೇ ಇಸವಿಯಲ್ಲಿ ಶಿವಪುರದಲ್ಲಿ ಕಾಂಗ್ರೆಸ್ ಹುಟ್ಟಿತು. ಆಗ್ಗೆ ಮೈಸೂರು ದೇಶದವರು ಮೈಸೂರು ರಾಜ್ಯವನ್ನು 500 ಮೈಲಿಗಳವರೆಗೆ ವಿಸ್ತಾರ ಮಾಡಿಕೊಡುತ್ತೇವೆಂದು ಯಾರೂ ಹೇಳಲಿಲ್ಲ. ಪದೇಪದೇ ಮೈಸೂರಿನವರ ಜೊತೆಗೆ ಬರಬೇಕೆಂದು ಬೊಂಬಾಯಿನವರು ಹೇಳುತ್ತಾರೆ. ಅದು ಮೈಸೂರಿನವರು ರಾಜ್ಯ ಮುಂದುವರಿಸಬೇಕೆಂದು ಕೇಳಿಕೊಂಡ ಹಾಗಾಯಿತೇ? ನಮ್ಮ ರಾಜ್ಯ ಭದ್ರವಾಗಿದ್ದರೆ ಸಾಕು, ಬಾಕಿ ವಿಚಾರ ನಮಗೆ ಏತಕ್ಕೆ ಬೇಕು? ಇದರ ಬಗ್ಗೆ ಪದಗಳನ್ನು ಮಾಡಿದ್ದಾರೆ, ಕವನಗಳನ್ನು ಮಾಡಿದ್ದಾರೆ. ನಾವೆಲ್ಲ ಒಂದೇ ಭಾಷೆ ಮಾತನಾಡುವವರು ಎಂದು ಹೇಳುವುದಾದರೆ, ಅವರೇ ಒಂದು ಪ್ರತ್ಯೇಕವಾಗಿ ಕನ್ನಡ ನಾಡನ್ನು ಮಾಡಿಕೊಂಡರೆ ಯಾರೂ ಬೇಡವೆಂದು ಹೇಳುತ್ತಾರೆ. ಅವರು ಏತಕ್ಕೆ ಇಲ್ಲಿಗೆ ಬರಬೇಕು? ನಮ್ಮ ದೇಶವನ್ನು ಸಂವೃದ್ಧಿಯಾಗಿ ಚೆನ್ನಾಗಿ ಇಟ್ಟುಕೊಳ್ಳೋಣ. ರಾಜ್ಯಭಾರವನ್ನು ಜನಗಳಿಗೆ ಅನುಕೂಲವಾಗುವಂತೆ ಮಾಡೋಣ. ಬಡವರನ್ನು ಉದ್ಧಾರಮಾಡೋಣ. ಈಗ ಮೈಸೂರಿನಲ್ಲಿ, ಗಾಂಧೀಜಿಯವರು ಹೇಳಿದಹಾಗೆ ನಾವು ಪಟ್ಟಣಗಳನ್ನು ನೋಡಬಾರದು, ಹಳ್ಳಿಗಳನ್ನು ಡೆಲ್ಲಿಯ ಹಾಗೆ ಮಾಡಬೇಕು. ಆದರೆ ಈಗ ಹಳ್ಳಿಗಳು ಬಹಳ ಹೀನ ಸ್ಥಿತಿಯಲ್ಲಿವೆ. ನಮ್ಮ ಸರಕಾರ ಬಂದ ಮೇಲೆ ನಿಸ್ಪೃಹವಾಗಿಯೂ, ನ್ಯಾಯ ಮತ್ತು ಧರ್ಮದಿಂದಲೂ ಸ್ವಲ್ಪ ಕೆಲಸಗಳನ್ನು ಹಳ್ಳಿಗಳಲ್ಲಿ ಅಲ್ಲಲ್ಲಿ ಕೈಗೊಂಡಿದ್ದಾರೆ. ಈ ಸರಕಾರ ಬರುವ ಮುಂಚೆ ಏನೇನು ಕೆಲಸವೂ ಆಗಿರಲಿಲ್ಲ. ಕೋಟ್ಯಾಂತರ ರೂಪಾಯಿಗಳು ಖರ್ಚಾದರೂ ಯಾವ ಹಳ್ಳಿಯೂ ಮುಂದಕ್ಕೆ ಬರಲಿಲ್ಲ. ಅಲ್ಲದೆ ಯಾವ ಹಳ್ಳಿಗೂ ಸರ್ಕಾರ ಸರಿಯಾದ ಗಮನವನ್ನು ಕೊಡಲಿಲ್ಲ. ಈ ಸರ್ಕಾರ ಬಂದು ಹಳ್ಳಿಯವರ ಮಾತಿಗೆ ಬೆಲೆ ಕೊಟ್ಟು ಎಷ್ಟು ಅನುಕೂಲಗಳನ್ನು ಮಾಡಬೇಕೋ ಅವನ್ನೆಲ್ಲಾ ಮಾಡುತ್ತಿದ್ದಾರೆ. ಕುಡಿಯುವ ನೀರಿನ ಭಾವಿಯ ಅಭಾವವನ್ನು ಇನ್ನೂ ತಪ್ಪಿಸುವುದಕ್ಕಾಗಿಲ್ಲ. ಎಲ್ಲಾ ಕಡೆಗಳಲ್ಲೂ ಕುಡಿಯುವ ನೀರಿನ ಭಾವಿಗಳನ್ನು ಕೊಡಬೇಕಾದರೆ ಇನ್ನೂ 15 ವರ್ಷಗಳಾದರೂ ಬೇಕೆನ್ನುವ ಸ್ಥಿತಿಯಲ್ಲಿ ನಾವು ಇದ್ದೇವೆ. ಇನ್ನೂ ನಮಗೆ ರಸ್ತೆಗಳನ್ನೂ, ಪಾಠಶಾಲೆಗಳನ್ನೂ ಮಾಡಿಕೊಡಬೇಕಾದದ್ದು ಎಷ್ಟೋ ಇವೆ. ದೇಶದಲ್ಲಿ ಜನಗಳಿಗೆ ಏನೇನು ಸೌಕರ್ಯಗಳು ಬೇಕೋ ಅವನ್ನೆಲ್ಲಾ ಸರ್ಕಾರದವರು ಮಾಡಿಕೊಡಬೇಕು. ಇವುಗಳನ್ನೆಲ್ಲಾ ಮಾಡಬೇಕಾದರೆ ಸರ್ಕಾರ ಬಹಳ ಶ್ರಮಪಡಬೇಕಾಗುತ್ತದೆ. ಶೇಷಾದ್ರಿ ಸಮಿತಿಯವರು ಒಂದು ಚರಿತ್ರೆಯನ್ನೇ ತಮ್ಮ ವರದಿಯಲ್ಲಿ ಬರೆದಿದ್ದಾರೆ. ಅವರು 550ನೇ ಇಸವಿ ಅಂದರೆ ಚಾಲುಕ್ಯ ಪಲ್ಲವರ ಕಾಲದಿಂದ 1799ನೆ ಇಸವಿಯಲ್ಲಿ ಬ್ರಿಟಿಷರು ಇಲ್ಲಿಗೆ ಬಂದುದು ಮತ್ತು ಕೊನೆಗೆ ಅವರ ಪ್ರಾಬಲ್ಯವು ಹೇಗೆ ಕೊನೆಗೊಂಡಿತು ಎಂಬು

ದನ್ನು ಈ ವರದಿಯ 42ನೇ ಪುಟದಲ್ಲಿ ವಿವರಿಸಿದ್ದಾರೆ. ಎಷ್ಟೆಷ್ಟು ರಾಜರು, ಎಷ್ಟೆಷ್ಟು ಮೊಗಲಾಯರು ಇಲ್ಲಿ ಪ್ರಭಾವ ಬೀರಿ ಮೈಸೂರು ರಾಜ್ಯವಾಯಿತು ಎಂಬುದು ಗೊತ್ತಾಗುತ್ತದೆ. ಕನ್ನಡ ದೇಶದವರು ಒಂದಾಗಬೇಕು ಎಂದು ಹೇಳುತ್ತಾರೆ. ಶ್ರೀಮಾನ್ ಕೊಟ್ರ ಬಸವನಗೌಡ ಮಾತನಾಡುವಾಗ ಅವರು ಏನು ಮಾತನಾಡುತ್ತಿದ್ದಾರೆ ಎಂಬುದನ್ನು ಎದ್ದು ನೋಡಬೇಕಾಗಿದೆ. ಅಲ್ಲಿ ಶೇಕಡ 20ರಷ್ಟು ಕೆಲವು ಕಡೆ ಕನ್ನಡ ಮಾತನಾಡುವವರಿಲ್ಲ. ಆ ಪ್ರದೇಶವನ್ನೆಲ್ಲಾ ನಾವು ಕಟ್ಟಿಕೊಂಡು ಇರಬೇಕೆಂದು ಹೇಳುತ್ತಾರೆ. ಇಲ್ಲಿ ಮೈಸೂರಿನಲ್ಲಿ ನೋಡುವುದಾದರೆ ತೆಲುಗು, ತಮಿಳು, ಅರವ ಮುಂತಾದ ಭಾಷೆಗಳನ್ನು ಮಾತನಾಡುವ ಜನರೆಲ್ಲರೂ ಸೇರಿಕೊಂಡು ಒಟ್ಟಿಗೆ ಬೆಳೆದಿದ್ದಾರೆ. ಆದರೆ ಈಗ ಅವರು ಕನ್ನಡ ಮಾತನಾಡುವ ಜನರಿರುವ ದೇಶದಲ್ಲಿ ಸೇರಬೇಕು ಎಂದರೆ ಇದು ಯಾವ ಪುರುಷಾರ್ಥವೋ ನನಗೆ ಅರ್ಥವಾಗುವುದಿಲ್ಲ. ಕರ್ಣಾಟಕ ಪ್ರಾಂತ್ಯ ನಿರ್ಮಾಣವಾಗಬೇಕೆಂದು ಶ್ರೀಮಾನ್ ಧರ್ಮಪ್ರಕಾಶ ಎನ್. ರುದ್ರಯ್ಯ, ಯಜಮಾನ್ ಕೆಂಚಪ್ಪ, ಮೊದಲಾದ ಈ ಮಹನೀಯರ ಹೆಸರಿನಲ್ಲಿ ಒಂದು ಮನವಿ ಹೊರಡಿಸಿದ್ದಾರೆ. ಇವರು ಒಂದು ಕಡೆ ಜಾತ್ಯತೀತ ರಾಜ್ಯ ಆಗಬೇಕು ಎಂದು ಹೇಳುವುದು— -ಈ ಸಮಸ್ಯೆ ಎಷ್ಟರಮಟ್ಟಿಗೆ ಇದೆ ಎಂಬುದನ್ನು ಸ್ವಲ್ಪ ಯೋಚನೆ ಮಾಡಿದರೆ ಎಷ್ಟೆಷ್ಟು ಜನ ಹೇಗೆ ಹೇಗೆ ಮಾತನಾಡುತ್ತಾರೆಂಬುದನ್ನು ನೋಡಿದರೆ ಗೊತ್ತಾಗುತ್ತದೆ. ಮೊನ್ನೆ ತಾನೇ ಪತ್ರಿಕೆಯಲ್ಲಿ ಶಾಸನ ಸಭೆಯ ಸದಸ್ಯರಿಗೆ ದೇವರು ಒಳ್ಳೆ ಬುದ್ಧಿ ಕೊಡಲಿ ಎಂಬದಾಗಿ ಶ್ರೀಮಾನ್ ರುದ್ರಯ್ಯನವರು ಒಂದು ಹೇಳಿಕೆ ಕೊಟ್ಟಿದ್ದಾರೆ. ಇದನ್ನೆಲ್ಲಾ ನೋಡಿದರೆ ದಿಗ್ಭ್ರಮೆಯಾಗುತ್ತದೆ, ಕಾಲು ನಡುಕವುಂಟಾಗುತ್ತದೆ. ಒಂದೇ ಕಡೆ ಹುಟ್ಟಿ ಬೆಳೆದು ಏತಕ್ಕೆ ಇಂತಹ ಭ್ರಾಂತಿ ಇಟ್ಟುಕೊಂಡಿದ್ದಾರೆ ಎಂಬುದು ಎದ್ದು ಕಾಣುತ್ತಿದೆ. ಇದರ ಹಿನ್ನೆಲೆ ಏನೋ ಇರಬೇಕು. ಇದು ದೇಶಕ್ಕೆ ಚ್ಯುತಿ ಬರತಕ್ಕಂಥ ವಿಚಾರವೇ ವಿನಾ ದೇಶ ಮುಂದೆ ಅಭಿವೃದ್ಧಿಯಾಗಿ ಬೆಳವಣಿಗೆಯ ದೇಶ ಆಗುವುದಿಲ್ಲ. ಇನ್ನು ಗಡಿ ಪ್ರಶ್ನೆ: ಗಡಿಯನ್ನು ಬೇಕಾದರೆ ಮಾಡೋಣ. ಅದಕ್ಕೆ ಬೇಕಾದರೆ ಬಾಂದು ಹಾಕಬಹುದು, ತಂತಿ ಹಾಕಬಹುದು, ಗಡೀ ಭದ್ರವಾಗಿ ಮಾಡಬೇಕಾದರೆ ಅದಕ್ಕೆ ಏನೇನು ಮಾಡಬೇಕೋ ಅದೆಲ್ಲವನ್ನೂ ಮಾಡೋಣ. ಕೊಡಗಿನವರು 'ನಾವು ಯಾರ ತಂಟೆಗೂ ಬರುವುದಿಲ್ಲ, ನಮಗೆ ಇದು ಬೇಕಿಲ್ಲ' ಎಂದು ಹೇಳುತ್ತಾರೆ. ಆದರೆ ಕೊಡಗು ಸಣ್ಣ ರಾಜ್ಯ, ಅದನ್ನು ಇಲ್ಲಿಗೆ ಸೇರಿಸಬೇಕೆಂದು ಹೇಳುವವರು ಹೇಳುತ್ತಿದ್ದಾರೆ. ದೇಶಕ್ಕೆ ಈ ಭಾಷಾವಾರು ಪ್ರಾಂತ್ಯ ಮಾಡುವುದು ಒಂದು ದೊಡ್ಡ ಕಂಟಕಪ್ರಾಯವಾಗಿದೆಯೇ ವಿನಾ ಅದರಿಂದ ಒಳ್ಳೆಯದಾಗುವುದಿಲ್ಲ. ನಾವು ಸ್ವಾತಂತ್ರ್ಯವನ್ನು ಗಳಿಸಿಕೊಂಡಮೇಲೆ ನಮ್ಮ ದೇಶವನ್ನು ಎಷ್ಟು ಅಭಿವೃದ್ಧಿಗೆ ತರಬೇಕು, ಬಡಬಗ್ಗರೂ, ಧನಿಕರೂ ಒಂದೇ ಸಮನಾಗಿ ಇರುವಂತೆ ಮಾಡಬೇಕು ಎಂಬುದನ್ನು ಸದಸ್ಯರು ಮತ್ತು ಸರ್ಕಾರ ಒಂದೇ ಮನಸ್ಸಿನಿಂದ ಪ್ರಯತ್ನ ಮಾಡಬೇಕೆಂದು ಇರವಾಗ ಈ ಹೊರಲಾರದಂಥ ಹೊರೆಯನ್ನು ನಮ್ಮ ಮೇಲೆ ಹೇರುವಂತೆ ಮಾಡುವುದು ಕೇವಲ ಭ್ರಾಂತಿ. ಮೈಸೂರು ದೇಶ ಈಗ ಎಷ್ಟಿದೆಯೋ ಅಷ್ಟೇ ಮುಂದುವರಿಯಲಿ ಎನ್ನುವ ವಿಚಾರವು ನಮಗೆ ಬೇಕಾಗಿದೆ. ಕೋಲಾರದ ವಿಚಾರ ಕೆಲವರು ಮಾತನಾಡಿದರು. ಕೋಲಾರ ನಮ್ಮದೇ. ಅದನ್ನು ಯಾರು ಬಿಟ್ಟುಕೊಡುತ್ತಾರೆ? ಕೋಲಾರವನ್ನು ಬೇರೆ ಕಡೆಗೆ ಏತಕ್ಕೆ ಸೇರಿಸಬೇಕು? ನಮ್ಮ ಮೈಸೂರು ದೇಶದಲ್ಲಿ ಎಲ್ಲಾ ಭಾಷೆಯನ್ನೂ ಮಾತನಾಡುವ ಜನರು ಇದ್ದಾರೆ. ನಾವು ಅಣ್ಣತಮ್ಮಂದಿರ ಹಾಗೆ ಬಾಳಿ ಈಗ ಸುಖಿಗಳಾಗಿದ್ದೇವೆ. ಚೆನ್ನಾಗಿ ರಾಜ್ಯಭಾರ ಮಾಡತಕ್ಕಂಥ ಬುದ್ಧಿ ಚಾತುರ್ಯ ಇರುವವರು ನಮ್ಮಲ್ಲಿದ್ದಾರೆ. ನಮಗೆ ಯಾವುದು ಬೇಡವೋ ಅದನ್ನು ಸ್ಪಷ್ಟವಾಗಿ ಹೇಳಬೇಕು. ನಾವು ಹೊತ್ತುಕೊಳ್ಳಲಿಕ್ಕೆ ಸಾಧ್ಯವಾಗದ ಹೊರೆಯನ್ನು ಹೊರಬಾರದು. ಇರತಕ್ಕ ಕೆಲಸವನ್ನು ನೆರವೇರಿಸಿದರೆ ಸಾಕಾಗುತ್ತದೆ. ಕೆಲವರು ಸರ್ಕಾರದ ನಿಲುವು ಏನು ಎಂದು ಕೇಳುತ್ತಿದ್ದಾರೆ. ಸರ್ಕಾರದ ನಿಲುವು ಏನುತಾನೇ ಇದ್ದೀತು? ಅವರು ಬಹುಮತದ ಅಭಿಪ್ರಾಯಕ್ಕೆ ಒಳಗಾಗಿಯೇ ತೀರಬೇಕು.

Mr. CHAIRMAN (Sri H. M. Channabasappa).—The House will now adjourn for lunch and meet again at 10-30 A.M.

The House adjourned for Lunch at Ten of the Clock and re-assembled at Thirty Minutes past Ten of the Clock.

[MR. SPEAKER in the Chair.]

ಶ್ರೀ ಶಿವನಂಜೇಗೌಡ.—ಅಧ್ಯಕ್ಷರೇ, ಶೇಷಾದ್ರಿ ಸಮಿತಿಯವರ ವರದಿಯ ಮೇಲೆ ನಾನು ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. "ಕನ್ನಡ ಭಾಷೆಯನ್ನಾಡತಕ್ಕ ಜನರ ಶೇಕಡವಾರು ಸಂಖ್ಯೆಯನ್ನು ನೋಡುವುದಾದರೆ, ಅಹಮದ್ ನಗರದಲ್ಲಿ ಶೇಕಡ 1.3 ಇದ್ದಾರೆ; ನೀಲಂಗದಲ್ಲಿ ಶೇಕಡ 6 ಇದ್ದಾರೆ; ಉದ್ಗೀರ್‌ನಲ್ಲಿ ಶೇಕಡ 8, ಜಾಹೀರಾಬಾದಿನಲ್ಲಿ ಶೇಕಡ 20, ನಾರಾಯನ್ ಖೇಡ್ ಶೇಕಡ 21, ಸಂತಾಪುರದಲ್ಲಿ ಶೇಕಡ 41 ಮತ್ತು ಬಿದರ್, ಹೋಮನಾಬಾದ್ ಮತ್ತು ಬಾಲ್ಕಿ ಡಿಸ್ಟ್ರಿಕ್ಟ್‌ಗಳಲ್ಲಿ ಶೇಕಡ 48 ಇದ್ದಾರೆ. ಜಹೀರಾಬಾದಿನಲ್ಲಿ ಹುಮ್ನಾಬಾದಿಗೆ ಪಕ್ಕದಲ್ಲಿರುವಂತೆ ಐದನೇ ಒಂದು ಭಾಗ ಮಾತ್ರ ಕನ್ನಡ ಮಾತನಾಡುವ ಜನರನ್ನೊಳಗೊಂಡಿದೆಯೆಂದು ಬೇರೆ ಹೇಳಿದ್ದಾರೆ. ಇವು ಮುಖ್ಯವಾಗಿ ಗಮನದಲ್ಲಿಡಬೇಕಾದ ಅಂಶಗಳು. ಭಾಲ್ಕಿ ಡಿಸ್ಟ್ರಿಕ್ಟಿನಲ್ಲಿ ಅರ್ಧ ಭಾಗದಷ್ಟು ಮರಾಠಿ ಮಾತನಾಡತಕ್ಕವರಿದ್ದಾರೆ. ಆದುದರಿಂದ ಭಾಷಾವಾರು ವಿಭಜನೆಗೆ ಈ ಪ್ರದೇಶವು ವಿವಾದಕ್ಕೆಡೆ ಕೊಡುವುದಾಗಿವೆ. ಅಹಮದ್‌ಪುರ, ಉದ್ಗೀರ್ ಮತ್ತು ನೀಲಂಗ ತಾಸೀಲುಗಳಲ್ಲಿ ಮಹಾರಾಷ್ಟ್ರ ಭಾಷೆಯನ್ನಾಡತಕ್ಕ ಜನರೇ ಹೆಚ್ಚಾಗಿರುತ್ತಾರೆ. ಇತರ ತಾಸೀಲುಗಳಲ್ಲೂ ಗಣನೀಯವಾದಷ್ಟು ಸಂಖ್ಯೆಯ ಜನರು ತೆಲುಗು ಮತ್ತು ಮಹಾರಾಷ್ಟ್ರ ಭಾಷೆಗಳನ್ನಾಡುತ್ತಾರೆ. ಆದುದರಿಂದ ಜಹೀರಾಬಾದ್, ಅಹಮದ್‌ಪುರ, ನೀಲಂಗ, ಉದ್ಗೀರ್, ನಾರಾಯಣ್‌ಖೇಡ್—ಈ ತಾಸೀಲುಗಳನ್ನು ಬಿಟ್ಟುಬಿಡಬೇಕೆಂದು ನಾವು ಅಭಿಪ್ರಾಯ ಪಡುತ್ತೇವೆ" ಎಂದು ಈ ರಿಪೋರ್ಟಿನಲ್ಲಿ ಹೇಳಿದ್ದಾರೆ. ಆದ್ದರಿಂದ ಕನ್ನಡ ಭಾಷೆಯನ್ನು ಮಾತನಾಡತಕ್ಕವರು ಇರತಕ್ಕ ಪ್ರದೇಶದ ವಿಸ್ತೀರ್ಣವು 2060 ಚದರ ಮೈಲಿಗಳಿಗೆ ಇಳಿಯುತ್ತದೆ. ಅಲ್ಲಿಗೆ ಈ ಡಿಸ್ಟ್ರಿಕ್ಟಿನ ಒಟ್ಟು ವಿಸ್ತೀರ್ಣದ

(ಶ್ರೀ ಶಿವನಂಜೇಗೌಡ.)

ಪೈಕಿ ಅರ್ಧ ಭಾಗಕ್ಕಿಂತಲೂ ಕಡಮೆಯಾಗಿರತಕ್ಕಂಥ ಭಾಗದ ಪ್ರದೇಶದಲ್ಲಿ ಕನ್ನಡ ಭಾಷೆಯನ್ನಾಡತಕ್ಕವರಿದ್ದಾರೆಂದು ಅರ್ಥವಾಗುತ್ತದೆಂದು ಈ ವರದಿಯಲ್ಲಿ ಸೂಚಿಸಿದ್ದಾರೆ. ಈ ವಿಚಾರದಲ್ಲಿ ಪತ್ರಿಕೆಗಳಲ್ಲಿ ಹೇಳಿಕೆ ಮುಂತಾದುವುಗಳನ್ನು ಕೊಟ್ಟು ಶ್ರೀಮಾನ್ ವೆಂಕಾಜಿ ರಾಯರೇ ಮೊದಲಾದವರು ಏನು ಹೇಳುತ್ತಾರೆಂದರೆ, ಈ ನಮ್ಮ ಮೈಸೂರು, ಕೋಲಾರ, ಬೆಂಗಳೂರುಗಳಲ್ಲಿಯೂ ಹಾಗೂ ಮೈಸೂರು ದೇಶಕ್ಕೆ ಸೇರಿದ 9 ಡಿಸ್ಟ್ರಿಕ್ಟ್‌ಗಳಲ್ಲಿಯೂ ಕೆಲವು ಉರ್ದು, ತುಳು, ಅರವು, ತೆಲುಗು, ತಮಿಳು ಈ ರೀತಿ ನಾನಾ ಭಾಷೆಗಳನ್ನಾಡತಕ್ಕ ಜನರಿದ್ದಾರೆ; ಹಾಗೆಯೇ ಇವರುಗಳನ್ನೂ ಇಲ್ಲಿಗೆ ಸೇರಿಸಿಕೊಳ್ಳುವ ಎಡೆಯುಂಟು; ಪಾಕಿಸ್ಥಾನ, ಪಾಕಿಸ್ಥಾನ ಎಂದು ಹೋಗಿದ್ದವರು ಮತ್ತೆ ಇಲ್ಲಿಗೇ ಬಂದರು; ಹಾಗೆಯೇ ನಮ್ಮ ಜೊತೆಯಲ್ಲಿ ಹಿಂದಿದ್ದು ಬೆಳೆದ ಸ್ನೇಹಿತರು ಈಗ ಮತ್ತೆ ಸೇರಬೇಕೆಂದು ಬರುತ್ತಿದ್ದಾರೆ; ಅವರನ್ನು ಸೇರಿಸಿಕೊಳ್ಳೋಣ—ಎಂದು ಹೇಳುತ್ತಾ ಭಗವಂತನು ಈ ಬಗ್ಗೆ ಸದಸ್ಯರಿಗೆ ಒಳ್ಳೆಯ ಮನಸ್ಸನ್ನು ಕರುಣಿಸಲಿ ಎಂದು ಸೇರಿಸಿಕೊಳ್ಳುವುದಕ್ಕೆ ಎಷ್ಟು ಪ್ರಚಾರ ಬೇಕೋ ಅಷ್ಟನ್ನೂ ಮಾಡುತ್ತಿದ್ದಾರೆ. ಈ ಪ್ರಚಾರಗಳನ್ನು ಕೇಳಿದರೇ ಬಹಳ ಆಶ್ಚರ್ಯವಾಗುತ್ತದೆ. ದೊಡ್ಡ ಮನೆಗೆ ಬಂದು ಮತ್ತೆ ಸಣ್ಣಮನೆಗೆ ಹೋಗೋಣ ಎಂದಹಾಗಾಗಿದೆ ಇವರ ಮಾತು. ನಮ್ಮ ದೇಶದ ಪ್ರಗತಿಯನ್ನು ಹಿಂದಿನಿಂದಲೂ ಬಹಳ ಚೆನ್ನಾಗಿ ಬೆಳಸಿಕೊಂಡು ಬಂದಿದೆ. ಏಕೆಂದರೆ ನಮ್ಮ ಆಡಳಿತ ಮೊದಲಿನಿಂದಲೂ ಬಹಳ ಸುಗಮವಾಗಿದೆ. ಜನಗಳೂ ಸತ್ಯಶೀಲರು. ನಮ್ಮ ಶ್ರೀಮನ್ಮಹಾರಾಜರ ಕೈಯಲ್ಲೇ ಬಹಳ ಕಾಲದಿಂದ ರಾಜ್ಯನಿಂತು ರಾಜ್ಯಭಾರ ಸುಗಮವಾಗಿ ಮುಂದುವರಿದಿದೆ. ಇಲ್ಲಿದ್ದ ದಿವಾನರುಗಳೂ ಅಧಿಕಾರಿಗಳೂ ದೇಶಭಕ್ತಿಯಿಂದ ಕೂಡಿದವರಾಗಿ ದೇಶಕ್ಕೆ ಯಾವಾಗಲೂ ಒಳ್ಳೆಯದನ್ನು ಮಾಡುತ್ತಲೇ ಬಂದಿದ್ದಾರೆ. ಹಿಮಾಚಲದಿಂದ ಕನ್ಯಾಕುಮಾರಿಯವರೆಗೆ ಎಲ್ಲಿ ನೋಡಿದರೂ ಮೈಸೂರು ರಾಜ್ಯವನ್ನು ರಾಮರಾಜ್ಯವೆಂದು ಹೇಳುವುದಕ್ಕೆ ಯಾರೂ ಸಂದೇಹ ಪಡಬೇಕಾಗಿಲ್ಲವೆಂದು ಹೇಳುತ್ತಿದ್ದಾರೆ. ಇಂಥ ಮೈಸೂರನ್ನು ತೆಗೆದುಕೊಂಡು ದೊಡ್ಡಿಗೆ ಕೂಡುವ ಹಾಗೆ ಜನರನ್ನು ತುಂಬಿದರೆ ಇದರ ಗತಿ ಏನಾಗುತ್ತದೆ? ಚೊಕ್ಕಟವಾಗಿರುವ ಮನೆಯನ್ನು ಇತ್ತಕಡೆ ಒಂದು ಗೋಡೆಯನ್ನು ಒಡೆದು ಹಾಕಿ, ಅತ್ತಕಡೆ ಒಂದು ಕಿಟಕಿಯಿಟ್ಟು ಎಲ್ಲರಿಗೂ ಜಾಗಮಾಡಿ ಕೊಡೋಣವೆಂದು ಹೋಗಿ ಛಿದ್ರವಾಗಿ ಮಾಡಿದರೆ ಏನು ಪ್ರಯೋಜನ? ಬೇರೆ ಕನ್ನಡ ಪ್ರಾಂತ್ಯ ಆಗಬೇಕೆಂದು ಹೇಳಿದ್ದಾರೆ. ಹಾಗಿದ್ದರೆ, ಅವರೇ ಬೇರೆಯಾಗಿ ಒಂದು ಪ್ರಾಂತ್ಯವನ್ನು ಮಹಾನುಭಾವರಂತೆ ಮಾಡಿಕೊಳ್ಳಲಿ. ನಮ್ಮ ಅಭ್ಯಂತರವಿಲ್ಲ. ಕ್ರಿ. ಶ. 550ರಲ್ಲಿ ಪಲ್ಲವರು, ಚಾಳುಕ್ಯರು, ಕದಂಬರು ಆಳುತ್ತಿದ್ದಾಗ ಈ ರೀತಿ ಸ್ಥಾನಪಲ್ಲಟರಾದರೆಂದು ಗೊತ್ತಾಗುತ್ತದೆ. 1817 ರಲ್ಲಿ ಬ್ರಿಟಿಷರಿಂದ ಸೋಲಿಸಲ್ಪಟ್ಟಮೇಲೆ ಈ ಹತ್ಯಾಕಾಂಡ ನಿಂತಿತು. ಇನ್ನು ಮೇಲೇನಾದರೂ ಆ ರೀತಿಯ ಹತ್ಯಾಕಾಂಡ ಮತ್ತೆ ಆಗುವುದಾದರೆ, ಆಗ ನಮ್ಮ ಮೈಸೂರು ದೇಶದ ಎಲ್ಲ ಜನರೂ ಹೋಗಿ ನಮ್ಮ ಕನ್ನಡ ಬಾಂಧವರಿಗೆ ಸಹಾಯ ಮಾಡೋಣ. ಆ ರೀತಿ ಸಹಾಯ ಮಾಡುತ್ತೇವೆಂದು ಬೇಕಾದರೆ ಒಂದು ಬಾಂಡನ್ನು ಬರೆದ ಕೊಡುತ್ತೇವೆ. ಆದ್ದರಿಂದ ಮೈಸೂರು ಈಗ ಹೇಗಿದೆಯೋ ಹಾಗೆಯೇ ಇರಲಿ. ನಮ್ಮ ಸಹಾಯವನ್ನು ಅಂಥ ಕಷ್ಟಕಾಲ ಅವರಿಗೆ ಬಂದಾಗ ಕೊಡೋಣ. ಇದು ಸರಿಯೇ ಹೊರತು ಅವರನ್ನೂ ಇಲ್ಲಿಗೇ ಕರೆತಂದು ನಮ್ಮ ಕಷ್ಟಗಳನ್ನು ಇನ್ನೂ ಜಾಸ್ತಿ ಮಾಡಿಕೊಳ್ಳುವುದು ನಮ್ಮ ದೇಶಕ್ಕೇ ದೊಡ್ಡ ಅಪಘಾತ ಮಾಡಿದಂತಾಗುತ್ತದೆ. ಆ ಅಪಘಾತವನ್ನು ಎಷ್ಟು ಹೇಳಿದರೂ ತೀರದು. ಮಾನ್ಯ ಸದಸ್ಯರು ಇದನ್ನು ದಯವಿಟ್ಟು ಯೋಚನೆ ಮಾಡಬೇಕು. ಪುರಾತನ ಸಂಸ್ಕೃತಿಗೆ ನೆಲೆವೀಡಾದಂಥ ಮೈಸೂರು ರಾಮರಾಜ್ಯವೆಂದು ಹೆಸರು ಪಡೆದಿದೆ. ನಮ್ಮ ಪಕ್ಕದ ಅಣ್ಣತಮ್ಮಂದಿರಿಗೆ ತೊಂದರೆ ಕೊಡುವಂತೆ ಯಾರಾದರೂ ರಾಕ್ಷಸರು ಬಂದರೆ ನಾವು ಹೋಗಿ ಸಹಾಯ ಮಾಡೋಣ; ಯಾವ ಕಷ್ಟಕ್ಕೂ ನೆರವಾಗೋಣ. ಅಲ್ಲಿ ಎರಡು ಕೋಟಿ ಜನರಿದ್ದಾರೆಂದು ಹೇಳಿದ್ದಾರೆ. ಅವರೇ ಒಟ್ಟಾಗಿ ಬೇರೆಯಿರಲಿ. ಅವರೂ ಒಗ್ಗಟ್ಟಾಗಿ ಸುಖಶಾಂತಿಯಿಂದ ಆಳಲಿ. ಇದರಿಂದ ನಮ್ಮ ಸರ್ಕಾರಕ್ಕೂ ಕೀರ್ತಿ ಬರುತ್ತದೆ. ದುರಾಶೆಯಿಂದ ರಾಜ್ಯವನ್ನು ವಿಸ್ತರಿಸುವುದಕ್ಕೆ ಹೋಗದೆ ಸತ್ಯಸಂಧರಾಗಿ ರಾಜ್ಯವಾಳಿದ್ದಾರೆ ಎಂದು ನಮ್ಮ ದೇಶದ ಜನರೂ ನಮಗೆ ಹೇಳುತ್ತಾರೆ. ನಮಗೆ ವೋಟನ್ನು ಕೊಟ್ಟು ಕಳುಹಿಸಿದ್ದು ನಮ್ಮ ದೇಶದ ಹಿತವನ್ನು ಕಾಪಾಡುವುದಕ್ಕೆ ಮತ್ತು ನ್ಯಾಯಧರ್ಮಗಳನ್ನು ಪಾಲಿಸುವುದಕ್ಕೆ. ನಾವು ಇಲ್ಲಿ 100 ಜನರು ಕುಳಿತು, ಹೊರಗಡೆ ಒಂದು ಕೋಟಿ ಜನರಿರುವಾಗ ಅವರನ್ನು ಕೇಳದೆ ರಾಜ್ಯಭಾರದಲ್ಲಿ ಏನೇನೋ ಮಾಡುವುದು ಶುದ್ಧ ತಪ್ಪು. ನಮ್ಮನ್ನು ಇಲ್ಲಿಗೆ ಕಳುಹಿಸಿದ ಜನ ಬುದ್ಧಿವಂತರು, ಕುಶಲವಂತರು. ಹಾಗಿರುವಾಗ ನಾವು ತಪ್ಪಿನಡೆದರೆ, ನಮಗೆ ವೋಟು ಕೊಟ್ಟು ಕಳುಹಿಸಿದ ಆ ಜನರಿಗೆ ದ್ರೋಹಮಾಡಿದಂತಾಗುತ್ತದೆ. ಯಾವ ಸದಸ್ಯರೇ ಆಗಲಿ ಆ ದ್ರೋಹಮಾಡುವುದು ಬೇಡ. ಈ ವಿಷಯದಲ್ಲಿ ಮಾತನಾಡುವ ಜನ ಇನ್ನೂ ಅನೇಕರಿದ್ದಾರೆ. ನಾನು ಹೇಳುವುದು ಸರಿಯೆಂದು ಬಹುಭಾಗ ಜನರು ಹೇಳುತ್ತಾರೆಂದು ಭಾವಿಸಿದ್ದೇನೆ. ನಮ್ಮ ದೇಶದಲ್ಲೇ ಮಾಡಬೇಕಾದ ಕೆಲಸಗಳು ಇನ್ನೂ ಅನೇಕವಾಗಿವೆ. ಪ್ರೈಮರಿ ಸ್ಕೂಲುಗಳು ಎಷ್ಟೋ ಆಗಬೇಕಾಗಿವೆ.

ಇದಕ್ಕೆ ಸಂಬಂಧಪಟ್ಟಂಥ ನಮ್ಮ ಮಂತ್ರಿಗಳಾದ ಡಾ॥ ನಾಗನಗೌಡರು—ನಾನು ಹತ್ತು ಊರುಗಳಿಗೆ ಎಲೆಕ್ಟ್ರಿಕ್ ದೀಪ ಕೊಡಬೇಕೆಂದು ಕೇಳಿದ್ದರೆ ಅವರು ಎರಡು ಊರುಗಳಿಗೆ ಮಾತ್ರ ಕೊಟ್ಟಿದ್ದಾರೆ. ಅದೂ ಕೂಡ ಮೂರು ವರ್ಷಗಳಾದಮೇಲೆ ಕೊಟ್ಟಿದ್ದಾರೆ. ಈಗ ಅವರು ನಮಗೆ ಈ ಕರ್ಣಾಟಕ ಪ್ರಾಂತ್ಯವಾಗಬೇಕು ಎಂದು ಕೇಳುವುದಾದರೆ ಅವರು ಅಲ್ಲೇ ಹೋಗಿ ಮಂತ್ರಿಗಳಾಗಿರಲಿ, ಅದಕ್ಕೆ ನಾವೇನೂ ಬೇಡ ಎಂದು ಹೇಳುವುದಿಲ್ಲ. ಆ ದಿವಸ ಒಬ್ಬ ಮಾನ್ಯ ಸದಸ್ಯರು ಆ ಬಳ್ಳಾರಿಯನ್ನು ನಮ್ಮ ಮೈಸೂರಿಗೆ ಸೇರಿಸಿದಂಥ ಕಾಲದಲ್ಲಿ ಆ ಬಳ್ಳಾರಿಯೇನೂ ನಮಗೆ ಹಾಗೇ ಸುಮ್ಮನೆ ಬರಿಕೈಯಲ್ಲಿ ಬರುವುದಿಲ್ಲ ಆದಾಯವನ್ನು ಹೊತ್ತುಕೊಂಡು ಬರುತ್ತದೆ ಎಂದು ಹೇಳಿದ್ದರು. ಇಂದು ನಾವು ಆ ಬಳ್ಳಾರಿಗೆ ಖರ್ಚುಮಾಡುವಂಥ ಹಣವನ್ನು ಈ ನಮ್ಮ ಮೈಸೂರಿಗೇ ಖರ್ಚು ಮಾಡಿದ್ದರೆ ನಮ್ಮ ದೇಶದಲ್ಲಿ ನಾಲ್ಕನೆಯ ಒಂದು ಭಾಗದ ಜನರಿಗೆ ಕಷ್ಟನಿವಾರಣೆಯಾದರೂ ಆಗುತ್ತಿತ್ತು. ಆದರೆ ಆ ದಿವಸ ಯಾರೋ ಒಬ್ಬರು ಮಹಾನುಭಾವರು ಅದು ಬರುವಾಗ ಒಂದು ದೊಡ್ಡ ಚಿನ್ನದ ಪ್ರತಿಮೆಯನ್ನೇ ಹೊತ್ತುಕೊಂಡು ಬರುತ್ತದೆ ಎಂದು ಹೇಳಿಬಿಟ್ಟರು. ಆದರೆ ಆ ದಿವಸ ಅವರು ಹಾಗೆ ಹೇಳಿದ್ದು ಇಂದು ನಮಗೆ ಬಹಳ ಕಷ್ಟವೊದಗಿದೆ. ಆದರೆ ಈಗ ಕೆಲವರು ನಾವು ಆ ಆದಾಯವಿಲ್ಲದ ಬಳ್ಳಾರಿಯನ್ನೇ ಸೇರಿಸಿಕೊಂಡಿರುವುದರಿಂದ ಈಗ ಈ ಇತರ ಭಾಗಗಳನ್ನೂ

ಏಕೆ ಸೇರಿಸಿಕೊಳ್ಳಬಾರದು ಎಂದು ಕೇಳುತ್ತಿದ್ದಾರೆ. ಇದು ಇರುವ ಮನೆಯನ್ನು ಕಿತ್ತುಕೊಳ್ಳುವ ಹಾಗೆ ಆಗಿದೆ. ಈಗ ಇರತಕ್ಕಂಥ ಮೈಸೂರು ಒಂದು ಇಂಚೂ ಇನ್ನು ಮುಂದಕ್ಕೆ ಹೋಗಬೇಕಾಗಿಲ್ಲ. ನಮಗೇನೇ ಇಲ್ಲಿ ಸರಿಯಾಗಿ ಕುಡಿಯುವ ನೀರಿನ ಬಾವಿಗಳಿಲ್ಲ, ರಸ್ತೆಗಳಿಲ್ಲ, ಆಸ್ಪತ್ರೆಗಳಿಲ್ಲ, ಸ್ಕೂಲುಗಳಿಲ್ಲ. ನಮ್ಮ ಕಡೆ ಆ ಬನ್ನೂರಿನಲ್ಲಿ ಒಂದು ಹೆರಿಗೆ ಆಸ್ಪತ್ರೆ ಇದೆ. ಮತ್ತು ಆ ಹುಣಸೂರಿನಲ್ಲಿ ಒಂದು ಇರಬಹುದೋ ಏನೋ ಅದು ನನಗೆ ಗೊತ್ತಿಲ್ಲ; ಹೀಗೆ, ಎಲ್ಲೋ ಅಲ್ಲೊಂದು ಇಲ್ಲೊಂದು ಆಸ್ಪತ್ರೆಗಳಿದ್ದಾಗ್ಯೂ ಅದರಲ್ಲಿ ಸಾಕಷ್ಟು ಸೂಲಗಿತ್ತಿಯರಿಲ್ಲ, ಡಾಕ್ಟರ್ ಇಲ್ಲ, ಔಷಧಿ ಇಲ್ಲ. ನಮಗೆ ಆಸ್ಪತ್ರೆಗಳು ಸಾಲವು ಕೊಡಿ ಎಂದು ಕೇಳುತ್ತಿದ್ದರೆ ಮಂತ್ರಿಗಳು ಗಮನವನ್ನೇ ಕೊಡುತ್ತಿಲ್ಲ. ಅನೇಕ ಹಳ್ಳಿಗಳಲ್ಲಿ ಪಾಠಶಾಲೆಗಳಿಲ್ಲ. ಪಾಠಶಾಲೆಗಳಿದ್ದ ಕಡೆ ಉಪಾಧ್ಯಾಯರಿರುವುದಿಲ್ಲ. ಹೀಗಾಗಿ ಆ ಹಳ್ಳಿಗಾಡಿನ ಜನರು ವಿದ್ಯೆ ಕಲಿಯುವುದೇ ಬಹಳ ಕಷ್ಟವಾಗಿದೆ. ನಮಗೆ ಅಲ್ಲಿ ಹೈಸ್ಕೂಲುಗಳಿಲ್ಲ, ಮಿಡಲ್ ಸ್ಕೂಲುಗಳಿಲ್ಲ. ಪ್ರೈಮರಿ ಸ್ಕೂಲುಗಳಿಲ್ಲ, ಹೀಗಿರುವಾಗ ನಾವು 500 ಮೈಲಿಗಳ ದೂರ ಹೋಗಿ ಆಡಳಿತ ನಡೆಸುತ್ತೇವೆಂದು ಹೇಳುವುದರಲ್ಲಿ ಏನಾದರೂ ಅರ್ಥವಿದೆಯೇ ? ನಾನು ಇದನ್ನೆಲ್ಲಾ ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ಯಾರು ನಮ್ಮ ಜೊತೆಯಲ್ಲಿ ಹುಟ್ಟಿ ಜೊತೆಯಲ್ಲಿ ಬೆಳೆದು ಬಂದಿದ್ದಾರೋ ಅಂಥವರು ಈ ದಿವಸ ಎರಡೆಣಿಸುತ್ತಿದ್ದಾರಲ್ಲ ಎಂಬುದಕ್ಕೆ ಹೇಳುತ್ತಿದ್ದೇನೆ. ನಮ್ಮ ಮೈಸೂರಿನಲ್ಲಿ ಏನಾದರೂ ಒಂದು ವಿಷಯವನ್ನು ಜನರಿಗೆ ತಿಳಿಸಬೇಕಾಗಿದ್ದರೆ ಒಂದು ವರ್ಗದ ಜನರು ಎಲ್ಲೆಲ್ಲಿದ್ದವರೋ ಬಂದು ಆ ಮಾರ್ಕೆಟ್ ಬಳಿ ಸೇರಿಕೊಂಡು ಬಿಡುತ್ತಾರೆ. ಆದರೆ ಅವರ ಎದುರಿಗೆ ನೋಡುತ್ತಾ ಕುಳಿತಿದ್ದವರು ಹೇಳತಕ್ಕಂಥ ಒಂದು ವರ್ಗಕ್ಕಿಂತ ಜಾಸ್ತಿ ಇದ್ದರೂ ಇವರು * * * ಅವರನ್ನು ಸುಮ್ಮನೆ ನೋಡುತ್ತಾ ಕುಳಿತುಬಿಡುತ್ತಾರೆ. . . . .

Sri J. MOHAMED IMAM (Jagalur).– Is that term " * * * " parliamentary ?

Mr. SPEAKER.—Certainly not parliamentary.

Sri M. RAJASEKHARA MURTHY (Yelandur).—Such words should not find a place in the proceedings. Those words may be expunged from the proceedings.

Mr. SPEAKER.—Yes. That word will be expunged.

ಶ್ರೀ ಶಿವನಂಜೇಗೌಡ.—ನಮ್ಮ ಪರಿಸ್ಥಿತಿ ಹೀಗಾಗಿದೆ. ಇದನ್ನೆಲ್ಲಾ ನೋಡಿದರೆ ನಮಗೆ ಬಹಳ ಭಯವಾಗುತ್ತಿದೆ. ನಮ್ಮ ಜೊತೆಯಲ್ಲೇ ಇದ್ದುಕೊಂಡು ನಮ್ಮಲ್ಲಿಯೇ ಹುಟ್ಟಿ ಬೆಳೆದಿದ್ದರೂ, ಅವರು ಏನೋ ಒಂದು ಆಸೆ ಪಟ್ಟುಕೊಂಡು ಹೀಗೆಲ್ಲಾ ಹೇಳುತ್ತಿರುವುದನ್ನು ನೋಡಿದರೆ ಇವರು ಏನೋ ಒಂದು ಹಿನ್ನೆಲೆಯನ್ನಿಟ್ಟುಕೊಂಡು—ಕಲ್ಲು ಹಾಕಬೇಕೆಂಬ ಉದ್ದೇಶ ಅವರಿಗೆ ಇದ್ದ ಹಾಗೆ ಕಾಣುತ್ತಿದೆ. ಆದುದರಿಂದ ಇದಕ್ಕೆ ಯಾರೂ ಬಲವಂತಮಾಡಬಾರದು. ಇದರಿಂದ ದೇಶಕ್ಕೆ ಹಾನಿಯಾಗುತ್ತದೆ. ಮೈಸೂರಿನವರು ಇದು ಬೇಕು ಎಂದು ಯಾರೂ ಕೇಳಿರುವುದಿಲ್ಲ. ಇಲ್ಲಿಗೆ 30 ವರ್ಷಗಳ ಹಿಂದೆ ಈ ಸ್ವಾತಂತ್ರ್ಯದ ಚಳವಳಿ ಹೂಡತಕ್ಕ ಕಾಲದಲ್ಲೇ ತಿಳಿಸಲಾಗಿದೆ ಎಂದು ಹೇಳುತ್ತಿರುವುದರಲ್ಲಿ ತಿರುಳಿಲ್ಲ. ಈ ಸ್ವಾತಂತ್ರ್ಯಕ್ಕಾಗಿ ನಾವು ತ್ಯಾಗಬಲಿದಾನಮಾಡಿದ್ದೇವೆಂದು ಹೇಳುತ್ತಿರುವ ಅನೇಕ ಪಾರ್ಟಿಗಳು, ಅಂದರೆ, ಈ ಫಾರ್ವರ್ಡ್ ಬ್ಲಾಕ್, ಸೋಷಿಯಲಿಸ್ಟರು ಶ್ರೀ ಜಯಪ್ರಕಾಶ ನಾರಾಯಣ್ ಅಂಥವರೆಲ್ಲಾ ಏನು ಹೇಳಿದ್ದಾರೋ ಅಂಥವರಲ್ಲ ನಾಲ್ಕನೆಯ ಒಂದು ಭಾಗ ಹಾಗೆ ತ್ಯಾಗ-ಬಲಿದಾನ ಮಾಡಿರತಕ್ಕವರಿಲ್ಲ. ಅವರು ತಮ್ಮ ತ್ಯಾಗವನ್ನು ನಮ್ಮ ಮೈಸೂರಿಗಾಗಿ ಕೂಡ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಅದೇ ರೀತಿ ನಮ್ಮ ಮೈಸೂರಿನವರೂ ಆಲ್ ಇಂಡಿಯಾ ಕಾಂಗ್ರೆಸ್ಸಿನಲ್ಲಿ ಸೇರಿಕೊಂಡು ಇಂಡಿಯಾ ದೇಶದಲ್ಲಿ ಪ್ರಾರಂಭವಾದ ಸ್ವಾತಂತ್ರ ಚಳವಳಿಯಲ್ಲಿ ತ್ಯಾಗಮಾಡಿದ್ದಾರೆ. ಅದೇ ರೀತಿ ಅವರು ಮೈಸೂರಿಗೆ ಬಂದು ಮಾಡಿರಬಹುದು. ಆ ದಿವಸ ಎಲ್ಲರಿಗೂ ಸ್ವಾತಂತ್ರ್ಯ ಬೇಕಾಗಿತ್ತು. ಅದಕ್ಕಾಗಿ ಹೋರಾಟ ನಡೆಸಲು ಏನೇನೋ ಹೇಳಲಾಗಿತ್ತು. ಆದರೆ ಆಗಲೂ ಸಹ ಗಾಂಧೀಜಿಯವರು ದೊಡ್ಡ ರಾಜ್ಯಗಳನ್ನು ಮಾಡಬೇಕೆಂದು ಹೇಳಿರಲಿಲ್ಲ. ಇನ್ನೂ ಅವರು ಈ ಭಾಷಾವಾರು ಪ್ರಾಂತ್ಯಗಳ ನಿರ್ಮಾಣ ಹಾನಿಕರ ಎಂದು ಹೇಳಿದ್ದಾರೆ. ಆದರೆ ಹೀಗೆ ಒಂದು ಪ್ರಾಂತ್ಯ ಆಗಬೇಕೆಂದು ಅವರು ಎಂದೂ ಹೇಳಿರಲಿಲ್ಲ. ಆದರೆ ಈ ದಿವಸ ಹೀಗೆ ಏನೋ ಒಂದು ತತ್ವದ ದೃಷ್ಟಿಯಿಟ್ಟುಕೊಂಡು ಎಲ್ಲರನ್ನೂ ಕಲಬೆರೆಕೆ ಮಾಡುವುದು ಸರಿಯಲ್ಲ. ನಮಗೆ ಒಳ್ಳೆಯ ಆಡಳಿತಬೇಕು, ಸರ್ಕಾರ ಚೆನ್ನಾಗಿ ನಡೆಯಬೇಕು ; ದೇಶಕ್ಕೆಲ್ಲಾ ಅನುಕೂಲವಾಗಬೇಕು. ಜನರಿಗೆ ಪ್ರಜಾಪ್ರಭುತ್ವ ಬಂದಮೇಲೆ ನಮಗೆ ಮುಖ್ಯವಾಗಿ ಬೇಕಾಗಿರುವುದೇನು ? ಪ್ರಜೆಗಳ ಅಭಿವೃದ್ಧಿಯನ್ನೇ ನಮ್ಮ ಮನಸ್ಸಿನಲ್ಲಿಟ್ಟುಕೊಂಡು ನಮ್ಮ ಆಡಳಿತವನ್ನು ನಾವು ಚೆನ್ನಾಗಿ ನಡೆಸಿಕೊಂಡು ಹೋದರೆ ಸಾಕು. ಬಳ್ಳಾರಿ ನಮಗೆ ಸೇರಿದಮೇಲೆ ನಮಗೆ ಎಷ್ಟೋ ಕಷ್ಟನಷ್ಟಗಳುಂಟಾಗಿವೆ. ಅವರು ಅವರ ನೋವನ್ನು ತಡೆಯಲಾರದೆ ಬಂದು ಸೇರಿಕೊಂಡಿದ್ದಾರೆ. ಅವರು ಬಂದು ಸೇರಿಕೊಂಡಿದ್ದರಿಂದ ನಮಗೀಗ ಉಂಟಾಗಿರುವ ನೋವನ್ನು ನಾವಿನ್ನೂ 2-3 ವರ್ಷಗಳಾದರೂ ಸರಿಗಟ್ಟಿಕೊಳ್ಳಲು ಸಾಧ್ಯವಾಗುವುದಿಲ್ಲವೆಂದು ತೋರುತ್ತದೆ. ದಯಮಾಡಿ ಈ ವಿಚಾರವನ್ನು ಈ ಮಾನ್ಯ ಸಭೆ ವಿಚಾರಮಾಡಬೇಕು. ಇದು ಹಾಗೆ ಆಗುವುದು ಬೇಡ ಅಂದ ಮಾತ್ರಕ್ಕೆ ನಾವು ಅವರಿಗೆ ಶತ್ರುಗಳಾದೆವೇನು ? ಅಥವಾ ಇದನ್ನು ಬೇಕು ಎಂದವರು ಅವರಿಗೆ ಮಿತ್ರರಾದರೇನು ? ಆದರೆ ಹೀಗೆ ಇವರು ನಮ್ಮ ಜೊತೆಯಲ್ಲೇ ಇದ್ದು, ಜೊತೆಯಲ್ಲೇ ಬೆಳೆದು, ಈಗ ಹೀಗೆ ಹೇಳುತ್ತಿರುವುದನ್ನು ನೋಡಿದರೆ ನಮಗೇಕೋ ಬಹಳ ಕಳವಳ ಉಂಟಾಗುತ್ತದೆ. ಅಂತೂ ಹಾಗೆ ಕರ್ಣಾಟಕ ಪ್ರಾಂತ್ಯ ಮಾಡುವುದರಿಂದ ಹಾನಿಯಾಗುತ್ತದೆ. ಇದರ ಜೊತೆಗೆ ಸಂಬಳ ಸಾರಿಗೆಗೆ ಬೇರೆ ಆಗಾಗ್ಗೆ ಚಳವಳಿಗಳು ಆಗುತ್ತಿವೆ. ಆದರೆ ನಮಗೆ ಅದನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಹೀಗಿರುವಾಗ ಇನ್ನೂ ಈ ದೊಡ್ಡ ರಾಜ್ಯಕ್ಕೆ ನಾವು ಇಂಡಿಯಾ ಸರ್ಕಾರದವರ ಮಟ್ಟದಲ್ಲಿ ಸಂಬಳ ಸಾರಿಗೆ ಕೊಡಬೇಕಾಗುತ್ತೆಂದು ಹೇಳುತ್ತಿದ್ದಾರೆ, ಇದು ಎಲ್ಲಿಯಾದರೂ ಸಾಧ್ಯವಾದೀತೇ ? ಹಾಗೆ ನಾವು ಈ ಸಂಬಳ ಸಾರಿಗೆಗಾಗಿ 16 ಕೋಟಿ ರೂಪಾಯಿಗಳನ್ನು ಕೊಟ್ಟರೆ ಆಗ ದೇಶ ಬಾಳುತ್ತದೆಯೇ ? ಈ ವಿಚಾರವನ್ನು ತಾವು ಮನಸ್ಸಿಟ್ಟು ನೋಡಬೇಕು. ಬಡಮೇಸ್ಟರುಗಳಿಗೆ ಗ್ರಾಮಾಂತರ ಪ್ರದೇಶದಲ್ಲಿ ಅವರ ಜೀವನಕ್ಕೆ ಎಷ್ಟು ತೊಂದರೆಯಿದೆ ! ಅಂಥ ಕಷ್ಟವನ್ನು ಅನುಭವಿಸತಕ್ಕಂಥವರು ದೇಶದಲ್ಲಿ ಮತ್ತೆ ಯಾರಾದರೂ ಇದ್ದಾರೆಯೇ

***Expunged as ordered by the Speaker.

(ಶ್ರೀ ಶಿವನಂಜೇಗೌಡ.)

ಎಂದು ಕೇಳಬೇಕಾಗಿದೆ. ಈಗಾಗಲೇ ನಮಗೆ ಖೋತಾ ಬಡ್ಜೆಟ್ಟಾಗಿದೆ. ಇಂಥದರಲ್ಲಿ 10-16 ಕೋಟಿ ರೂಪಾಯಿಗಳನ್ನು ಸಂಬಳಕ್ಕಾಗಿ ಖರ್ಚುಮಾಡುವುದೆಂದರೆ ಯಾವ ನ್ಯಾಯ? ಈ ವಿಷಯಗಳನ್ನೆಲ್ಲಾ ತಾವು ದಿವ್ಯದೃಷ್ಟಿಯಿಂದ ನೋಡಬೇಕು. ಈಗಾಗಲೇ ನಮ್ಮ ಮಾನ್ಯ ಗೋಪಾಲಗೌಡರಂಥ ಸದಸ್ಯರು ಮಂತ್ರಿಗಳು 500 ಮೈಲಿ ಪ್ರಯಾಣ ಮಾಡಲು ಕಾರಣವೇನಿತ್ತು ಎಂದು ನಾನಾ ವಿಧವಾಗಿ ಪ್ರಶ್ನೆಗಳನ್ನು ತರುತ್ತಿದ್ದಾರೆ. ಇನ್ನು ನಾವು ಇಂಥ ಒಂದು ದೊಡ್ಡ ರಾಜ್ಯವನ್ನು ಸ್ಥಾಪಿಸಿಬಿಟ್ಟರೆ ಆಗ ಅವರು ಇನ್ನೆಷ್ಟು ಪ್ರಶ್ನೆಗಳನ್ನು ಈ ಮಂತ್ರಿವರ್ಯರ ಸಂಚರಣೆ ಬಗ್ಗೆ ತರುತ್ತಾರೋ ನನಗದು ತಿಳಿಯದು. ಇಂಥ ದೊಡ್ಡ ರಾಜ್ಯದಲ್ಲಿ ಮಂತ್ರಿಗಳು ತಿರುಗಾಡುವುದಕ್ಕೂ ಸಹ ಆಗಲಾರದು. ಆದುದರಿಂದ ಈಗ ನಮ್ಮ ಮೈಸೂರು ಹೇಗೆ ಒಂದು ರಾಮರಾಜ್ಯವಾಗಿದೆಯೋ ಅದೇ ರೀತಿಯಾಗಿ ಅದು ಇನ್ನು ಮುಂದಕ್ಕೂ ಇದ್ದುಕೊಂಡು ಹೋಗುವಂತೆ ಸರ್ವರೂ ಒಂದು ತೀರ್ಮಾನಕ್ಕೆ ಬಂದು ಮೈಸೂರನ್ನು ಮೈಸೂರಾಗಿ ಉಳಿಸಬೇಕೇ ಹೊರತು ಇದನ್ನು ಹಾಳುಮಾಡುವುದಕ್ಕೆ ಮನಸ್ಸು ಮಾಡಬಾರದು ಎಂದು ತಿಳಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಮಾನ್ಯಅಧ್ಯಕ್ಷರೇ ಮತ್ತು ಮಾನ್ಯ ಸಭಾಸದರೇ: ಮೈಸೂರು ಸಂಸ್ಥಾನದ ಇತಿಹಾಸದಲ್ಲಿ ಮತ್ತು ಮೈಸೂರು ಸಂಸ್ಥಾನದ ಶಾಸನಾಂಕಗಳ ಇತಿಹಾಸದಲ್ಲಿ ಒಂದು ಅತ್ಯಂತ ಮಹತ್ವದ ವಿಷಯವನ್ನು ಸಭೆಯು ಚರ್ಚೆಮಾಡುತ್ತಿದೆ.

Sri A. V. NARASIMHA REDDY (Bangalore South).—On a point of information. At the rate at which our friends are going on in their speeches, I am afraid the days that are allotted for discussion of this report will be insufficient. Therefore, I would like to know from the Speaker whether any more days will be allotted for this discussion or whether he will be able to fix up time for each member to speak.

Mr. SPEAKER.—As it is, it is programmed to discuss this matter for four days. I think we will be able to conclude within that period and if the House so desires, we will restrict the time, because afterwards we will have no time; we will have to finish everything relating to the Budget by the 30th of this month. And we cannot postpone this business.

Sri J. MOHAMED IMAM.—I don't approve of the restriction of time, on account of the importance of the subject. We will take four days. If necessary, we will have one or two days more after the discusions relating to the Budget are over, becaues generally on such matters I do not want any restriction to be placed.

Mr. SPEAKER.—In consultation with the Leader of the House, I will be able to say. I would request Hon'ble Members not to repeat the statements already made. That would save the time of the House.

11 A.M.

ಶ್ರೀ ಎಸ್. ಗೋಪಾಲಗೌಡ.—ಈ ಸಭೆ ಶೇಷಾದ್ರಿ ಸಮಿತಿಯವರ ಅಂಕಿ ಅಂಶಗಳ ಸಂಗ್ರಹ ವರದಿಯನ್ನು ಚರ್ಚಿಸುತ್ತಿರುವುದನ್ನು ಮೈಸೂರು ಮತ್ತು ನೆರೆಯ ಕನ್ನಡ ಪ್ರದೇಶಗಳ ಜನರು ಅತ್ಯಂತ ಕುತೂಹಲ ಮತ್ತು ಆಕಾಂಕ್ಷೆಯಿಂದ ನಿರೀಕ್ಷಿಸುತ್ತಿದ್ದಾರೆ. ಈ ಸಭೆಯ ಅಭಿಪ್ರಾಯ ಮತ್ತು ಅಭಿಮತಗಳು ಎರಡು ಕೋಟಿ ಕನ್ನಡಿಗರ ಭವಿಷ್ಯವನ್ನು ರೂಪಿಸುವುದಕ್ಕೆ ಸಹಾಯಕವಾಗಬೇಕು. ಈ ಸಂದರ್ಭದಲ್ಲಿ ಮೈಸೂರು ಸಂಸ್ಥಾನದ ಹೊಣೆ ಅತ್ಯಂತ ಮಹತ್ವದ್ದಾಗಿದೆ. ಈ ಶೇಷಾದ್ರಿ ಸಮಿತಿಯವರ ವರದಿ ಕರ್ನಾಟಕ ಪ್ರಾಂತ ನಿರ್ಮಾಣಕ್ಕೆ ಅನುಕೂಲವಾಗಿದೆಯೋ ಅಥವಾ ಪ್ರತಿಕೂಲವಾಗಿದೆಯೋ ಎಂಬ ಅಂಶವನ್ನು ಮಾತ್ರ ನಾವು ಇಲ್ಲಿ ಚರ್ಚಿಸುತ್ತಿಲ್ಲ. ಅಂಕಿ ಅಂಶಗಳಿಲ್ಲದೆ ಇಂಥ ಒಂದು ಮಹತ್ವದ ವಿಷಯದ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸುವುದರಲ್ಲಿ ಅಷ್ಟು ಸಮಂಜಸತೆಯಿಲ್ಲವೆಂದು ಈ ಒಂದು ಕಾರಣದಿಂದ ಮಾತ್ರ ಇಂಥ ಒಂದು ಸಮಿತಿಯ ಅಗತ್ಯವನ್ನು ಕಂಡು ಈ ಸಮಿತಿಯನ್ನು ರಚಿಸಿದರೆಂದು ನಾನು ಅಭಿಪ್ರಾಯಪಡುತ್ತೇನೆ. ಮೊದಲನೆಯದಾಗಿ, ನಮ್ಮ ದೇಶದ ಐತಿಹಾಸಿಕ ಹಿನ್ನೆಲೆಯನ್ನು ನಾವು ಈ ಸಂಬಂಧದಲ್ಲಿ ಸ್ಮರಿಸಿಕೊಳ್ಳಬೇಕಾದುದು ಮತ್ತು ಆ ಸ್ಮರಣೆಯನ್ನು ನಾವು ಮಾತನಾಡುವಾಗ ನಮ್ಮ ದೃಷ್ಟಿಪಥದಲ್ಲಿಟ್ಟುಕೊಳ್ಳಬೇಕಾದುದು ಅತ್ಯಂತ ಸೂಕ್ತ. ಈ ದೇಶದ ಇತಿಹಾಸದಲ್ಲಿ, ಸ್ವಾತಂತ್ರ್ಯ ಬಂದನಂತರದಲ್ಲಿ ದೇಶದಲ್ಲಿ ಎಲ್ಲೋ ಕಟ್ಟುಗಳ ಪುನರ್ವಿಗಂಡಣೆಗಳಾದವು. ಆದರೆ ಆ ಕಾರ್ಯ ಒಂದು ಘಟ್ಟಕ್ಕೆ ಬಂದು ಅಲ್ಲಿಗೇ ನಿಂತು ಹೋದುದು ನಮ್ಮೆಲ್ಲರಿಗೂ ಜ್ಞಾಪಕವಿದೆ. ಪುನಃ ನಮ್ಮ ದೇಶದ ಪ್ರಾಂತಗಳ ಪುನರ್ನಿರ್ಮಾಣವಾಗಬೇಕೆಂಬ ಅಭಿಪ್ರಾಯದಲ್ಲಿ ಒಮ್ಮತ ಬಂದು ಕೇಂದ್ರ ಸರ್ಕಾರದವರು ಫಜಲಾಲಿಯವರ ಅಧ್ಯಕ್ಷತೆಯಲ್ಲಿ ಒಂದು ಪ್ರಾಂತಗಳ ಪುನರ್ವಿಂಗಡಣಾ ಸಮಿತಿಯನ್ನು ರಚಿಸಿ, ಆ ಸಮಿತಿಯವರು ದೇಶಾದ್ಯಂತ ಪ್ರವಾಸಮಾಡಿ, ಅಂಕಿ ಅಂಶಗಳನ್ನು ಸಂಗ್ರಹಿಸಿ ಇಷ್ಟರಲ್ಲೇ ಈ ವಿಷಯದ ಮೇಲೆ ತಮ್ಮ ವರದಿಯನ್ನು ಕೊಡುವವರಿದ್ದಾರೆ. ಇದನ್ನು ದೇಶ ಬಹಳ ಕುತೂಹಲದಿಂದ ನಿರೀಕ್ಷಿಸುತ್ತಿದೆ. ಈ ಸಂದರ್ಭದಲ್ಲಿ ಮೈಸೂರಿನಲ್ಲಿ ಶೇಷಾದ್ರಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚನೆಯಾಗಿ ಈಗ ಆ ಸಮಿತಿಯ ವರದಿಯಮೇಲೆ ಚರ್ಚಿಸುತ್ತಿದ್ದೇವೆ.

ಈ ಸಂದರ್ಭದಲ್ಲಿ ನಾವು ಮತ್ತೊಂದು ಮುಖ್ಯ ಅಂಶವನ್ನು ಗಣನೆಗೆ ತೆಗೆದುಕೊಳ್ಳಬೇಕಾದುದು ಭಾಷಾವಾರು ಪ್ರಾಂತ್ಯರಚನೆಯ ಇತಿಹಾಸ. ಈ ಭಾಷಾವಾರು ಪ್ರಾಂತ್ಯರಚನೆ ಸುಮಾರು 1917ನೆಯ ಇಸವಿಯ ಲಾಗಾಯ್ತು ನಮ್ಮ ದೇಶದ ರಾಜಕಾರಣಿಗಳ ಹಾಗೂ ಮುಖಂಡರುಗಳ ಗಮನವನ್ನು ಸೆಳೆದಿತ್ತು. 1920ರಲ್ಲಿ ಭಾಷೆಯ ಆಧಾರದ ಮೇಲೆ ಕಾಂಗ್ರೆಸ್ ಸಮಿತಿಗಳ ರಚನೆಯಾಯಿತು. ಆಗಲೇ ಕರ್ನಾಟಕ ಪ್ರಾದೇಶಿಕ ಕಾಂಗ್ರೆಸ್ ಸಮಿತಿ ಅಸ್ತಿತ್ವಕ್ಕೆ ಬಂತು.

ಅನಂತರ 1921ರಲ್ಲಿ ಕಾಂಗ್ರೆಸ್ಸು ಈ ತತ್ವವನ್ನೊಪ್ಪಿಕೊಂಡು ತನ್ನ ನಿರ್ಣಯವನ್ನು ದೇಶದ ಮುಂದಿಟ್ಟಿತು. ಹಾಗೆಯೇ ಈ ಭಾಷಾವಾರು ಪ್ರಾಂತ್ಯ ರಚನೆಯ ಹೋರಾಟ ಮತ್ತು ಜನತೆಯ ಸಂಘಟನೆ, ಸ್ವಾತಂತ್ರ್ಯ ಸಂಘಟನೆಯೊಡನೆ ಮುಂದುವರಿದುಕೊಂಡು ಬಂತು. ಅದಾದಮೇಲೆ ಕಾಂಗ್ರೆಸ್ಸು ತನ್ನ ಚುನಾವಣಾ ಪ್ರಣಾಳಿಕೆಯಲ್ಲಿಯೂ ಕೂಡ ಭಾಷಾವಾರು ಪ್ರಾಂತ್ಯ ರಚನೆಯ ತತ್ವವನ್ನೊಪ್ಪಿಕೊಂಡು ಜನತೆಗೆ ಆಶ್ವಾಸನೆ ಕೊಟ್ಟಿತ್ತು. ಹೀಗೆ ಈ ದೇಶದ ಪುನರ್ವಿಂಗಡಣೆ ಭಾಷೆಯ ಆಧಾರದಮೇಲೆ ಆಗಬೇಕೆಂಬ ಅಭಿಪ್ರಾಯದ ಬಗ್ಗೆ ದೇಶದಲ್ಲಿ ಸಾಕಷ್ಟು ಪುರಸ್ಕಾರ ದೊರೆಯಿತು. ಈ ತತ್ವದ ಆಧಾರದಮೇಲೆ ಆಂಧ್ರ ಪ್ರಾಂತ್ಯ ಅಸ್ತಿತ್ವಕ್ಕೆ ಬಂದಿದೆಯೆಂಬುದನ್ನು ನಾವು ತಿಳಿದುಕೊಂಡಿದ್ದೇವೆ. . . .

Sri A. V. NARASIMHA REDDY.—On a point of information from my friend. ಕಾಂಗ್ರೆಸ್ಸಿನ ಚುನಾವಣಾ ಪ್ರಣಾಳಿಕೆಯಲ್ಲಿ ಈ ಅಂಶವನ್ನು ಒಪ್ಪಿಕೊಂಡಿದ್ದರು ಎಂದು ಹೇಳಿದಿರಿ. ಯಾವ ಚುನಾವಣಾ ಪ್ರಣಾಳಿಕೆಯಲ್ಲಿ ಎಂಬುದನ್ನು ಹೇಳುತ್ತೀರಾ ?

Sri S. GOPALA GOWDA.—I will tell you. (The Hon'ble Member was searching for the information).

Sri J. MOHAMED IMAM.—In the election manifesto of the Congress, the creation of the linguistic provinces was one of the things mentioned.

Sri B. MADHAVACHAR.—I will read the relevant information required by the Hon'ble Member, if you will permit, Sir.

Mr. SPEAKER.—Please pass on the information to Sri Gopala Gowda.

Sri. S. GOPALA GOWDA.—(Reading from the extracts passed on to him by Sri J. Mohamed Imam.)

> "A demand for distribution of provinces on linguistic basis has been persistently made in the South and the West of India. The Congress expressed itself in favour of linguistic provinces many years ago. A decision on this question ultimately depends on the wishes of the people concerned. While linguistic regions have undoubtedly a certain cultural and other importance, there are other factors also such as economic, administrative and financial which have to be taken into consideration. Where such a demand represents the agreed views of the pople concerned, the necessary steps prescribed by the Constitution including the appointment of a Boundary Commission should be taken,"

ಹೀಗೆ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದೆ ಮತ್ತು ಈ ತತ್ವವನ್ನು ಕಾಂಗ್ರೆಸ್ಸು ಒಪ್ಪಿಕೊಂಡು ಪ್ರತಿಪಾದಿಸಿಕೊಂಡು ಬಂದಿದೆ.

ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—ಕಾಂಗ್ರೆಸ್ ಚುನಾವಣೆ ವಿಚಾರ ಗೊತ್ತಿದೆ. ಅವರ ಪಕ್ಷದ ಚುನಾವಣಾ ಪ್ರಣಾಳಿಕೆ ಏನು ಎಂಬುದನ್ನು ಹೇಳಲಿ.

ಶ್ರೀ ಎಸ್. ಗೋಪಾಲಗೌಡ.—ಎಲ್ಲವನ್ನೂ ಹೇಳುತ್ತೇನೆ. ಭಾಷಾವಾರು ತತ್ವವನ್ನೊಪ್ಪಿಕೊಂಡು ಭಾಷೆಯ ಆಧಾರದಮೇಲೆ ಆಂಧ್ರ ಪ್ರಾಂತ್ಯವನ್ನು ಈಗಾಗಲೇ ನಾವು ನಿರ್ಮಾಣ ಮಾಡಿದ್ದೇವೆ. ಅದೇ ಕಾಲದಲ್ಲಿ ಕರ್ನಾಟಕ ಪ್ರಾಂತ್ಯವೂ ಕೂಡ ಅಸ್ತಿತ್ವಕ್ಕೆ ಬರಬೇಕಾಗಿತ್ತು. ಕಾರಣಾಂತರಗಳಿಂದ ಇದು ಮುಂದೆ ಹಾಕಲ್ಪಟ್ಟಿತು. ದಕ್ಷಿಣ ದೇಶದಲ್ಲಿ ಪ್ರಮುಖವಾದ ನಾಲ್ಕು ಭಾಷೆಗಳಿವೆ. ಅವು ಮಲೆಯಾಳಿ, ತಮಿಳು, ತೆಲುಗು ಮತ್ತು ಕನ್ನಡ. ಇವು ವಸ್ತುತಃ ಒಂದೇ ತಾಯಿಯ ನಾಲ್ಕು ಮಕ್ಕಳಿದ್ದಂತಿರುವ ಭಾಷೆಗಳು. ನಾವು ಭಾಷೆಗಳ ಇತಿಹಾಸವನ್ನು ಹುಡುಕಿ ನೋಡಿದಾಗ ಇವು ಅತ್ಯಂತ ಪುರಾತನ ಭಾಷೆಗಳೆಂಬುದು ಕೂಡ ನಮಗೆ ತಿಳಿದುಬರುತ್ತದೆ. ಈ ಭಾಷೆಗಳು ತಮ್ಮದೇ ಆದ ಒಂದು ಸಂಸ್ಕೃತಿಯನ್ನು ಕೂಡ ಕಾಪಾಡಿಕೊಂಡು ಬಂದಿವೆ. ದಕ್ಷಿಣ ಇಂಡಿಯಾ ದೇಶದ ಇತಿಹಾಸ ಬಹಳ ಪುರಾತನವಾಗಿರುವ ಇತಿಹಾಸವಾಗಿದೆ. ಆರ್ಯರು ಈ ದಕ್ಷಿಣ ದೇಶಕ್ಕೆ ಬಂದ ಕಾಲವನ್ನು ಸುಮಾರು ಅಗಸ್ತ್ಯರು ಬಂದ ಕಾಲಕ್ಕೆ ಇತಿಹಾಸಕಾರರು ಹುಡುಕಿ ತೋರಿಸುತ್ತಾರೆ. ಅನಂತರದಲ್ಲಿ ಈ ಪ್ರದೇಶವನ್ನು ಜೈನರು ಮತ್ತು ಬೌದ್ಧರು ಆಳಿಕೊಂಡು ಬಂದದ್ದನ್ನು ನೋಡುತ್ತೇವೆ. ಕನ್ನಡ ಮತ್ತು ಇತರ ದಕ್ಷಿಣ ದೇಶದ ಭಾಷೆಗಳಿಗೆ ಜೈನರೂ, ಬೌದ್ಧರೂ ಹೆಚ್ಚು ಶ್ರಮಿಸಿದ್ದಾರೆಂಬುದು ನಮಗೆ ಕಂಡುಬರುತ್ತದೆ. ಹೀಗೆ ಈ ಭಾಷೆಗಳು ತಮ್ಮ ಅಸ್ತಿತ್ವವನ್ನು ಇದುವರೆಗೆ ಕಾಪಾಡಿಕೊಂಡುಬಂದವು. ಅನಂತರ ಬ್ರಿಟಿಷರು ನಮ್ಮ ದೇಶದಲ್ಲಿ ತಮ್ಮ ಸಂಸ್ಕೃತಿಯನ್ನು ಸ್ಥಾಪನೆ ಮಾಡಿದಮೇಲೆ ನಮ್ಮ ದೇಶದ ಭಾಷೆಗಳಿಗೆ, ಸಂಸ್ಕೃತಿಗೆ ಅಥವಾ ದೇಶೀಯ ಕಲೆ, ಸಾಹಿತ್ಯ ಇವುಗಳಿಗೆ ಹೆಚ್ಚಿನ ಪ್ರಾಶಸ್ತ್ಯ ದೊರೆಯಲಿಲ್ಲ. ಅಲ್ಲಿಂದ ಸುಮಾರು 150-200 ವರ್ಷಕಾಲ ಅಂಧಕಾರದಲ್ಲಿ ಮುಳುಗಿಹೋಗಿತ್ತು. ಪುರಾಣಕಾಲಕ್ಕೂ ಬ್ರಿಟಿಷರ ಆಡಳಿತಕಾಲಕ್ಕೂ ಮಧ್ಯೆ ಅನೇಕ ರಾಜ್ಯಗಳು ಈ ಪ್ರದೇಶದಲ್ಲಿ ಹುಟ್ಟಿ, ಬೆಳೆದು ಅಳಿದುಹೋದ ಇತಿಹಾಸ ನಮ್ಮ ಕಣ್ಣುಮುಂದೆ ಇದೆ. ಈಗ ನಾವು ಪುನಃ ಸ್ವಾತಂತ್ರ್ಯವನ್ನು ಪಡೆದು ಈ ದಿನ ರಾಜ್ಯಗಳನ್ನು ಭದ್ರವಾದ ಬುನಾದಿಯ ಆಧಾರದ ಮೇಲೆ ಪುನರ್ವಿಂಗಡಣೆ ಮಾಡತಕ್ಕ ಒಂದು ಮಹತ್ತರ ಕಾರ್ಯದ ಜವಾಬ್ದಾರಿಯನ್ನು ಹೊತ್ತಿದ್ದೇವೆ. ಈ ಕಾರ್ಯದಲ್ಲಿ ಇನ್ನೂ ನಾವು ಸಾಧಿಸಬೇಕಾದುದು ಮಹತ್ತರವಾಗಿದೆ. ಇದೇ ಸಂದರ್ಭದಲ್ಲಿ ಈ ಕರ್ಣಾಟಕ ಪ್ರಾಂತ್ಯವಾಗಬೇಕೆಂಬ ಒಂದು ಹೋರಾಟ ಅನೇಕ ವರ್ಷಗಳಿಂದ ನಡೆದುಕೊಂಡು ಬರುತ್ತಲೇ ಇದೆ.

ಈ ಸಂದರ್ಭದಲ್ಲಿ ಫಸಲಾಲಿ ಸಮಿತಿಯವರು ಮೈಸೂರಿಗೆ ಆಗಮಿಸಿದ್ದಾಗ ಮೈಸೂರಿನವರು ಅನೇಕರು ಅವರ ಸಂದರ್ಶನ ಮಾಡಿದ್ದಾರೆ. ಪ್ರಜಾ ಸೋಷಿಯಲಿಸ್ಟ್ ಪಾರ್ಟಿಯವರು ಒಂದು ಮನವಿಯನ್ನು ಅವರಿಗೆ ಸಲ್ಲಿಸಿದರು. ಹಾಗೆಯೇ Communist Party ಯವರು ಕೂಡ ಒಂದು ಮನವಿಯನ್ನು ಸಲ್ಲಿಸಿದ್ದಾರೆ. ಆದರೆ ಮೈಸೂರು ಕಾಂಗ್ರೆಸ್ಸಿನವರು ಮಾತ್ರ ಅವರಿಗೆ ತಮ್ಮ ಅಭಿಪ್ರಾಯವನ್ನು ಮನವಿ

(ಶ್ರೀ ಎಸ್. ಗೋಪಾಲಗೌಡ.)

ರೂಪದಲ್ಲಿ ಸಲ್ಲಿಸಲಿಲ್ಲ. ಈ ಸಂದರ್ಭದಲ್ಲಿ ಪ್ರಜಾ ಸೋಷಿಯಲಿಸ್ಟ್ ಪಾರ್ಟಿ ಯಾವ ನಿಲುವನ್ನು ಹೊಂದಿದೆ ಎಂಬುದನ್ನು ನಾನು ಇಲ್ಲಿ ಉದಹರಿಸಲಿಚ್ಛಿಸುತ್ತೇನೆ.

"The Praja Socialist Party of India stands by the principle of Linguistic Provinces. The Party Convention held at Betul in June 1953 welcomed the decision to appoint this Commission and emphasised that the redrawing of the administrative map on the Linguistic basis should be confines to the major languages enumerated in the 8th schedule to the Constitution.

Subsequently, the Party Conference held at Allahabad in December 1953, affirmed the above and mentioned the following as its Governmental Programme in regard to this matter:—

"The Office of the Governor and the Rajpramukh shall be abolished and the minimum liaison that may be required to be maintained between the Union and the States shall be discharged by Officers for this limited purpose. The present classification of States into A, B, and C, categories shall be removed and all States shall enjoy equal powers. Territorial adjustments shall be made on the basis of language, economic viability and good administration."

ಈ ಒಂದು ನಿಲವಿನ ಆಧಾರದಮೇಲೆ ಕಳೆದ ಮಾರ್ಚಿಯಲ್ಲಿ ಚನ್ನಪಟ್ಟಣದಲ್ಲಿ ಸೇರಿದ conferenceನಲ್ಲಿ ಆದ ನಿರ್ಣಯದ ಆಧಾರದಮೇಲೆ ಮೈಸೂರು ಸಂಸ್ಥಾನದ ಪ್ರಜಾ ಸೋಷಿಯಲಿಸ್ಟ್ ಪಾರ್ಟಿಯವರು ಭಾರತದ ಇತರ ಸೋಷಿಯಲಿಸ್ಟ್ ಪಾರ್ಟಿಗಳೊಡನೆ ಸೇರಿ ಈ ಒಂದು ವಿಷಯದ ಬಗ್ಗೆ ಒಂದು memorandumನ್ನು ಫಸಲಾಲಿ ಸಮಿತಿಯವರಿಗೆ ಅರ್ಪಿಸಿದ್ದಾರೆ. ಅದರಲ್ಲಿ ಕೆಲವು ಮುಖ್ಯ ಅಂಶಗಳನ್ನು ಮಾತ್ರ ನಾನು ಈ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ಸಂದರ್ಭದಲ್ಲಿ 1928ನೇ ಇಸವಿಯಲ್ಲಿ ನೆಹರೂಅವರ ನೇತೃತ್ವದಲ್ಲಿ ರಚಿಸಲ್ಪಟ್ಟ ಸಮಿತಿ ಯಾವ ಅಭಿಪ್ರಾಯವನ್ನು ಪಟ್ಟಿದೆ ಎಂಬುದನ್ನು ಈ ಸಭೆಯಗಮನಕ್ಕೆ ತರಲಿಚ್ಛಿಸುತ್ತೇನೆ.

"What principles should govern this redistribution? Partly geographical and partly economical and financial but the main consideration must necessarily be the wishes of the people and the linguistic unity of the area concerned. It is well recognised that rapid progress in education as well as in general culture and in most departments of life depends on language. if a foreign language is the medium of instruction, business and affairs and the life of the country must necessarily be stunted. No democracy can exist where a foreign language is used for these purposes.' A democracy must be well informed and must be able to understand and follow public affairs in order to take an effective part in them. It is inconceivable that a democracy can do this if a foreign language is largely used. It becomes essential therefore, to conduct the business and politics of a country in a language which is understood by the masses. So far as the provinces are concerned this must be the provincial language."

"If a province has to educate itself and do its daily work through the medium of its own language it must necessarily be a linguistic area. If it happens to be a polyglot area, difficulties will continually arise and the media of instruction and work will be two or even more languages. Hence it becomes most desirable for provinces to be regrouped on a linguistic basis. Language as a rule corresponds with a special variety of culture, tradition and literature. In a linguistic area, all these factors will help in general progress of the province.

The National Congress recognised this linguistic principle 8 years ago and since then, so far as the Congress Machinery is concerned, India has been divided into Linguistic provinces.

Another principle which must govern the redistribution of a province is the *wishes of the people concerned*. We, who talk of self-determination on a larger scale cannot in reason deny it to a smaller area, provided of course this does not conflict with any

other important principle or vital question. The mere fact that the people living in a particular area feel that they are a unit and desire to develop their culture is an important consideration even though there may be no sufficient historical or cultural jurisdiction for their demand. Sentiment in such matters is often more important than fact.

Thus we see that the two most important considerations in rearranging provinces are the linguistic principle and the wishes of the majority of the people. A third consideration though not of the same importance is administrative convenience, which would include the geographical position, the economic resources and the financial stability of the area concerned. But administrative convenience is often a matter of arrangement and must as a rule bow to the wishes of the people."

At page 64 of the report, the case of Karnatak is set out and recommended as the most feasible even at that time. It states :—

"The case for the Karnatak was placed before us by a representative of the Karnatak Unification Sangh and the Karnatak Provincial Congress Committee. It had been ably prepared with a wealth of information, historical, cultural, and statistical. All our questions were answered satisfactorily and in our opinion a strong *prima facie* case for unification and the formation of the Karnatak as a separate province was made.

Parts of the Karnatak lie in Indian States, notably Mysore, and there are obvious practical difficulties in the way of uniting these with the rest. It might also not be convenient to unite the small islands of the Karnatak on the other side of the Mysore Territory as these would be cut off from the Karnatak proper by Mysore. But even so, a sufficiently large area remains.

We are informed that the demand for unification came from the vast majority of the population, if not practically all. There was no Hindu-Muslim problem but there was a Brahmin-Non-Brahmin problem, although this did not affect the question of unification much. There was no organised opposition although a small number of Brahmins were opposed. On behalf of the Maharastrians in some of the border districts a fear was expressed that their language might suffer, but safeguards for this might be provided for.

Financially, the position of the Karnatak was very strong and even at present there was a considerable surplus in the British part of the Karnatak."

In the General Elections of 1936-37 the Congress which was leading the fight for Swaraj placed before the people of the country its election manifesto and in it the demand for Linguistic Provinces was once again made an issue. Having succeeded in the elections in most provinces and even formed Governments therein, the Congress Ministers in Madras and Bombay, with the approval of the Congress Working Committee, moved and got passed in the respective legislatures in 1937-38 recommending the formation of Linguistic Provinces and particular mention was made of Karnatak in both places.

In the meanwhile for many years prior to that date the Karnatak Unification League was holding annual conferences from time to time in different parts of Karnatak making the demand for a Karnatak Province. Its session held in May 1938, at Darwar sent a deputation to the Congress Working Committee in September 1938 to press the Demand. Along with this deputation there were deputations also from Andhra and Kerala. The following was the resolution passed by the Congress Working Committee which is a sacred promise made to the people of this country, in particular to the people of the Karnatak. It said :—

"Having heard the views of the deputation of the Andhra

(ಶ್ರೀ ಎಸ್. ಗೋಪಾಲಗೌಡ.)

Provincial Congress Committee, the Andhra Mahasaba, the Karnatak Unification Committee, the Karnatak Provincial Congress Committee and the Kerala Congress Provincial Committee on this question of redistribution of provinces in India on a linguistic basis for administrative purposes, this Committee declares that the resolutions of the Madras Legislature on the Linguistic Provinces and of the Bombay Legislature on the separation of the Karnataka Province were passed with the previous sanction of the Parliamentary Sub-Committee and full approval of this Committee. This Committee desires to assure the people of the areas concerned that the solution of the question would be undertaken as a part of the future scheme of the Government of India, as soon as the Congress has power to do so and calls upon the people of these areas to desist from any further agitation in this behalf."

ಇಷ್ಟು ಆಶ್ವಾಸನಗಳನ್ನು ಕಾಂಗ್ರೆಸ್ ಪಾರ್ಟಿಯವರು ಕಳೆದ ಅನೇಕ ವರ್ಷಗಳಿಂದ ಕೊಟ್ಟಿದೆ ಎಂಬುದನ್ನು ನಾವು ಯಾರೂ ಮರೆಯಲಾರೆವು. ಇನ್ನೊಂದು ಮಾತನ್ನು ತಮ್ಮ ಗಮನಕ್ಕೆ ತರಬೇಕು ಎಂದು ಇದ್ದೇನೆ. ಅದು ಸರ್ದಾರ್ ವಲ್ಲಭಭಾಯ್ ಪಟೇಲ್‌ರು ಕರ್ಣಾಟಕದ ಬಗ್ಗೆ ಆಡಿರತಕ್ಕಂಥ ಮಾತು.

"Your case is strong. Even the British Karnatak area in population and size is larger than the Mysore State and in population, twice the size of Sind and about three times the size of North-West Frontier Province. It would be about 20 times the size of Coorg and about 40 times its population. If we take these areas the Kannada speaking unit would be a formidable linguistic unit in India. If India is to achieve rapid progress the linguistic areas must be organised into provincial units. I assure you, you will not have to wait long to see a United Karnatak rising out of the scattered Kannada-speaking areas with a Provincial Government, a University and a proud provincial life of its own."

"In the Election Manifesto issued by the Congress at the General Election of 1945-46, the formation of Linguistic Provinces was mentioned as an important plank. It started :—

"The Congress had stood for full opportunities for the people as a whole to grow and develop according to their own wishes. It has also stood for the freedom of each group and territorial area within the nation to develop its art and culture within the larger framework and for this purpose such territorial areas or provinces should be constituted, as far as possible, on linguistic and cultural basis."

ಈ ಸಂದರ್ಭದಲ್ಲಿ ಶ್ರೀಮಾನ್ ಕೆ. ಹನುಮಂತಯ್ಯನವರು ಕಳೆದ ಅಧಿವೇಶನದಲ್ಲಿ ಅವರು ಆಯವ್ಯಯವನ್ನು ಮಂಡಿಸುತ್ತಾ ಮಾಡಿದ ಭಾಷಣದಲ್ಲಿ ಪ್ರಾಂತಗಳ ಪುನರ್ವಿಂಗಡನೆ ಬಹಳ ಅಗತ್ಯ ಎಂಬ ಅಂಶದ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅದನ್ನೂ ಕೂಡ ನಾನು ಈ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ.

"The Government of India have set up a High Power Commission to make proposals for the reorganisation of States in India. I welcome the appointment of the Commission. India is now divided into 28 States (10 Part 'A' States, 8 Part 'B' States and 10 Part 'C' States). These divisions are based more upon historical accidents than upon well-considered principles of administrative convenience and cultural affinities. Besides, the three classifications contain anomalies in the matter of size, status, power and functions."

11-30 A.M.

". . . . Our Constitution is based on the principle of EQUALITY. In fact, in the preamble to the Constitution, it is written that "WE, THE PEOPLE OF INDIA, having solemnly resolved to constitute India into a SOVEREIGN DEMOCRATIC REPUBLIC and to secure to all its citizens. . . . EQUALITY of status and of opportunity, and to promote among them all FRATERNITY,

assuring the dignity of the individual and the unity of the Nation. . . .'' The very alphabetical nomenclature given to these States speaks of their inequality. Uttar Pradesh has about 6½ crores of people as against Bilaspur which has only about 1½ lakhs of people. Uttar Pradesh has an area of 1,12,523 square miles and Bilaspur State only 453 square miles. The population of Uttar Pradesh is almost equal to the population of 8 Part "B" States, *viz.*, Hyderabad, Mysore, Madhya Bharath, Pepsu, Rajasthan, Sourashtra and Travancore-Cochin. The population of all the 10 Part 'C' States put together amounts to less than one crore and is less than the population of a State like Mysore. The territories in India must be re-distributed on the basis of equality and administrative convenience to the extent possible. One cannot ignore the importance of language in administrative convenience. The alphabetical categorization of States must be done away with. Equality of status must be established. It is superfluous to reiterate that we are all of one mind that nothing should adversely affect Indian unity and no proposal which jeopardizes our hard-won freedom and unity must be countenanced.

Mysore State is a composite State. This composite character is our happy heritage. It is our duty to preserve it. Historical processes are expanding Mysore State. The people of the adjoining areas of their own free will are anxious to join Mysore State. We extend to them all, irrespective of the language they speak, a hearty welcome. After all, we are citizens of the same motherland, India, and it would be an act of discourtesy not to welcome them. It may even be said that our patriotism and fraternal feelings are limited if we do not keep our doors open for our own compatriots to come. Ours is not a policy of aggressive expansionisms, but one of welcoming those that desire to join us.''

ಈ ವರ್ಷದ ಭಾಷಣದಲ್ಲಿ ಪುನಃ ಈ ವಿಷಯದಮೇಲೆ ಮುಖ್ಯಮಂತ್ರಿಗಳು ಈ ರೀತಿಯಾಗಿ ಅಭಿಪ್ರಾಯ ಪಟ್ಟಿದ್ದಾರೆ.

"States reorganisation is probably the most difficult question that we are facing during the year 1955. I have personally made my views on this problem clear in my last Budget speech. About a crore of people in the areas adjacent to Mysore State desire to join another crore of people in the State and form one administrative unit. You will therefore, see how big the problem is. I appeal to you to come to an unanimous decision in spite of there being now a certain amount of divergence of opinion on the subject. The Government is eagerly awaiting your discussion of the Fact-Finding Committee Report. I am sure your discussions will result in a correct lead being given not only to Government but also to the people of the State as a whole. Government have deliberately refrained from expressing their opinion so far in order to facilitate an unanimous move in the right direction.''

ಆದ್ದರಿಂದ ಈ ಸಭೆಯ ಜವಾಬ್ದಾರಿ ಮಾತ್ರಷ್ಟು ಹೆಚ್ಚಿದೆಯೆಂದು ಹೇಳಬಹುದು. ಮಾನ್ಯ ಸದಸ್ಯರು ಶೇಷಾದ್ರಿ ಸಮಿತಿಯವರ ವರದಿಯನ್ನು ಸಮೀಕ್ಷೆ ಮಾಡುವಾಗ ಮೈಸೂರು ಹಾಗೆಯೇ ಉಳಿಯತಕ್ಕದ್ದೇ ಉಚಿತವೆಂಬ ಅಭಿಪ್ರಾಯವನ್ನು ಪುಷ್ಟೀಕರಿಸುವ ಸಲುವಾಗಿ ಕೆಲವು ಅಂಶಗಳನ್ನು ಎತ್ತಿ ಆಡಿದ್ದಾರೆ. ಅವುಗಳ ಬಗ್ಗೆ ನಾನು ಕೆಲವು ವಿಷಯಗಳನ್ನು ಕುರಿತು ಹೇಳುವವನಾಗಿದ್ದೇನೆ.

ಪ್ರಾಂತ್ಯಗಳ ಪುನರ್ವಿಂಗಡಣೆಗೆ ಬರೀ ಆರ್ಥಿಕ ಅಂಶ ಒಂದೇ ಸಾಲದು ಎನ್ನುವುದು ಬಹಳ ಮುಖ್ಯವಾದದ್ದು. ಹೊರಗಡೆಯಿರುವ ಕನ್ನಡ ಪ್ರಾಂತಗಳು ಆರ್ಥಿಕವಾಗಿ ಶ್ರೀಮಾನ್ ಲಕ್ಕಪ್ಪನವರು ಹೇಳಿದ ಹಾಗೆ ಹಿಂದುಳಿದಿರುವ ಅಂಶ ನಿಜ. ಅವರು 'ಬಹಳ' ಎಂಬ ಶಬ್ದವನ್ನು ಉಪಯೋಗಿಸಿದರು. ಆದರೆ 'ಬಹಳ' ಎಂಬ ಶಬ್ದ ತುಂಬ 'Vague' ಆದುದು. ನನ್ನ ದೃಷ್ಟಿಯಲ್ಲಿ ಅವು 'ಬಹಳ ಹಿಂದುಳಿದಿವೆ' ಯೆಂದು ಹೇಳಿದ ಶಬ್ದ ಅಷ್ಟು ಸೂಕ್ತವಾಗಿ ತೋರಲಿಲ್ಲ. ಅಲ್ಲದೆ, ನಾನು ಮುಖ್ಯವಾಗಿ ಹೇಳುವುದೇನೆಂದರೆ, ಅದು ಸರ್ಪ್ಲಸ್ ಪ್ರದೇಶವೇ, ಡಿಫಿಸಿಟ್ ಪ್ರದೇಶವೇ ಎಂಬ ಪ್ರಶ್ನೆಯೇ ನಮ್ಮನ್ನು ಬಾಧಿಸಕೂಡದು. ಕಾರಣ, ಮೈಸೂರು ಸಂಸ್ಥಾನವೇ ಈ ಹೊತ್ತು 409 ಲಕ್ಷ ರೂಪಾಯಿಗಳ ಡಿಫಿಸಿಟ್ ಇಟ್ಟುಕೊಂಡಿದೆ. ಅಲ್ಲದೆ ಇಂಡಿಯಾ ದೇಶದಲ್ಲಿ ಈ ಹೊತ್ತು ಇರತಕ್ಕ ಪರಿಸ್ಥಿತಿಯನ್ನು ನೋಡುವುದಾದರೆ ಪಾರ್ಲಿಮೆಂಟಿನ ಬಡ್ಜೆಟ್ಟು ಮತ್ತು ಎಲ್ಲಾ ಪ್ರಾಂತಗಳ ಬಡ್ಜೆಟ್ಟುಗಳೂ ಕೊರತೆಯ ಬಡ್ಜೆಟ್ಟುಗಳೇ

(ಶ್ರೀ ಎಸ್. ಗೋಪಾಲಗೌಡ.)

ಆಗಿವೆ. ಆದ್ದರಿಂದ ಕರ್ಣಾಟಕದ ಜನರು ಒಂದು ಆಡಳಿತಕ್ಕೆ ಒಳಪಡಬೇಕೆ, ಬೇರೊಂದು ಪ್ರಾಂತ್ಯವನ್ನು ನಿರ್ಮಾಣಮಾಡಬೇಕೆ ಎನ್ನುವ ಸಂದರ್ಭದಲ್ಲಿ ಹಣದ ಪ್ರಶ್ನೆ ನಮ್ಮ ಮುಂದೆ ನಿಲ್ಲುವುದೇ ಇಲ್ಲ. ಏಕೆಂದರೆ, ಈ ಹೊತ್ತು ನಾವು ಹಣವನ್ನು ಹಂಚಿಕೊಳ್ಳುವುದಕ್ಕೆ ಮಾತ್ರ ನಿಂತಿಲ್ಲ. ಬಹು ಕಾಲ ಬದುಕಿ ಬಾಳುವುದಕ್ಕೆ ಅದೊಂದು ಸಾಧನವೇ ಹೊರತು ಅದೇ ಒಂದು ಗುರಿಯಲ್ಲ. ಕನ್ನಡ ಜನರು ಮೈಸೂರಿನೊಡನೆ ಸೇರುವುದಾದರೆ ಅಥವಾ ಮೈಸೂರು ಸೇರಿದ ಒಂದು ಕನ್ನಡ ಪ್ರಾಂತ್ಯವಾದರೆ ನಮ್ಮ ಆಶೋತ್ತರಗಳ ಮುಗಿದು ಅದೇ ಅಂತಿಮ ಗುರಿಯೆಂದು ನಾವು ಭಾವಿಸುವುದಿಲ್ಲ. ಆ ಪ್ರದೇಶದಲ್ಲಿರತಕ್ಕ ಜನರ ಬಾಳು ಹಸನಾಗಬೇಕಾದರೆ, ಅವರೂ ಮುಂದೆ ಬಾಳಿ ಬದುಕಿ ಅಭಿವೃದ್ಧಿಯಾಗಬೇಕಾದರೆ ಒಂದು ಪ್ರಾಂತ್ಯವಾಗುವುದರ ಅವಶ್ಯಕತೆಯಿದೆ. ಹಾಗೆ ಒಟ್ಟಿಗೆ ಇರಬೇಕೆಂಬುದಕ್ಕೆ ಎಲ್ಲ ಕಾರಣಗಳೂ ಇವೆ; ಚಾರಿತ್ರಿಕ ಹಿನ್ನೆಲೆಯಿದೆ; ಭಾಷೆಯ ತಳಹದಿಯಿದೆ; ಭಾಷಾ ಸಂಸ್ಕೃತಿಯಿದೆ. ಒಟ್ಟಿನಲ್ಲಿ-ಅವರೆಲ್ಲರೂ ಒಂದು ಎಂದು ಹೇಳುವುದಕ್ಕೆ ಸಕಾರಣಗಳಿವೆ.-

ಆದ್ದರಿಂದ ಇಲ್ಲಿ sentiment ಬಹಳ ಮುಖ್ಯವಾದದ್ದು. ನಾವು ಇಂಡಿಯಾ ದೇಶದ ಜನ ಮತ್ತು ಇಂಡಿಯಾ ರಾಷ್ಟ್ರದ ಬಗ್ಗೆ ಬಹಳ ಪ್ರೀತಿಯಿಂದಿದ್ದೇವೆ-ಎಂದರೆ, ರಾಷ್ಟ್ರಪ್ರೇಮವೆನ್ನುವುದು ಹಣದ ಮೇಲೆ, ಅಥವಾ ಇತರ ವಿಚಾರಗಳ ಮೇಲೆ ನಿಂತಿರತಕ್ಕ ಒಂದು ಭಾವವಲ್ಲ. ಈ ಹೊತ್ತು ಇಂಡಿಯಾ ದೇಶದ ಬಗ್ಗೆ ಅದರ ಸ್ವಾತಂತ್ರ್ಯಕ್ಕಾಗಿ ಜೀವ ಕೊಡುತ್ತೇವೆಂದರೆ ಆ ಭಾವ ಕೊಡುತ್ತದೆ. ಹಾಗೆಯೇ ಭಾಷೆಯೆನ್ನುವುದೂ ಕೂಡ. ಅದೂ ಭಾವಾತ್ಮಕವಾಗಿದೆ. ಅದು ಜೀವನದಲ್ಲಿ ಉಪಯುಕ್ತವಾದ ಅಂಶವಾದರೂ ಕೂಡ, ಅದರಲ್ಲಿ ಭಾವ ಮೂಡಿ ನಿಂತಿದೆ. ಆದ್ದರಿಂದ ಕನ್ನಡಕ್ಕೆ ತನ್ನದೇ ಆದ ಒಂದು ಪ್ರಾಂತ್ಯ ನಿರ್ಮಾಣವಾಗಲೇಬೇಕು, ಅದು ಉಳಿಯಬೇಕಾದರೆ ಬಾಳಬೇಕಾದರೆ. ಈ ವಿಷಯದಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲವೆಂದು ನಾನು ತಿಳಿದಿದ್ದೇನೆ.

ಆದ್ದರಿಂದ ಈ ಹೊತ್ತು ಹಣದ ಪ್ರಶ್ನೆ ಒಂದು ಪ್ರಶ್ನೆಯಾಗಿ ನಿಲ್ಲಲೇಬಾರದು. ಆದರೂ, ನಾನು ಮುಂದೆ ಅಂಕಿ ಅಂಶಗಳನ್ನು ಕೂಡ ಕೊಡತಕ್ಕವನಾಗಿದ್ದೇನೆ. ಅಂಕಿ ಅಂಶಗಳನ್ನು ಕೊಟ್ಟು, ಇತರ ಪ್ರದೇಶಗಳು ಮೈಸೂರು ಪ್ರದೇಶಕ್ಕಿಂತ ಹಣಕಾಸಿನ ವಿಷಯದಲ್ಲಿ, ಸಂಪತ್ತಿನ ಹೆಚ್ಚಳದ ವಿಷಯದಲ್ಲಿ, ಮುಂದೆ ಅಭಿವೃದ್ಧಿಯಾಗುವ ವಿಷಯದಲ್ಲಿ ಹಿಂದುಳಿದಿಲ್ಲವೆಂದು ನಿರ್ಧರಪಡಿಸಲು ಪ್ರಯತ್ನಿಸುತ್ತೇನೆ. ಆದರೆ ನಾನು ಮೊದಲೇ ಹೇಳಿದಂತೆ ಅದು ಮುಖ್ಯ ಪ್ರಶ್ನೆಯಾಗಿ ನಮ್ಮ ಮುಂದೆ ಬರಬಾರದು.

ಇನ್ನು ದೂರದ ಪ್ರಶ್ನೆಯನ್ನು ಹಿಡಿದು ಮಾತನಾಡುವುದಾದರೆ, ಅದೂ ಕೂಡ ಈ ನಾಗರಿಕ ಯುಗದಲ್ಲಿ ದೊಡ್ಡ ಪ್ರಶ್ನೆಯಾಗಿ ನಿಲ್ಲುವುದಿಲ್ಲ. ಈ ಹೊತ್ತು ಡೆಲ್ಲಿ ನೋಡೋಣ. ಅಲ್ಲಿ ನಮ್ಮ ಕೇಂದ್ರ ಸರ್ಕಾರವಿದೆ. ದೂರದ ಪ್ರಶ್ನೆ ತೆಗೆದುಕೊಂಡರೆ, ಕನ್ಯಾಕುಮಾರಿಯವರು ಡೆಲ್ಲಿಯ ವಿಷಯದಲ್ಲಿ ಯಾವ ಅಭಿಪ್ರಾಯ ತಾಳಬಹುದು! ಅವರು ಸಿಲೋನನ್ನೇ ಹತ್ತಿರವಿದೆಯೆಂದು ಸೇರಿಕೊಳ್ಳಬಹುದಲ್ಲವೆ! ಹಾಗಿದ್ದಮೇಲೆ, ಡೆಲ್ಲಿಗೆ ಅವರು ಮಾನ್ಯತೆ ಕೊಡುವುದೇಕೆ? ದೂರವೆಂದು ಹೇಳಿ ಡೆಲ್ಲಿಯನ್ನು ನಾಗಪುರಕ್ಕೆ ಬದಲಾಯಿಸಿದಾಗ ನಾವೂ ಬೆಂಗಳೂರನ್ನು ಬಳ್ಳಾರಿಗೆ ಬದಲಾಯಿಸುವ ಯೋಚನೆ ಮಾಡೋಣ. ಇದೆಲ್ಲಾ ನಾವು ಹೊಂದಿಕೊಂಡು ಹೋಗುವ ಮನೋಭಾವದಮೇಲೆ ನಿಂತಿರುವುದು. ಈ ಹೊತ್ತು ಡೆಲ್ಲಿಯ ಬಗ್ಗೆ ಅಸಮಾಧಾನಪಡುವುದೂ, ಅದು ಬಹಳ ದೂರದ ಕೇಂದ್ರವೆಂದು ಹೇಳುವುದೂ ಉಚಿತವಲ್ಲವೆಂದು ಹೇಳುವುದಾದರೆ, ಬೆಂಗಳೂರಿಗೂ ಬಿದರೆಯ ಕೊನೆಯಲ್ಲಿರುವ ಹಳ್ಳಿಗೂ 500 ಮೈಲಿಯಿದೆಯೆನ್ನುವುದಕ್ಕೂ ಅದು ಅನ್ವಯಿಸುತ್ತದೆ. ಮಾನ್ಯ ಸದಸ್ಯರು ದೂರದ ವಿಷಯವನ್ನು ಉತ್ಪ್ರೇಕ್ಷಿಸುತ್ತಾ ಹೋಗಿ ಮಂಗಳೂರಿಗೆ ಹೋಗಬೇಕಾದರೆ 600 ಮೈಲಿಯಾಗುತ್ತದೆಂದುಬಿಟ್ಟರು! ಚಿಕ್ಕಮಗಳೂರಿನಿಂದ ನೇರವಾಗಿ ಮಂಗಳೂರಿಗೆ ರೈಲ್ವೆಯಾದರೆ ಎಷ್ಟು ಹತ್ತಿರವಾಗುತ್ತದೆಂಬುದನ್ನು ಅವರು ಮರೆತರೆಂದು ಕಾಣುತ್ತದೆ.

ಅದೇನೇ ಆಗಲಿ, ದೂರ ನಮಗೆ ಅಡ್ಡಿಯಲ್ಲ, ಅತಂಕವಲ್ಲ. ಅದನ್ನು ಕ್ರಮೇಣ ಬಗೆ ಹರಿಸುವುದಕ್ಕೆ ಸಾಧ್ಯವಿದೆ. ಆದ್ದರಿಂದ ಆರ್ಥಿಕ ಪ್ರಶ್ನೆ ಮತ್ತು ದೂರದ ಪ್ರಶ್ನೆ ಇವೆರಡನ್ನೂ ನಾವಿಂದು ಅಷ್ಟಾಗಿ ಗಣನೆಗೆ ತೆಗೆದುಕೊಳ್ಳಬೇಕಾಗಿಲ್ಲ. ಮುಖ್ಯವಾಗಿ ನಾವು ನೋಡಬೇಕಾದದ್ದು, ಇದನ್ನು ಯಾವ ರೀತಿ ನಾವು ಆಗಮಾಡಬಹುದು, ಇದರಲ್ಲಿ ಎಷ್ಟರಮಟ್ಟಿನ ಸಾಮರಸ್ಯವನ್ನು ಕಂಡುಕೊಳ್ಳಬಹುದು ಎಂಬುದು. ಏಕೆಂದರೆ, ಈ ಸಂದರ್ಭದಲ್ಲಿ ನಾವು ಮರೆಯಬಾರದು, ಮೈಸೂರಿನಲ್ಲಿ ಸುಮಾರು 65 ಭಾಷೆಗಳನ್ನಾಡತಕ್ಕ ಜನರಿದ್ದಾರೆ. ಯಾವ ಭಾವನೆಯೇ ಆಗಲಿ, ಅದು ಅತಿ ಕೊನೆಯ ಮಟ್ಟವನ್ನು ಮುಟ್ಟಿದರೆ ಇತರರಿಗೆ ಅಪಾಯಕಾರಿ. ಹಿಟ್ಲರಿನ ನ್ಯಾಷನಲಿಸಂ ಕೂಡ ಅಪಾಯಕಾರಿಯಾಯಿತು. ಜಾತಿ ಜಾತಿಗಳು ಇವೊತ್ತು ನಮ್ಮ ದೇಶವನ್ನು ತುಂಡು ತುಂಡು ಮಾಡಿದೆ. ನಮ್ಮ ದೇಶದಲ್ಲಿ ನಿಜವಾದ unity ಎಲ್ಲಿದೆ? ಆ cord of unity ಯಾವುದು? ನಮ್ಮ ದೇಶ ಬಹು ವಿಧದಲ್ಲಿ ಚೂರು ಚೂರಾಗಿ ಒಡೆದು ಹೋಗಿದೆಯೆಂಬುದನ್ನು ಮರೆಯಬಾರದು. ಆದ್ದರಿಂದ ಜಾತಿಯ ಭಾವನೆಯೇ ಆಗಲಿ, ರಾಷ್ಟ್ರೀಯ ಭಾವನೆಯೇ ಆಗಲಿ ಅಥವಾ ವರ್ಣಭೇದ ಭಾವನೆಯೆಂದು ಬಿಳಿಯರು ಅನುಸರಿಸುತ್ತಿರುವುದೇ ಆಗಲಿ— ಇವೆಲ್ಲವೂ ಹೋಗಿ, ಈ ಹೊತ್ತು ವಿಶ್ವ ಭ್ರಾತೃತ್ವ ದೃಷ್ಟಿ ನಮ್ಮೆಲ್ಲರನ್ನೂ ಬೆರೆಯುವಂತೆ ಮಾಡಬೇಕಾಗಿದೆ. ಸಮಷ್ಟಿಯಲ್ಲಿ ವ್ಯಷ್ಟಿಯನ್ನು ಕಂಡುಕೊಳ್ಳಬೇಕಾಗಿದೆ. ಆದರೂ ವಿಶ್ವದ ದೃಷ್ಟಿಯೆಂದು ಹೇಳಿ ಪೂರಾ ಬಿಟ್ಟುಕೊಡುವುದಕ್ಕಾಗುವುದಿಲ್ಲ. ವ್ಯಕ್ತಿ ತನ್ನ ಪ್ರಾಂತದಲ್ಲಿ ಸರಿಯಾದ ಆಧಾರದಮೇಲೆ ಪರಿಪುಷ್ಟನಾಗಿ ಬೆಳೆದರೆ ಪ್ರಭಾವವಾದ ರಾಷ್ಟ್ರವಾಗುತ್ತದೆ. ಆದ್ದರಿಂದ ಪ್ರಾಂತಗಳನ್ನು, ಭಾಷೆಯ ತಳಹದಿಯ ಮೇಲೆ ಪುನರ್ವಿಂಗಡಣೆ ಮಾಡಿ. ಹಾಗೆ ಮಾಡುವಾಗ ಅದಕ್ಕೆ ಬೇಕಾದ administrative conveniencesಗಳನ್ನು, ಆರ್ಥಿಕಾಂಶಗಳನ್ನು ಗಮನದಲ್ಲಿಟ್ಟುಕೊಂಡೇ ಮಾಡುತ್ತಾರೆ. ಯಾರೂ ಅದನ್ನು ಕೈಬಿಟ್ಟು ಮಾಡುವುದಿಲ್ಲ. ಯಾರೂ ಆ ರೀತಿ ಅಭಿಪ್ರಾಯಪಡುವುದೂ ಇಲ್ಲ.

ಆದರೆ ಈ ಸಂಧರ್ಭದಲ್ಲಿ ಒಂದಂಶ ಎದ್ದು ಕಾಣುತ್ತದೆ. ಕೆಲವು vested interestಗಳನ್ನು ಇಟ್ಟುಕೊಂಡಿರತಕ್ಕಂಥ ಪಾರ್ಟಿಯವರು ಇದರಿಂದ ಆರ್ಥಿಕಾಭಿವೃದ್ಧಿಗೆ ಆಡಚಣೆಯಾಗುತ್ತದೆ, ಎಂದು ಹೇಳತಕ್ಕದ್ದು ಸ್ವಾಭಾವಿಕ. ಹೀಗೆ ಯಾರು ಯಾರು ಒಂದು vested interest ಇಟ್ಟುಕೊಂಡು ಮಾತನಾಡುತ್ತಾರೋ ಅಂಥವರು ತಮ್ಮ ಈ ಒಂದು status quo ತಪ್ಪಿಹೋಗುತ್ತದೆ ಎನ್ನತಕ್ಕ ಭಾವನೆಯಿಂದ ಹೀಗೆ ಕನ್ನಡ ಪ್ರಾಂತ್ಯ ಆಗುವುದು ಬೇಡ

ಎಂದು ಹೇಳಬಹುದು. ಅವರು ತಮ್ಮ ಹಿತಕ್ಕೆ ಧಕ್ಕೆ ಬರುತ್ತದೆ ಎಂಬ ಅಭಿಪ್ರಾಯದಮೇಲೆ ಹೀಗೆ ಹೇಳುತ್ತಿದ್ದಾರೆಂಬುದು ಕಂಡುಬರುತ್ತಿದೆ. ಈಗ ಈ ಕೊಡಗು ಒಂದು ತೀರ ಸಣ್ಣ ಸಂಸ್ಥಾನ. ನಮ್ಮ ದೇಶದ ಒಂದು ಜಿಲ್ಲೆಯಷ್ಟು ಕೂಡ ಅದು ದೊಡ್ಡದಾಗಿಲ್ಲ. ಆದಾಗ್ಯೂ ಆ ದೇಶವನ್ನು ಈ ಭಾಷಾವಾರು ಪ್ರಾಂತ್ಯದ ತತ್ವಕ್ಕನುಗುಣವಾಗಿ ನೀವು ಇತರ ಕನ್ನಡ ಭಾಗಗಳೊಡನೆ ಬೆರೆತುಕೊಳ್ಳಲು ನಿಮ್ಮ ಅಭಿಪ್ರಾಯವೇನು ಎಂದು ಕೇಳಿದರೆ "ಆಗುವುದಿಲ್ಲ; ನಮ್ಮ ಸಂಸ್ಥಾನ ಹಾಗೇ ಉಳಿಯಬೇಕು" ಎಂದು ಅಲ್ಲಿನ ಸರ್ಕಾರವನ್ನು ನಡೆಸುವ ಅಧಿಕಾರ ವರ್ಗದವರು ತಿಳಿಸಿಬಿಟ್ಟರೆ ಆಗ ಆ ದೇಶದ ಎಲ್ಲಾ ಸಾರ್ವಜನಿಕರ ಅಭಿಪ್ರಾಯಕ್ಕನುಸಾರವಾಗಿ ಅವರಿಂದ ಆ ಅಭಿಪ್ರಾಯ ಬಂದಿದೆ ಎಂದು ತಿಳಿದುಕೊಳ್ಳೋಣವೇ? ಇಲ್ಲ. ಹೀಗಾದರೆ ಅವರು ಈ ಹೊತ್ತು ಅಲ್ಲಿ ಒಂದು ಅಧಿಕಾರವನ್ನೇನು ಇಟ್ಟುಕೊಂಡು ಬರುತ್ತಿದ್ದಾರೋ ಅದು ಅವರಿಗೇ ಉಳಿಯುತ್ತದೆ ಎನ್ನತಕ್ಕಂಥ ಭರವಸೆ ಅವರಲ್ಲಿಲ್ಲ. ಆದಕಾರಣ ಅದು ಈಗ ಯಾವ ರೀತಿಯಲ್ಲಿದೆಯೋ ಅದೇ ರೀತಿಯಲ್ಲಿರಲಿ, ಅದು ಹಾಗೇ ಉಳಿಯಬೇಕು ಎಂದು ಹೇಳುತ್ತಾರೆ. ಆದರೆ ಇದೊಂದು ಅಂಥ ಸಮಂಜಸವಾದ ಕಾರಣವಾಗಿರುತ್ತದೆಯೆಂದು ನಾವು ಹೇಳುವುದಕ್ಕಾಗುವುದಿಲ್ಲ. ಅದು ಇನ್ನೂ ಮುಂದುವರಿಯಬೇಕಾಗಿದ್ದರೆ merge ಆಗಲೇ ಬೇಕು. ಈಗ ಕೆಲವರು ನಮ್ಮ ಮೈಸೂರು ಈಗ ಹೇಗಿದೆಯೋ ಹಾಗೆಯೇ ಉಳಿಯಬೇಕು ಎಂದು ಪ್ರಸ್ತಾಪ ಮಾಡಿದ್ದಾರೆ. ಆದರೆ ಈಗ ನಮ್ಮ ಮೈಸೂರು ಇರುವ ರೀತಿಯಲ್ಲೇ ಅಂದರೆ ಬಳ್ಳಾರಿ ಬರುವುದಕ್ಕಿಂತ ಮುಂಚಿತವಾಗಿ ಇದ್ದಂಥ ರೀತಿಯಲ್ಲೇ ಇರಲಿ ಅನ್ನುವುದು, ಯಾವಾಗ ಯಾವ ಆಧಾರಗಳ ಮೇಲೆ ಇದು ಅಸ್ತಿತ್ವಕ್ಕೆ ಬಂತು, ಈಗ ಇರುವ ಎಲ್ಲೆಕಟ್ಟುಗಳನ್ನು ನಿರ್ಧರಿಸಿದವರು ಯಾರು ಎಂಬತಕ್ಕಂಥ ಪ್ರಶ್ನೆಗಳನ್ನು ಹಾಕಿದರೆ—ಇದಕ್ಕೆ ಉತ್ತರವನ್ನು ನಾವು ಚರಿತ್ರೆ ಮತ್ತು ನಮ್ಮ ಇತಿಹಾಸಗಳನ್ನು ಓದಿದರೆ ಅದು ನಮಗೆ ಗೊತ್ತಾಗುತ್ತದೆ. ಟಿಪ್ಪೂಸುಲ್ತಾನ್ ಸಂಪೂರ್ಣವಾಗಿ ಸೋತುಹೋದ ನಂತರ ಯಾವ ರೀತಿಯಲ್ಲಿ ಈಗಿರುವ ಮೈಸೂರು ಹೀಗೆ ನಿರ್ಮಾಣವಾಯಿತು ಎಂಬತಕ್ಕಂಥ ಇತಿಹಾಸ ಸಂಬಂದವಾದ ವಿಚಾರವನ್ನು ಶೇಷಾದ್ರಿ ಸಮಿತಿಯವರು ತಮ್ಮ ವರದಿಯಲ್ಲಿ ಸೂಕ್ಷ್ಮವಾಗಿ ಪ್ರಸ್ತಾಪಿಸಿದ್ದಾರೆ. ಅವನ್ನು ನಾನು ನನ್ನ ಮಾತುಗಳಲ್ಲಿ ವರ್ಣಿಸುವುದಕ್ಕೆ ಬದಲಾಗಿ ಆ ಸಂಬಂಧಪಟ್ಟ ಭಾಗವನ್ನೇ ಸ್ವಲ್ಪ ಓದಿ ಹೇಳುವುದು ಚೆನ್ನಾಗಿರುತ್ತೆಂದು ಭಾವಿಸಿದ್ದೇನೆ. ಇಲ್ಲಿ ಹೇಳಿರತಕ್ಕಂಥಾದ್ದನ್ನೆಲ್ಲವನ್ನೂ ನಾನು ಪೂರ್ತಿಯಾಗಿ ಓದಿ ಹೇಳುವುದಿಲ್ಲ. ಬಹು ಮುಖ್ಯ ಮುಖ್ಯವಾದಂಥ ಭಾಗಗಳನ್ನು ಮಾತ್ರ ಓದುತ್ತೇನೆ. "ಇದೇ ಸಮಯದಲ್ಲಿ ವಿಜಯನಗರ ರಾಜ್ಯವು ಸ್ಥಾಪಿಸಲ್ಪಟ್ಟಿತು. 14 ಮತ್ತು 15ನೆಯ ಶತಮಾನಗಳಾದ್ಯಂತವೂ ವಿಜಯನಗರದ ರಾಜರುಗಳು ಬಹಮನಿ ಸುಲ್ತಾನರೊಂದಿಗೆ ಆಗಾಗ್ಗೆ ಯುದ್ಧವನ್ನು ಮಾಡುತ್ತಲೇ ಇದ್ದರು. ರಾಯಚೂರಿನಲ್ಲಿರುವ ಎರಡು ನದಿಗಳ ಮಧ್ಯ ಪ್ರದೇಶವೇ ಅವರ ಯುದ್ಧಭೂಮಿಯಾಗಿದ್ದಿತು. 15ನೆಯ ಶತಮಾನದ ಅಂತ್ಯಭಾಗದಲ್ಲಿ, ಬಹಮನಿ ರಾಜ್ಯವು ಒಡೆದು 5 ಸ್ವತಂತ್ರ ರಾಜ್ಯಗಳಾದವು. ಅವು ಯಾವುವೆಂದರೆ: (1) ಅಹಮದ್ ನಗರ (2) ಗೋಲ್ಕೊಂಡ (3) ಬಿದರೆ (4) ಬಿಜಾಪುರ ಮತ್ತು (5) ಬಿರಾರ್. ಈ ಅವಧಿಯಲ್ಲಿ ಬಿಜಾಪುರದ ಮುಸಲ್ಮಾನರಿಗೂ ಮತ್ತು ವಿಜಯನಗರದ ರಾಜರುಗಳಿಗೂ ವಿಶೇಷವಾಗಿ ಯುದ್ಧಗಳು ನಡೆಯುತ್ತಿದ್ದವು. 1519ನೇ ಇಸವಿಯಲ್ಲಿ ವಿಜಯನಗರದ ಕೃಷ್ಣದೇವರಾಯನೂ ಉತ್ತರ ಭಾಗದವರೆಗೆ ತನ್ನ ಯುದ್ಧವನ್ನು ಮುಂದುವರೆಸಿದ್ದನು. ಮತ್ತು ರಾಯಚೂರಿನಲ್ಲಿರುವ ಎರಡು ನದಿಗಳ ಮಧ್ಯೆ ಇದ್ದ ಪ್ರದೇಶವನ್ನೂ ವಶಪಡಿಸಿಕೊಂಡನು. ವಿಜಯನಗರದರಾಜ್ಯದವರಿಗೂ ಮತ್ತು ಮುಸಲ್ಮಾನರ ರಾಜ್ಯಗಳಿಗೂ ಪದೇ ಪದೇ ನಡೆಯುತ್ತಿದ್ದ ಹೋರಾಟವು ರಾಯಚೂರಿನ ಹತ್ತಿರ "ತಾಳಿಕೋಟೆ ಯುದ್ಧ" (ರಾಕ್ಷಸತಂಗಡಿ) ದಿಂದ 1565ನೆಯ ಇಸವಿಯಲ್ಲಿ ಮುಕ್ತಾಯಗೊಂಡಿತು. ಆ ಯುದ್ಧದಲ್ಲಿ ಬಹಮನಿ ಸುಲ್ತಾನರು ವಿಜಯ ನಗರದ ರಾಜನನ್ನು ಸೋಲಿಸಿದರು. ಇದರ ಪರಿಣಾಮವಾಗಿ ವಿಜಯನಗರದ ಸಾಮ್ರಾಜ್ಯವು ಒಡೆದು ಹೋಯಿತು. 17ನೆಯ ಶತಮಾನದಲ್ಲಿ ಔರಂಗಜೇಬನು ದಖ್ಖನ್ ಭಾಗವನ್ನು ಜಯಿಸಿದಮೇಲೆ, ಗುಲ್ಬರ್ಗ, ಬಿದರೆ ಮತ್ತು, ರಾಯಚೂರು ಈ ಮೂರು ಜಿಲ್ಲೆಗಳೂ ಮೊಗಲರ ಚಕ್ರಾಧಿಪತ್ಯಕ್ಕೆ ಸೇರಿಕೊಂಡವು. 18ನೆಯ ಶತಮಾನದ ಆದಿ ಭಾಗದಲ್ಲಿ ಮೊಗಲರ ಚಕ್ರಾಧಿಪತ್ಯವು ಕ್ಷೀಣದೆಶೆಗೆ ಬರುತ್ತಿದ್ದಂಥ ಸಮಯದಲ್ಲಿ "ನಿಜಾಮ್-ಉಲ್-ಮುಲ್ಕ್" ಎಂಬ ಬಿರುದನ್ನು ಹೊಂದಿ ದಖನ್ನಿನ ಸುಬೇದಾರನಾಗಿ ನೇಮಕ ಮಾಡಲ್ಪಟ್ಟಿದ್ದಂಥ ಔರಂಗಜೇಬನ ಪ್ರಖ್ಯಾತಿಯಾದ ಸೇನಾಧಿಪತಿ ಅಸಫ್‌ಜಹ ಎಂಬುವನು ತಾನು ಸ್ವತಂತ್ರನೆಂದು ಹೇಳಿಕೊಂಡು ಸ್ವೇಚ್ಛೆಯಾಗಿ ವರ್ತಿಸಿ ಈಗಿನ ಹೈದರಾಬಾದನ್ನು ಸ್ಥಾಪಿಸಿದನು. ಗುಲ್ಬರ್ಗ, ಬಿದರೆ, ಮತ್ತು ರಾಯಚೂರು—ಈ ಮೂರು ಜಿಲ್ಲೆಗಳೂ ಹೈದರಾಬಾದು ರಾಜ್ಯಕ್ಕೆ ಸೇರಿಹೋದುದು ಈ ಕಾರಣದಿಂದಲೇ. 1853ರ ಒಪ್ಪಂದದಮೇರೆಗೆ ರಾಯಚೂರು ಬ್ರಿಟಿಷರಿಗೆ ವಹಿಸಲ್ಪಟ್ಟಿತು. ಆದರೆ ಅದನ್ನು ಅವರು 1860ನೆಯ ಇಸವಿಯಲ್ಲಿ ನಿಜಾಮನಿಗೆ ವಾಪಸ್ಸು ಕೊಟ್ಟರು. ಪರಿಸ್ಥಿತಿಯು ಈಗಲೂ ಹೀಗೆಯೇ ಇದೆ" ಎಂದು ತಿಳಿಸಿರುತ್ತಾರೆ. ಇದಾದ ಮೇಲೆ ಈ ಮುಂಬಾಯಿ ವಿಚಾರ: "ದೆಹಲಿಯಲ್ಲಿ ಮೊಗಲ್ ಸಾಮ್ರಾಜ್ಯವು ಅವನತಿ ಹೊಂದಿದಮೇಲೆ, ಈ ಭಾಗದಲ್ಲಿ ಮರಾಠೆಯವರು ಸಾಮಾನ್ಯವಾಗಿ ಪ್ರಭುತ್ವವನ್ನು ಹೊಂದಿದ್ದರೆಂದು ಹೇಳಬಹುದಾಗಿದೆ. ಸುಮಾರು 1764ನೆಯ ಇಸವಿಯಲ್ಲಿ ಮರಾಠೆಯವರಿಗೆ ಒಳಪಟ್ಟಿದ್ದ ಧಾರವಾಡ ಪ್ರದೇಶಗಳನ್ನು ಹೈದರಾಲಿಯು ಗೆದ್ದನು. ಆದರೆ ಪೇಷ್ವೆನು ಮಾಧವರಾಯ ಅವನನ್ನು ಸೋಲಿಸಿ ಆ ಪ್ರದೇಶಗಳನ್ನು ಪುನಃ ಪಡೆದುಕೊಂಡನು. ಪೇಷ್ವೆಯವರು 1817ರಲ್ಲಿ ಬ್ರಿಟಿಷರಿಂದ ಅಖೈರಾಗಿ ಸೋಲಿಸಲ್ಪಟ್ಟಮೇಲೆ, ಪೇಷ್ವೆಯವರ ಪ್ರಾಬಲ್ಯವು ಕೊನೆಗೊಂಡಿತು. 1836ನೆಯ ಇಸವಿಯವರೆಗೆ—ಬೆಳಗಾಂ ಮತ್ತು ಧಾರವಾಡವು ಒಂದು ಡಿಸ್ಟ್ರಿಕ್ಟಿನ ಭಾಗವಾಗಿದ್ದವು. ಆ ವರ್ಷದಲ್ಲಿ ಈಗ ಬೆಳಗಾಂ ಎಂದು ಕರೆಯಲ್ಪಡುವ ಆ ಡಿಸ್ಟ್ರಿಕ್ಟಿನ ಭಾಗವನ್ನು ಧಾರವಾಡದಿಂದ ಪ್ರತ್ಯೇಕಿಸಲಾಯಿತು. ಮೊದಲು ಸೊಲ್ಲಾಪುರ ಮತ್ತು ಬೆಳಗಾಂ ಭಾಗವಾಗಿದ್ದ ಬಿಜಾಪುರ ಡಿಸ್ಟ್ರಿಕ್ಟು 1864ರಲ್ಲಿ ಒಂದು ಪ್ರತ್ಯೇಕವಾದ ಡಿಸ್ಟ್ರಿಕ್ಟಾಯಿತು". ಅನಂತರ ಈ ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ವಿಚಾರ:—ಬಿಜಾಪುರವು ಪತನವಾದ ತರುವಾಯ ಔರಂಗಜೇಬನು ದಂಡೆತ್ತಿ ಬಂದಮೇಲೆ ಉತ್ತರ ಕನ್ನಡವು ಮೊಗಲರ ಕೈಸೇರಿತು. ಬಿದನೂರು ನಾಯಕರುಗಳೂ ಸಹ ಮೊಗಲರ ಅಧೀನರಾದರು. 1700ನೆಯ ಇಸವಿಯ ತರುವಾಯ, ಮರಾಠೆಯವರು ಪುನಃ ಉತ್ತರ ಕನ್ನಡ

(ಶ್ರೀ ಎಸ್. ಗೋಪಾಲಗೌಡ.)

ವನ್ನು ಗೆದ್ದರು. 1763ರಲ್ಲಿ ಹೈದರಾಲಿಯು ಬಿದನೂರನ್ನು ಗೆದ್ದುದಲ್ಲದೆ, ಮಂಗಳೂರನ್ನು ವಶಪಡಿಸಿಕೊಂಡು ಅದನ್ನು ತನ್ನ ನೌಕಾ ಕಾರ್ಯಾಚರಣೆಯ ಆಧಾರಸ್ಥಾನವನ್ನಾಗಿ ಮಾಡಿಕೊಂಡನು. 1783ರಲ್ಲಿ ಬ್ರಿಟಿಷರು ಹೊನ್ನಾವರವನ್ನು ವಶಪಡಿಸಿಕೊಂಡರು ; ಮತ್ತು 1799ರಲ್ಲಿ ಟಿಪ್ಪುಸುಲ್ತಾನನು ಶ್ರೀರಂಗಪಟ್ಟಣದಲ್ಲಿ ಸೋತು ಹೋದಮೇಲೆ ಅದೇ ವರ್ಷದಲ್ಲಿ ನಡೆದ ಪ್ರದೇಶಗಳ ಹಂಚಿಕೆಯ ಕೌಲಿನ (ಪಾರ್ಟಿಷನ್ ಟ್ರೀಟಿ) ಪರಿಣಾಮವಾಗಿ, ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಬ್ರಿಟಿಷರ ಪಾಲಿಗೆ ಬಂದಿತು. ಈ ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಮತ್ತು ಉತ್ತರ ಕನ್ನಡ ಡಿಸ್ಟ್ರಿಕ್ಟ್ ಮದ್ರಾಸ್ ಅಧಿಪತ್ಯಕ್ಕೆ ಸೇರಿಸಲ್ಪಟ್ಟವು. ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ 1861ರ ವರೆಗೂ ಮದ್ರಾಸ್ ರಾಜ್ಯದ ಅಂಗವಾಗಿ ಮುಂದುವರಿಯಿತು. ಆಗ್ಗೆ ಉತ್ತರ ಕನ್ನಡವೆಂದು ಈಗ ನಮಗೆ ಗೊತ್ತಿರುವ ಭಾಗವನ್ನು ಪ್ರತ್ಯೇಕಿಸಿ ಬೊಂಬಾಯಿ ರಾಜ್ಯಕ್ಕೆ ವರ್ಗಾಯಿಸಲಾಯಿತು ''. ಆಮೇಲೆ ಈ ಕೊಡಗಿನ ವಿಚಾರ :—''ಶ್ರೀರಂಗಪಟ್ಟಣವು ಪತನವಾದಮೇಲೆ ಉತ್ತರಾಧಿಕಾರದ ವಿಚಾರದಲ್ಲಿ ವಿವಾದಗಳುಂಟಾದವು. 11ನೆಯ ವೀರರಾಜನು ಆಗ ಪಟ್ಟಕ್ಕೆ ಬಂದನು. ಅವನ ಅಕ್ರಮವಾದ ಆಡಳಿತಕ್ಕಾಗಿ ಬ್ರಿಟಿಷರು ನಿರ್ವಾಹವಿಲ್ಲದೆ ಆ ರಾಜ್ಯಾಡಳಿತವನ್ನು ಅವನ ಕೈಯಿಂದ ತಪ್ಪಿಸಿ 1834ನೆಯ ಇಸವಿಯಲ್ಲಿ ಆ ರಾಜ್ಯದ ಆಡಳಿತವನ್ನು ಅವರೇ ವಹಿಸಿಕೊಳ್ಳಬೇಕಾಯಿತು ''.

ಹೀಗೆ ಈ ಪ್ರಶ್ನೆಯ ಬಗ್ಗೆ ಇತಿಹಾಸದಲ್ಲಿ ಹೇಳಿರತಕ್ಕದ್ದಾಗಿದೆ. ಆದರೆ ಇನ್ನೂ ಹೆಚ್ಚಾಗಿ ಹೀಗೆ ನಡೆದುಹೋಗಿರತಕ್ಕಂಥ ಹಳೆಯ ಘಟನೆಗಳನ್ನು ನಾವು ಸ್ಮರಿಸುತ್ತಾ ದುಃಖಪಡುವುದಾಗಲಿ ಅಥವಾ ಹೆಮ್ಮೆಪಡುವುದಾಗಲಿ ಅಷ್ಟು ಸಮಂಜಸವಾದುದಲ್ಲ. ಆಗಿನ ಕಾಲದಲ್ಲಿ ರಾಜಮಹಾರಾಜರುಗಳ ಮತ್ತು ಪಾಳೆಗಾರರ ಆಡಳಿತವಿತ್ತು. ಶಕ್ತಿಯೇ ನ್ಯಾಯ ಎನ್ನುತ್ತಿದ್ದಂಥ ಕಾಲ ಅದು. ಆದರೆ ನಾವು ಈಗ ಹೋಗುತ್ತಿರುವ ದಾರಿಯೇ ಬೇರೆ. ಈಗ ನಾವು ಪ್ರಜಾಪ್ರಭುತ್ವದ ಕಾಲಕ್ಕೆ ಬಂದು ನಿಂತಿದ್ದೇವೆ. ಈ ದಿವಸ ನಾವು ಯಾವ ಒಂದು ಕೆಲಸ ಮಾಡಬೇಕಾಗಿದ್ದರೂ ಎಲ್ಲರ ಅಭಿಪ್ರಾಯಗಳನ್ನೂ ಪಡೆದುಕೊಂಡು, ಅವುಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಅದರಂತೆ ಕೆಲಸ ಮಾಡತಕ್ಕಂಥ ಕಾಲ ಇದು. ಈ ದಿವಸ ಈ ಕನ್ನಡ ಪ್ರಾಂತ್ಯ ನಿರ್ಮಾಣವಾಗಬೇಕೆಂದು ನಾವು ಹೇಳತಕ್ಕ ಕಾಲದಲ್ಲಿ—ಇಲ್ಲಿ ಉಳಿಯತಕ್ಕಂಥ ಅಲ್ಪಸಂಖ್ಯಾಂತ ಭಾಷೆಯವರ ಹಿತರಕ್ಷಣೆಗಳನ್ನು ಕಾಪಾಡುವುದು ಬಹು ಸಂಖ್ಯಾಂತರಾದ ನಮ್ಮೆಲ್ಲರ ಆದ್ಯ ಕರ್ತವ್ಯ. ಅಲ್ಪ ಸಂಖ್ಯಾಂತರ ಸೌಕರ್ಯಗಳನ್ನು ಕಾಪಾಡಿ ಅವರ ಸಂಸ್ಕೃತಿ, ಅವರ ಭಾಷೆ, ಹೀಗೇ ಅವರ ಸರ್ವಸ್ವವನ್ನೂ ಕಾಪಾಡಿಕೊಂಡು, ಹಾಗೆ ಬಹಳ ಹಿಂದುಳಿದಿರತಕ್ಕಂಥವರಿಗೆ ಎಲ್ಲ ವಿಧದಲ್ಲೂ ಸೌಕರ್ಯಗಳನ್ನೊದಗಿಸಿಕೊಡತಕ್ಕಂಥಾದ್ದು ನಮ್ಮೆಲ್ಲರ ಆದ್ಯ ಕರ್ತವ್ಯ ಮತ್ತು ಒಂದು ಹೊಣಗಾರಿಕೆ. ಇನ್ನು ಮುಂದೆ ಈ ಕನ್ನಡ ರಾಜ್ಯದಲ್ಲಿ ಉಳಿಯುವಂಥ ಇತರ ಭಾಷೆಗಳ ಜನಾಂಗದಮೇಲೆ ಯಾರೂ ಆಗ್ರಹ ತಾಳಬಾರದು. ನಾವು ಸರ್ವರ ಅಭಿವೃದ್ಧಿಗೂ ಪ್ರಯತ್ನಿಸುವುದು ಪ್ರಜಾಪ್ರಭುತ್ವ ತತ್ವಗಳ ಪೈಕಿ ಇದೂ ಒಂದು ಮುಖ್ಯ ಕರ್ತವ್ಯವಾಗಿರುತ್ತದೆ. ಆದುದರಿಂದ ನಾವು ಈ ದಿವಸ ಮುಂದೆ ಅಸ್ತಿತ್ವಕ್ಕೆ ಬರಲಿರುವ ಕರ್ಣಾಟಕ ಪ್ರಾಂತ್ಯದ ಒಂದು ಸೂಕ್ಷ್ಮ ದರ್ಶನ ಮಾಡಿಕೊಳುವುದು ಒಳ್ಳೆಯದು.

ಈ ದಿವಸ ಮೈಸೂರು ಸರ್ವವಿಧದಲ್ಲಿಯೂ ಅಭಿವೃದ್ಧಿಯನ್ನು ನಡೆಸಿಕೊಂಡು ಬಂದಿದೆ. ಇದು ರಾಜಮಹಾರಾಜರುಗಳ ಆಡಳಿತಕ್ಕೆ ಸಿಕ್ಕಿದ್ದರಿಂದ ಇಲ್ಲಿ ಹೀಗೆ ಅಭಿವೃದ್ಧಿಕಾರ್ಯಗಳು ನಡೆಯುವುದಕ್ಕೆ ಒಂದು ಅವಕಾಶವಾಯಿತು. ಆದರೆ ಹಾಗೆ ಯಾವುದೋ ಒಂದು ದೃಷ್ಟಿಯಲ್ಲಿ ಇಲ್ಲಿ ಅಭಿವೃದ್ಧಿ ಕಾರ್ಯಗಳು ನಡೆದುಕೊಂಡು ಬಂದಿರುವುದರಿಂದ—ಮೈಸೂರು ಪ್ರತ್ಯೇಕವಾಗಿಯೆ ಉಳಿಯಬೇಕು ಎಂಬುದಾಗಿ ಈ ಒಂದು ಕಾರಣದಮೇಲೆ ಹೇಳತಕ್ಕದ್ದನ್ನು ಯಾರೂ ಸರಿಯೆಂದು ಭಾವಿಸಬಾರದು. ಆದರೆ ಶ್ರೀ ಮರ್ಕ್ ಮಾಧವಾಚಾರ್ಯರು ಮಾತನಾಡುತ್ತ ''ನಾವು ಎಷ್ಟೋ ತ್ಯಾಗ—ಬಲಿದಾನಗಳನ್ನಾಗಲೇ ಮಾಡಿರುವಾಗ—ಈಗ ನಮ್ಮ ಅಕ್ಕಪಕ್ಕದ ಪ್ರದೇಶಗಳವರು ಕೆಲವು ಸೌಲಭ್ಯಗಳನ್ನು ನಮಗೂ ಕೊಡಿ ಎಂದು ಕೇಳಿದರೆ ನಾವು ಅದನ್ನು ಕೊಡುವುದಕ್ಕೆ ಏಕೆ ಅಷ್ಟು ಹಿಂಜರಿಯಬೇಕು ? ಹಾಗೆ ಕೊಟ್ಟರೆ ನಮಗೇನೂ ಅದರಿಂದ ನಷ್ಟವಾಗುವುದಿಲ್ಲವೆಂದು ಅವರು ಹೇಳಿದ್ದು ನ್ಯಾಯವಾಗಿದೆ. ಆದರೆ ಕೇಳಕ್ಕವರು ಕೊಡತಕ್ಕಂಥ ದಾನಿಯನ್ನು ಕೇಳುತ್ತಾರೆಯೇ ವಿನಾ ಲೋಭಿಯನ್ನು ಯಾರೂ ಕೇಳರು. ಆದರೆ ನಾವು ಮೈದಾಸ್‌ನಂತೆ ಮುಟ್ಟಿದ್ದೆಲ್ಲಾ ಚಿನ್ನದ ಗೊಂಬೆಯಾಗುತ್ತೆಂಬ ಭಾವನೆಗೆ ಹೋಗಬೇಕಾಗಿಲ್ಲ. ಆದರೆ ಈ ಪ್ರಾಂತ್ಯಗಳ ಪುನರ್‌ರಚನಾಕಾರ್ಯದಲ್ಲಿ ಜನಗಳೆಲ್ಲರಲ್ಲೂ ಪ್ರೇಮ, ಆದರ ಮತ್ತು ವಿಶ್ವಾಸಗಳು ಹೆಚ್ಚಾಗುವಂತೆ ಮಾಡಬೇಕಾದದ್ದು ಮುಖ್ಯವೆಂಬುದನ್ನು ನಾವೆಲ್ಲರೂ ಗಮನದಲ್ಲಿಟ್ಟುಕೊಳ್ಳಬೇಕು. ಇದೇ ನಮ್ಮ ಇತಿಹಾಸದಲ್ಲಿ ಬಹಳ ಮುಖ್ಯವಾದ ವಿಚಾರ. ಇಂಥ ಒಂದು ಹೊಸ ಇತಿಹಾಸವನ್ನು ರೂಪಿಸುವುದಕ್ಕೆ ಅಥವಾ ಬರೆಯುವುದಕ್ಕೆ ಪ್ರಾರಂಭಿಸತಕ್ಕ ಕಾಲದಲ್ಲಿ ಮುಂದಿನ ಭವಿಷ್ಯಗಳಿಗೆ ಜನತೆಯಲ್ಲಿ ಒಂದು ಪ್ರಚೋದನೆಗೆ ಅವಕಾಶ ಕೊಡಬಾರದೆಂಬ ವಿಚಾರಕ್ಕೆ ನಾವೀಗ ನಮ್ಮ ಗಮನವನ್ನಿತ್ತು ನಾವೆಲ್ಲರೂ ಒಂದು ಸಾಮರಸ್ಯ ಭಾವನೆಯಿಂದೊಡಗೂಡಿ ಈ ಕಾರ್ಯಸಾಧನೆ ಮಾಡತಕ್ಕದ್ದೇ ನಮ್ಮೆಲ್ಲರಲ್ಲಿಯೂ ಈಗ ಇರಬೇಕಾದಂಥ ಒಂದು ರಾಜಕೀಯ ಜಾಣ್ಮೆ. ಅಷ್ಟು ಶಿವಾಯಿ ಇದರಲ್ಲಿ ಮತ್ತೆ ಯಾವ ಲಾಭ ಅಥವಾ ನಷ್ಟದ ಪ್ರಶ್ನೆಯೂ ಉದ್ಭವಿಸುವುದಿಲ್ಲ. ಈ ಮುಖ್ಯಾಂಶವನ್ನು ನಾವುಗಳಾರೂ ಮರೆಯಬಾರದು. ಇದು ನಮ್ಮ ಮುಂದಿನ ಭವಿಷ್ಯಕ್ಕೆ ಒಂದು ಭದ್ರವಾದ ತಳಹದಿಯನ್ನು ಹಾಕತಕ್ಕಂಥ ಒಂದು ಬುನಾದಿಯ ಕೆಲಸ. ಈ ಬುನಾದಿಯಮೇಲೆ ನಾವೀಗ ಈ ಕರ್ಣಾಟಕ ಪ್ರಾಂತ್ಯದ ರಚನೆಗೆ ತಳಹದಿಯನ್ನು ಯಾವ ರೀತಿ ಹಾಕಬೇಕೋ ಅದನ್ನು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ . . .

ಶ್ರೀ ಟಿ. ಎಚ್. ಮೂಡಲಗಿರಿಗೌಡ (ಕುಣಿಗಲು).—ಇದು ವ್ಯವಹಾರಜ್ಞಾನಕ್ಕೆ ಸರಿಹೋಗುತ್ತದೆಯೇ ?

ಶ್ರೀ ಎಸ್. ಗೋಪಾಲಗೌಡ.—ಇತಿಹಾಸದ ಸ್ಥಾನಕ್ಕೆ ಕೊಡಬೇಕಾದ ಗೌರವವನ್ನು ಇತಿಹಾಸಕ್ಕೆ ಕೊಡೋಣ. ವ್ಯವಹಾರದ ಸ್ಥಾನಕ್ಕೆ ಕೊಡಬೇಕಾದ ಗೌರವಗಳನ್ನು ವ್ಯವಹಾರಸ್ಥಾನಕ್ಕೆ ಕೊಡೋಣ. ಯಾವ್ಯಾವುದಕ್ಕೆ ಎಷ್ಟೆಷ್ಟರಮಟ್ಟಿಗೆ ಮನ್ನಣೆ ಕೊಡಬೇಕೆಂಬುದನ್ನು ಸರ್ವಮುಖದಿಂದಲೂ ವಿಮರ್ಶೆ ಮಾಡೋಣ, ವಿಚಾರ ಮಾಡೋಣ, ಅನಂತರ ಒಂದು ತೀರ್ಮಾನಕ್ಕೆ ಬರೋಣ ಎನ್ನತಕ್ಕದ್ದೇ ನನ್ನ ಪ್ರಾರ್ಥನೆ.

ಆ ಸಮಿತಿಯು ಒಪ್ಪಿಸಿರತಕ್ಕ ಈ ವರದಿಯ ಮೇಲೆ ಈಗಾಗಲೇ ಅನೇಕ ರೀತಿಯ ಅಭಿಪ್ರಾಯಗಳು ಬಂದಿರುತ್ತವೆ. ಸಮಿತಿಯು ವರದಿಯು ಕೆಲವು ವಿಷಯಗಳನ್ನು ಬಹಳವಾಗಿ ಉತ್ಪ್ರೇಕ್ಷೆಮಾಡಿದೆ ಎಂತಲೂ, ಮತ್ತೆ ಕೆಲವರು ಇದು ಅನೇಕ ಉಪಯುಕ್ತ ವಿಷಯಗಳನ್ನು ಕೈಬಿಟ್ಟುಬಿಟ್ಟಿದೆಯೆಂತಲೂ, ಮತ್ತೆ ಕೆಲವರು ಅಪ್ರಕೃತ ವಿಷಯಗಳನ್ನು ಸೇರಿಸಿಬಿಟ್ಟಿದೆಯೆಂಬುದಾಗಿಯೂ ಈಗಾಗಲೇ ಅನೇಕರು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ನಾನೂ ಕೂಡ ಈ ಸಮಿತಿಯು ಪಟ್ಟಿರತಕ್ಕಂಥ ಒಂದು ಅಭಿಪ್ರಾಯದ ಬಗ್ಗೆ ಅದು ಒಂದು ಹಾನಿಯನ್ನುಂಟುಮಾಡುವಂಥ ಅಭಿಪ್ರಾಯವಾಗಿದೆಯೆಂದು ಅಭಿಪ್ರಾಯಪಟ್ಟಿದ್ದೇನೆ. ಅದು ಏನೆಂದರೆ:—"ಮೇಲೆ ಕಂಡ ಸರ್ವೇ ಪರಿಶೀಲನೆಯಿಂದ ಸರಹದ್ದುಗಳನ್ನು ಎಷ್ಟೇ ಜಾಗರೂಕತೆಯಿಂದ ನಿರ್ಧರಿಸಿದರೂ ಭಾಷಾವಾರು ಆಧಾರದಮೇಲೆ ಜನರನ್ನು ವರ್ಗಾಯಿಸುವಂತೆ ನಾವು ಉದ್ದೇಶಿಸಿದ ಹೊರತು ಬೇರೆಬೇರೆ ಭಾಷೆಗಳನ್ನಾಡತಕ್ಕ ಅಲ್ಪ ಸಂಖ್ಯಾತರನ್ನು ಬಿಟ್ಟುಬಿಡುವುದಕ್ಕೆ ಸಾಧ್ಯವಿಲ್ಲವೆಂಬುದು ನಮಗೆ ಸ್ಪಷ್ಟವಾಗಿ ಕಂಡುಬರುತ್ತದೆ" ಎಂದು ಬರೆದಿದ್ದಾರೆ.

ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮೂರು) — ಈ ವಿಚಾರವನ್ನು ತಿಳಿಸಬೇಕೆಂದು ಹೇಳಿ ಆ (ಟರ್ಮ್ಸ್ ಆಫ್ ರೆಫರೆನ್ಸಿನಲ್ಲಿ) ಸಮಿತಿಯ ಪರ್ಯಾಲೋಚನೆಗಾಗಿ ಒಪ್ಪಿಸಿದ್ದ ವಿಷಯಗಳಲ್ಲಿ ಅಡಕವಾಗಿತ್ತೇ?

12 NOON

ಶ್ರೀ ಎಸ್. ಗೋಪಾಲಗೌಡ.—ಹಾಗೂ ಒಂದು ವೇಳೆ ಆ ಟರ್ಮ್ಸ್ ಆಫ್ ರೆಫರೆನ್ಸಿನಲ್ಲಿ ಏನಾದರೂ ಈ ವಿಷಯವನ್ನು ಕೇಳಿತ್ತೇ ಎಂದು ನೋಡಿದರೆ ಅದರಲ್ಲಿ ಈ ವಿಚಾರವನ್ನೇ ಕೇಳಿಲ್ಲ. ಆ ಟರ್ಮ್ಸ್ ಆಫ್ ರೆಫರೆನ್ಸಿನಲ್ಲಿ ಕಾಣಿಸಿರತಕ್ಕಂಥ ಅಂಶಗಳಾವುವೆಂದರೆ:—

(1) ಮದ್ರಾಸು, ಬೊಂಬಾಯಿ, ಹೈದರಾಬಾದು ಮತ್ತು ಕೊಡಗು ರಾಜ್ಯಗಳಲ್ಲಿ ಕನ್ನಡವನ್ನು ಮಾತನಾಡುವ ಪ್ರದೇಶದ ವಿಸ್ತೀರ್ಣ ಮತ್ತು ಜನಸಂಖ್ಯೆಗೆ ಸಂಬಂಧಪಟ್ಟ ವಿವರಗಳನ್ನು ಶೇಖರಿಸುವುದು,

(2) ಆ ಪ್ರದೇಶಗಳಲ್ಲಿ ಅದರಲ್ಲೂ ಮುಖ್ಯವಾಗಿ—ವಿದ್ಯಾಭ್ಯಾಸ, ವೈದ್ಯಸಹಾಯ ಮತ್ತು ಜನಾರೋಗ್ಯ ರಕ್ಷಣೆ, ಗ್ರಾಮಾಭಿವೃದ್ಧಿ, ಕೈಗಾರಿಕೆಗಳು, ನೀರಾವರಿ ಮತ್ತು ವಿದ್ಯುಚ್ಛಕ್ತಿ ಕ್ಷೇತ್ರಗಳಲ್ಲಿ ಅಭಿವೃದ್ಧಿಕಾರ್ಯಗಳು ಎಷ್ಟರಮಟ್ಟಿಗೆ ನಡೆದಿವೆ ಎಂಬುದನ್ನು ಗೊತ್ತುಮಾಡುವುದು,

(3) ದೇಶದ ಸಂಪತ್ತಿಗೆ ಅನುಕೂಲವಾಗುವ ಸ್ವಾಭಾವಿಕ ಸಾಧನಗಳೇನಾದರೂ ಇವೆಯೇ ಎಂಬುದನ್ನು ತಿಳಿದುಕೊಳ್ಳುವುದು,

(4) ಆ ಪ್ರದೇಶಗಳಿಗೆ ಸಂಬಂಧಿಸಿದಂತೆ ಆದಾಯ ಮತ್ತು ವೆಚ್ಚ, ಲೇಣಿ ಮತ್ತು ದೇಣಿಗಳ ಅಂಕಿಅಂಶಗಳನ್ನು ಶೇಖರಿಸುವುದು,

(5) ಆ ಪ್ರದೇಶಗಳಲ್ಲಿ ಪಾಂಚವಾರ್ಷಿಕ ಯೋಜನೆಯ ಮೇರೆಗೆ ಕೆಲಸಕಾರ್ಯಗಳು ಎಷ್ಟರಮಟ್ಟಿಗೆ ಮುಂದುವರಿದಿವೆ ಎಂಬುದನ್ನು ಗೊತ್ತುಮಾಡುವುದು,

(6) ಇದರಿಂದ ಒದಗಬಹುದಾದ ಹಣಕಾಸಿನ ಮತ್ತು ಆಡಳಿತ ಸಂಬಂಧದ ಸಮಸ್ಯೆಗಳನ್ನು ಪರಿಶೀಲಿಸುವುದು—ಎಂದು ಕೇಳಲಾಗಿದೆ—ಇಷ್ಟಕ್ಕಾಗಿ ಆ ಸಮಿತಿಯವರು ಇಷ್ಟು ವರದಿಯನ್ನು ತಯಾರಿಸಿದ್ದಾರೆ. ಈ ಅಂಶ ಈ ಟರ್ಮ್ಸ್ ಆಫ್ ರೆಫರೆನ್ಸಿನಲ್ಲಿ ಅಡಕಮಾಡಿದ್ದರೂ—ಆ ಹಣಕಾಸಿನ ಮತ್ತು ಆಡಳಿತ ಸಮಸ್ಯೆಯ ಬಗ್ಗೆ ತಮ್ಮ ಒಂದು ಅಭಿಪ್ರಾಯವನ್ನು ಕೊಡತಕ್ಕ ಸಂಬಂಧದಲ್ಲಿ ಸೂಚಿಸಿದ್ದೇವೆಂದು ಹೇಳುವುದಕ್ಕೂ ಕೂಡ ಅವರಿಗೆ ಅವಕಾಶವಿಲ್ಲ. ಇದನ್ನು ನಾವು ಯಾವ ದೃಷ್ಟಿಯಿಂದ ನೋಡಿದರೂ ಇದೊಂದು ಘಾತುಕವಾದ ಅಭಿಪ್ರಾಯ, ಇದು ತಿಳಿಗೇಡಿತನದ ಅಭಿಪ್ರಾಯವೆಂದು ಹೇಳದೆ ವಿಧಿಯಿಲ್ಲ. ಒಂದು ಉದಾಹರಣೆ ಕೊಡುವುದಾದರೆ, ನಮ್ಮ ಮನೆಯಲ್ಲಿ ಅಕ್ಕತಂಗಿಯರು ಅಥವಾ ಯಾರಾದರೊಬ್ಬರು ಬಂಧುಗಳು ಕಾಯಿಲೆಯಿದ್ದರೆ ಡಾಕ್ಟರನ್ನು ಕರೆದುಕೊಂಡು ಬರುವುದಕ್ಕೆ ಒಬ್ಬರನ್ನು ಕಳುಹಿಸುವುದು, ಹಿಂದೆಯೇ ಇನ್ನೊಬ್ಬರನ್ನು ಗೋರಿ ತೆಗೆಯುವುದಕ್ಕೋ, ಕಟ್ಟಿಗೆ ತರುವುದಕ್ಕೋ ಕಳುಹಿಸಿದರೆ ಇದು ಎಷ್ಟು ಸಮಂಜಸವಾಗಿರುತ್ತದೆಯೋ ಇದೂ ಅಷ್ಟೇ ಸಮಂಜಸವಾಗಿದೆ. ಇದು ಸಣ್ಣ ವಿಷಯವೇನೂ ಅಲ್ಲ. ಕೆಲವರು, ಇಂಥಾದ್ದು ಹಿಂದೆ ನಡೆಯಿತು, ಚರಿತ್ರೆಯ ಆಧಾರವಿದೆ, ಪ್ರಾಂತ್ಯ ಅಥವಾ ದೇಶ ಪ್ರತ್ಯೇಕವಾದಾಗ ರಕ್ತಪಾತವಾಯಿತು ಎಂದು ಹೇಳಬಹುದು. ಆಂಧ್ರ ಪ್ರಾಂತ್ಯವಾದಾಗ ಮದರಾಸು ಪಟ್ಟಣವನ್ನು ಅವರು ತಮಗೆ ಸೇರಬೇಕೆಂದು ಹೇಳುತ್ತಿದ್ದರು; ಹಿಂದೆ ಮದರಾಸಿನಲ್ಲಿ ಉಳಿದವರು ತಮಗೇ ಅದು ಸೇರಿದುದೆಂದು ಹೇಳುತ್ತಿದ್ದರು. ಕೆಲವರು ಈ ಸಂಬಂಧವಾಗಿ ರಕ್ತದ ಹೊಳೆಯೇ ಹರಿಯುತ್ತದೆಯೆಂದು ಹೇಳಿದ್ದರು. ಆದರೆ ಏನಾಯಿತು?

ಶ್ರೀ ಎ. ವಿ. ನರಸಿಂಹರೆಡ್ಡಿ.—ಹಾಗಿದ್ದರೆ, ಶ್ರೀಮಾನ್ ಗೋಪಾಲಗೌಡರ ಅಭಿಪ್ರಾಯದಲ್ಲಿ, ಅವರಿಗೆ ಅನುಕೂಲವಾಗುವ ಹಾಗೆ ಅಭಿಪ್ರಾಯವನ್ನು ಕೊಟ್ಟಿದ್ದರೆ ಈ ವರದಿ ಸರಿಯಾಗಿರುತ್ತಿತ್ತು ಎಂತಲೆ? ಇಲ್ಲಿ ಇರತಕ್ಕ ಅಂಕಿಅಂಶಗಳನ್ನು ವ್ಯಕ್ತಪಡಿಸಬೇಕೋ ಅಥವಾ ಯಾರಾದರೊಬ್ಬರ ಅಭಿಪ್ರಾಯಕ್ಕೆ ಸರಿ ಹೊಂದುವಂತೆ ಮಾಡಬೇಕೋ?

ಶ್ರೀ ಎಸ್. ಗೋಪಾಲಗೌಡ.—ಸಮಿತಿಯವರು ಇಂಥ ಒಂದು ಮುಖ್ಯ ವಿಷಯದಲ್ಲಿ ಅಭಿಪ್ರಾಯ ಕೊಡುವಾಗ ಬಹಳ ಜಾಗರೂಕರಾಗಿರಬೇಕು. ಅಪ್ರಕೃತ, ಅನಾವಶ್ಯಕ, ವಿನಾಕಾರಣ ಅನುಮಾನಗಳಿಗೆ, ಊಹಾಪೋಹಗಳಿಗೆ ಎಡೆಗೊಡುವುದಕ್ಕೆ ಅವರು ಈ ರೀತಿ ಹೇಳಬಾರದಾಗಿತ್ತು ಎನ್ನುವುದು ನನ್ನ ಸ್ಪಷ್ಟ ಅಭಿಪ್ರಾಯ. ಸಮಿತಿಯವರು ಇಂಥ ಕೆಲವು ಅಭಿಪ್ರಾಯಗಳನ್ನು ಕೊಟ್ಟಿರುವುದನ್ನು ನಾವು ಬಿಟ್ಟರೆ ಮತ್ತೆ ಕೆಲವು ವಿಷಯಗಳಲ್ಲಿ ನಮಗೆ ಅನುಕೂಲವಾದ ಅಂಕಿಅಂಶಗಳನ್ನು ಒದಗಿಸಿದ್ದಾರೆ. ಆದರೆ ಬಹು ಮುಖ್ಯವಾದ ಒಂದಂಶವನ್ನು ಮಾತ್ರ ಅವರು ಸಂಗ್ರಹಿಸಿಲ್ಲ. ಅದೇನೆಂದರೆ, ಹೊರಗಡೆ ಇರತಕ್ಕ ಕನ್ನಡ ಜನರು ಈ ವಿಷಯದಲ್ಲಿ ಏನಾದರೂ ಅಭಿಪ್ರಾಯ ಪಟ್ಟಿದ್ದಾರೆಯೆ, ಅವರ ಅಭಿಪ್ರಾಯ ಹೇಗಿದೆ, ನಮ್ಮೊಡನೆ ಸೇರುವುದಕ್ಕೆ ಒಪ್ಪುತ್ತಾರೆಯೆ ಎಂಬುದನ್ನು ಸಂಗ್ರಹಿಸಿಲ್ಲ. ಈ ವಿಷಯ ಅಪ್ರಕೃತವೆಂದು ಅವರು ಭಾವಿಸಿರಬಹುದು. ಆದರೂ ಇದನ್ನು ಬಿಟ್ಟಿರುವುದರಿಂದ ವರದಿ ಅಪರಿಪೂರ್ಣವೆಂದು ಭಾವಿಸುವುದಿಲ್ಲ. ಏಕೆಂದರೆ, ಅನೇಕ ಕಡೆಗಳಲ್ಲಿ ಅನೇಕ ರೀತಿಗಳಲ್ಲಿ ಈ ವಿಷಯವಾಗಿ ಜನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅವೆಲ್ಲವೂ ದೇಶದ ಮುಂದಿವೆ. ಆದುದರಿಂದ ಸಮಿತಿಯವರು ಇದನ್ನು ಕೈಬಿಟ್ಟಿರಬಹುದು ಅಥವಾ ಬರೆದುಕೊಳ್ಳುವುದಕ್ಕಾಗಲಿಲ್ಲವೆಂದು ಕಾಣುತ್ತದೆ. ಈಬಗ್ಗೆ ಹೆಚ್ಚು ಆಕ್ಷೇಪಣೆಯೇನೂ ಇಲ್ಲ. ಆದರೆ ಕೆಲವು ಆರ್ಥಿಕ ವಿಷಯಗಳಿಗೆ ಸಂಬಂಧಪಟ್ಟ ಚಿತ್ರವನ್ನು ನಮ್ಮ ಮುಂದಿಡುವಾಗ ಕೆಲವು ಅಂಶಗಳನ್ನು ಸಮಿತಿಯವರು ಕೈಬಿಟ್ಟಿದ್ದಾರೆ. ಈ ರೀತಿ

(ಶ್ರೀ ಎಸ್. ಗೋಪಾಲಗೌಡ).

ಬಿಟ್ಟರೆ ಏನಾಗುತ್ತದೆಂದರೆ, ಅವರ ಚಿತ್ರದಲ್ಲಿ ಒಂದೆಡೆ ಉತ್ಪ್ರೇಕ್ಷೆ ಬಂದು ಹೆಚ್ಚು ಜೋತಾ ತೋರಿಸುವುದಕ್ಕವಕಾಶವಾಗುತ್ತದೆ. ಇದನ್ನು ಬೊಂಬಾಯಿ ಶಾಸನ ಸಭೆಯ ಶ್ರೀಮಾನ್ ಕಂಠಿಯವರು ಒಂದು ಲೇಖನದಲ್ಲಿ ವಿವರಿಸಿದ್ದಾರೆ. ಈ ವರದಿಯಲ್ಲಿ ಯಾವ ಯಾವ ಅಂಶಗಳನ್ನು ಕೈಬಿಟ್ಟಿದ್ದಾರೆ, ಯಾವ ರೀತಿ ಉಳಿತಾಯ ಪ್ರದೇಶವಾಗುತ್ತದೆ ಎಂಬುದನ್ನು ಕಂಡುಕೊಳ್ಳುವುದಕ್ಕೆ ಅವರ ಲೇಖನ ಅನುಕೂಲವಾಗುತ್ತದೆ. ಆ ಕನ್ನಡ ಪ್ರದೇಶಗಳ ಆರ್ಥಿಕಸ್ಥಿತಿ ಬಹಳ ಹದಗೆಟ್ಟಿದೆ ಎನ್ನುವುದು ಸೂಕ್ತವಲ್ಲ, ಅದನ್ನು ಸರಿಪಡಿಸಲು ಎಲ್ಲಾ ಅನುಕೂಲಗಳೂ ಇವೆ ಎಂಬುದನ್ನು ಅವರು ಈಗಾಗಲೇ ದೇಶದ ಮುಂದಿಟ್ಟಿದ್ದಾರೆ.

ಶ್ರೀಮಾನ್ ಲಕ್ಕಪ್ಪನವರು ಮಾತನಾಡುತ್ತಾ ಮೈಸೂರಿನಲ್ಲಿ ಬಹಳ ರಸ್ತೆಗಳಿವೆ, ಅಲ್ಲಿ ಬಹಳ ಕಡಮೆ ಎಂದು ಹೇಳಿದರು. ಮುಂಬಯಿ ಕನ್ನಡ ಪ್ರಾಂತ್ಯಗಳ ರಸ್ತೆಗಳನ್ನು ಲೆಕ್ಕ ಹಾಕುವಾಗ ಸಹಸ್ರಾರು ಮೈಲಿ ಗ್ರಾಮಾಂತರ ರಸ್ತೆಗಳನ್ನು ಕೈಬಿಟ್ಟಿದ್ದಾರೆಂಬುದು ಒಂದು. ಆಮೇಲೆ ವೈದ್ಯ ಸಹಾಯದ ವಿಷಯದಲ್ಲಿ ಹೇಳುವಾಗ ಸರ್ಕಾರ ನೆರವು ನೀಡುವ ವೈದ್ಯರುಗಳನ್ನು ಮುಂಬಯಿ ಪ್ರಾಂತ್ಯದ ಚಿತ್ರದಲ್ಲಿ ಕೈಬಿಟ್ಟಿದ್ದಾರೆ. ಆಸ್ಪತ್ರೆಗಳು ಮತ್ತು ಔಷಧಾಲಯಗಳ ಸಂಖ್ಯೆಗಳಲ್ಲಿ ವ್ಯತ್ಯಾಸವಾಗಿದೆ. ಸಮಿತಿಯವರು ಹೇಳಿರುವುದು 84, ಆದರೆ ವಾಸ್ತವವಾಗಿ ಇರುವುದು 108; ವೈದ್ಯ ವ್ಯವಸ್ಥೆಗಳ ಸಂಖ್ಯೆ ವರದಿಯಲ್ಲಿ ಹೇಳಿರುವಂತೆ 84 ಅಲ್ಲ 284 ಎಂದು ತೋರಿಸಿಕೊಟ್ಟಿದ್ದಾರೆ.

ಶ್ರೀ ಬಿ. ವಿ. ನಾರಾಯಣ ರೆಡ್ಡಿ.—ಪ್ರೈವೇಟ್ ಪ್ರಾಕ್ಟಿಷನರ್ಸ್ ಸೇರಿ ?

ಶ್ರೀ ಎಸ್. ಗೋಪಾಲಗೌಡ.—ಅಲ್ಲ. Aided Ayurvedic, Allopathic Dispensaries and Hospitals.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಹಾಗಿದ್ದರೆ ಅವರು ಮಾಡಿರುವ ಈ ವರದಿ ತಪ್ಪು, ಸರಿಯಿಲ್ಲ ಎಂತಲೆ ?

Mr. SPEAKER.—May I bring to the notice of the Hon'ble Member that he can refute the statement while making his speech ?

Sri A. BHEEMAPPA NAIK.—This is not an incontrovertible statement. Even the Budget is being controverted by my friend every minute. When that is the case, this is only a report of the Committee, and he is questioning the very report that is given. It is not incontrovertible or incompatible.

ಶ್ರೀ ಎ. ವಿ. ನರಸಿಂಹರೆಡ್ಡಿ.—ಯಾವ ಸರ್ಕಾರದಿಂದ ಅಂಕಿ ಅಂಶಗಳನ್ನು ಸಂಗ್ರಹಿಸಿದ್ದಾರೋ ಆ ಸರ್ಕಾರದ ವಿಷಯವನ್ನು ಪ್ರಶ್ನೆ ಮಾಡಿದಂತಾಗಲಿಲ್ಲವೆ ಎಂದು ನಾನು ಹೇಳುವುದು.

ಶ್ರೀ ಬಿ. ವಿ. ನಾರಾಯಣ ರೆಡ್ಡಿ.— ಇದು ಸುಳ್ಳಾಗಿದ್ದರೆ ಇನ್ನೊಂದು ಸಮಿತಿ ಮಾಡಿ.

Mr. SPEAKER.—When other Members speak, they can take a chance and contradict the figures if they think that a Member has not made a correct statement.

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ಈ ವಿಷಯಗಳನ್ನು ಸಭೆಯ ಗಮನಕ್ಕೆ ತರುವ ಉದ್ದೇಶವಾದರೂ ಇಷ್ಟೆ ; ಈಗ ನಮಗೆ ಶೇಷಾದ್ರಿ ಸಮಿತಿಯವರು ಏನೇನು ವಿವರಗಳನ್ನೊದಗಿಸಿದ್ದಾರೋ ಇವುಗಳಲ್ಲದೆ ಮತ್ತೆ ಕೆಲವು ವಿವರಗಳನ್ನು ಸಂಗ್ರಹಿಸುವುದಕ್ಕೆ ಇವರಿಗೆ ಸಾಕಷ್ಟು ಅನುಕೂಲಗಳಿಲ್ಲದೆ ಕೈ ಬಿಟ್ಟಿದ್ದಾರೆ ; ಇದರಲ್ಲಿ ಇವರು ಕೊಟ್ಟಿರುವುವೇ ಕೊನೆಯ ಮಾತು, ನೂರಕ್ಕೆ ನೂರು ಸರಿ ಎಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ, ಇವರು ಬರಿಯ ಅಂಕಿ ಸಂಖ್ಯೆಗಳನ್ನು ಮಾತ್ರ ಕೊಟ್ಟಿಲ್ಲ ; comparative statement ಮಾಡಿದ್ದಾರೆ. ಹೀಗೆ ಮಾಡುವಾಗ ಮೈಸೂರು ದೇಶದ ಆಯುರ್ವೇದ, ಯುನಾನಿ ಔಷಧಾಲಯಗಳನ್ನೆಲ್ಲಾ ಗಣನೆಗೆ ತೆಗೆದುಕೊಂಡು ಅಲ್ಲಿ ಮಾತ್ರ ಇವುಗಳನ್ನು ಕೈಬಿಟ್ಟರೆ ಹೇಗೆ ? ಅಲ್ಲಿಯೂ ಇದನ್ನು ಸೇರಿಸಬೇಕು.

ಶ್ರೀ ಬಿ. ವಿ. ನಾರಾಯಣ ರೆಡ್ಡಿ.—'Works consulted' ಎಂದಿದೆ, ಅದನ್ನು ನೋಡಿ.

ಶ್ರೀ ಎಸ್. ಗೋಪಾಲಗೌಡ.—ಕೆಲವು ಸಂದರ್ಭಗಳಲ್ಲಿ ವಿಷಯಗಳನ್ನು ಸಂಗ್ರಹ ಮಾಡುವುದಕ್ಕಾಗದೆ ಕೈ ಬಿಟ್ಟಿದ್ದಾರೆಂದು ಹೇಳಿದೆ. ಅವರು ನೋಡಿರುವುದನ್ನು ನಾನೂ ನೋಡಿದ್ದೇನೆ, ಮಾನ್ಯ ಸದಸ್ಯರೂ ನೋಡಿದ್ದಾರೆ. ಮಾನ್ಯ ಸದಸ್ಯರು ಯಾವುದನ್ನು ಅವರು ಕೈ ಬಿಟ್ಟಿದ್ದಾರೆಂಬುದನ್ನು ಗಮನಿಸಬೇಕು.

ಸಹಕಾರದ ವಿಷಯದಲ್ಲಿ ಸಮಿತಿಯವರು ಪೂರ್ಣ ವಿವರಗಳನ್ನೊದಗಿಸಿಲ್ಲ. ಮೈಸೂರಿಗಿಂತ ಅಲ್ಲಿ ಸರಕಾರ ಬಹಳ ಪ್ರಗತಿ ಪಡೆದಿದೆ. ಅಲ್ಲದೆ ಅಲ್ಲಿನ ಆದಾಯ ವೆಚ್ಚಗಳನ್ನು ಲೆಕ್ಕ ಮಾಡುವಾಗ ಭಾರತ ಸರ್ಕಾರದಿಂದ ಬರಬಹುದಾದ ಗ್ರ್ಯಾಂಟು, ಸಹಾಯಗಳು, ಒಟ್ಟಿನ ಗಳಿಕೆಗಳು, ಸಂಸ್ಥಾನದ ನಿಧಿಯ ವಾಪಸಾತಿಗಳು, ಕೇಂದ್ರದ ಎಕ್ಸೈಜ್ ಗಳಿಕೆಯಲ್ಲಿನ ಭಾಗ ಮುಂತಾದ ಅಂಶಗಳನ್ನು ಸಮಿತಿ ಆದಾಯದ ಕಡೆಗೆ ಸೇರಿಸಿಕೊಂಡಿಲ್ಲ. ಆಮೇಲೆ, ಸಾಮಾನ್ಯವಾಗಿ, ಒಂದು ಪ್ರಾಂತ್ಯದ ಆದಾಯ ವೆಚ್ಚವನ್ನು ಕಂಡುಕೊಳ್ಳುವುದಕ್ಕೆ ಕೊನೆಯ ಪಕ್ಷ ಮೂರು ವರ್ಷಗಳ ಅಂಕಿ ಅಂಶಗಳ ಸರಾಸರಿಯನ್ನು ಲೆಕ್ಕ ಹಾಕಬೇಕು. ಹಾಗಿಲ್ಲದೆ ಯಾವುದೋ ಒಂದು ವರ್ಷದ್ದನ್ನು ತೆಗೆದುಕೊಂಡರೆ, ಆ ವರ್ಷದಲ್ಲಿ ಉಳಿತಾಯಗಳಲ್ಲಿ ಹೆಚ್ಚಿರಬಹುದು ಅಥವಾ ಕಡಮೆಯಿರಬಹುದು. ಹಿಂದಿನ ಮೂರು ವರ್ಷಗಳ ಲೆಕ್ಕವನ್ನು ತೆಗೆದುಕೊಂಡರೆ ಸರಿಯಾದ ಆಧಾರವಾಗುತ್ತದೆ. ಹಿಂದೆ ಧಾರ್ ಸಮಿತಿ ಕೂಡ ಹೀಗೆ ಮಾಡಿದೆ. ಬಿಹಾರ್, ಒರಿಸ್ಸಾ, ಸಿಂಧ್ ಪ್ರಾಂತ್ಯಗಳನ್ನು ನಿರ್ಮಾಣ ಮಾಡಿದಾಗ ಹಿಂದಿನ ಮೂರು ವರ್ಷಗಳ ಅಂಕಿಗಳನ್ನು ತೆಗೆದುಕೊಂಡು ಲೆಕ್ಕಮಾಡಿದ್ದಾರೆ. ಇದನ್ನು ಕೆಲವು ಸಂದರ್ಭಗಳಲ್ಲಿ ಈ ಸಮಿತಿಯವರು ಬಿಟ್ಟಿದ್ದಾರೆ. ಹೊರಗಿನ ಕನ್ನಡ ಪ್ರದೇಶದವರು ಪ್ರತಿಯೊಂದು ವಿಷಯದಲ್ಲಿಯೂ ಬಹಳ ಹಿಂದುಳಿದಿದ್ದಾರೆಂದು ಶ್ರೀ ಲಕ್ಕಪ್ಪನವರು ಹೇಳಿದರು. ಕೆಲವು ವಿಷಯಗಳಲ್ಲಿ ಹಿಂದುಳಿದಿದ್ದಾರೆಂಬುದನ್ನು dispute ಮಾಡುವುದಕ್ಕಾಗುವುದಿಲ್ಲ, ಒಪ್ಪಿಕೊಳ್ಳಬೇಕು ; ಅವರೂ ಒಪ್ಪಿಕೊಳ್ಳಬೇಕು, ನಾವೂ ಒಪ್ಪಿಕೊಳ್ಳಬೇಕು. ಇದರಲ್ಲಿ ಅವಮಾನವೂ ಇಲ್ಲ, ಗಂಡಾಂತರವೂ ಇಲ್ಲ, ತೊಂದರೆಯೂ ಆಗುವುದಿಲ್ಲ. ಅಕ್ಷರಸ್ಥರ ಪ್ರಮಾಣವನ್ನು ಹೋಲಿಸಿದರೆ ಮೈಸೂರಿಗಿಂತ ಹೊರಗಡೆ ಹೆಚ್ಚಾಗಿದ್ದಾರೆ. ಆದರೆ ಹೈದರಾಬಾದಿನಲ್ಲಿ ಮಾತ್ರ 8.49 ರಷ್ಟು ಕಡಮೆ ಇದೆ. ಅಲ್ಲಿ ಜನರಲ್ಲಿ ವಿದ್ಯೆ

ಕಡಮೆಯಿರುವುದಕ್ಕೆ ಸ್ಕೂಲುಗಳ ವ್ಯವಸ್ಥೆ ಇಲ್ಲ. ಇದ್ದರೂ ಉರ್ದು ಸ್ಕೂಲುಗಳು. ಇದರಿಂದ ಅನೇಕ ಸಂದರ್ಭಗಳಲ್ಲಿ ಕನ್ನಡದ ಜನರಿಗೆ ವಿದ್ಯೆಯಿಲ್ಲ. ಬಿದರೆ, ರಾಯಚೂರು ಗುಲ್ಬರ್ಗ ಜಿಲ್ಲೆಗಳು ಈ ವಿಷಯದಲ್ಲಿ ಹಿಂದುಳಿದಿವೆ. ಅದೇ ಮುಂಬಯಿ ಕರ್ನಾಟಕ ಮೈಸೂರಿಗಿಂತ ಮುಂದಿದೆ; ಅಲ್ಲಿ 2.20 ರಷ್ಟು ಹೆಚ್ಚಿದ್ದಾರೆ. ಮೈಸೂರಿನಲ್ಲಿ ಶೇಕಡ 20.60, ಮುಂಬಯಿ ಕರ್ನಾಟಕದಲ್ಲಿ 22.30, ದಕ್ಷಿಣ ಕನ್ನಡದಲ್ಲಿ 23.30, ಕೊಡಗಿನಲ್ಲಿ 27.20 ಇದ್ದಾರೆ.

ವಯಸ್ಸಿಗೆ ಬಂದ ಮಕ್ಕಳು ಯಾವ ರೀತಿ ಸ್ಕೂಲಿಗೆ ಹೋಗುತ್ತಾರೆಂಬುದನ್ನು ನೋಡಿದರೆ, ಮೈಸೂರಿನಲ್ಲಿ ಶೇಕಡ 34, ಹೈದರಾಬಾದಿನಲ್ಲಿ 20, ಮುಂಬಯಿ ಕರ್ನಾಟಕದಲ್ಲಿ 36, ದಕ್ಷಿಣ ಕನ್ನಡದಲ್ಲಿ 70, ಕೊಡಗಿನಲ್ಲಿ 47 ಜನ ಹೋಗುತ್ತಿದ್ದಾರೆ. ಆದ ದರಿಂದ ಶಾಲೆಗೆ ಹೋಗುವ ಮಕ್ಕಳ ವಿಷಯದಲ್ಲಿಯೂ ಹೈದರಾಬಾದನ್ನು ಬಿಟ್ಟರೆ ಮಿಕ್ಕೆಲ್ಲ ಪ್ರದೇಶಗಳೂ ಬಹಳ ಮುಂದಿವೆ.

ಹೀಗೆಯೇ, ಕೃಷಿಯೋಗ್ಯವಾದ ಭೂಮಿ ಎಲ್ಲೆಲ್ಲಿ ಎಷ್ಟೆಷ್ಟಿದೆ ಎಂಬುದನ್ನು ನೋಡಬಹುದು. ಮೈಸೂರಿನಲ್ಲಿ ತಲೆಯೊಂದಕ್ಕೆ 0.9 ಎಕರೆ, ಹೈದರಾಬಾದಿನಲ್ಲಿ 2.1 ಎಕರೆ, ಮುಂಬಯಿ ಕರ್ನಾಟಕದಲ್ಲಿ 1.6 ಎಕರೆ, ದಕ್ಷಿಣ ಕನ್ನಡದಲ್ಲಿ 0.31 ಎಕರೆ, (ಇಲ್ಲಿ ಜನ ಸಂಖ್ಯೆ ಹೆಚ್ಚು, ಭೂಮಿ ಕಡಮೆ), ಕೊಡಗಿನಲ್ಲಿ 1.9 ಎಕರೆ.

ಸಹಕಾರದ ವಿಷಯದಲ್ಲಿಯೂ ಕೂಡ ಮೈಸೂರಿಗಿಂತ ಅವರು ಮುಂದಿದ್ದಾರೆ. ಮುಂಬಯಿ, ಮದರಾಸು, ಕೊಡಗು ಇವುಗಳಲ್ಲಿ ಷೇರು ಬಂಡವಾಳ, ಸಂಘಗಳ ಸಂಖ್ಯೆ, ಚಾಲ್ತಿ ಬಂಡವಾಳ ಹೆಚ್ಚಾಗಿದೆ; ಈ ಸಮಿತಿಯ ವರದಿಯಂತೆ ಮುಂಬಯಿ ಕರ್ನಾಟಕದಲ್ಲಿ ಸಂಘವೊಂದರ ಸರಾಸರಿ ಷೇರು ಬಂಡವಾಳ 5,500 ರೂಪಾಯಿ, ಮೈಸೂರಿನಲ್ಲಿ 3,300 ರೂಪಾಯಿ; ಚಾಲ್ತಿ ಬಂಡವಾಳ ಮುಂಬಯಿ ಕರ್ನಾಟಕದಲ್ಲಿ 37,000 ರೂಪಾಯಿ, ಮೈಸೂರಿನಲ್ಲಿ 14,000 ರೂಪಾಯಿ ಇದೆ.

ಆಮೇಲೆ ಆದಾಯ ವೆಚ್ಚಗಳನ್ನು ಅವರು ಕಂಡು ಹಿಡಿಯುವಾಗ ಸಾಮಾನ್ಯವಾಗಿ ಜಿಲ್ಲಾವಾರು ಲೆಕ್ಕಗಳಿಗಾಗಿ ಹುಡುಕಿದ್ದಾರೆ. ಜಿಲ್ಲಾವಾರು ಲೆಕ್ಕಗಳು ಕೆಲವಿರುತ್ತವೆ, ಸಂಸ್ಥಾನದ ಒಟ್ಟು ಆದಾಯ ವೆಚ್ಚದ ಲೆಕ್ಕಗಳೂ ಇರುತ್ತವೆ. ಉದಾಹರಣೆಗೆ, ಪಂಚವಾರ್ಷಿಕಯೋಜನೆಯಲ್ಲಿ ಕೆಲವು ವಿಷಯಗಳಿಗೆ ಸಂಸ್ಥಾನಾದ್ಯಂತ ಹಂಚುವುದಕ್ಕೆ ಕೊಟ್ಟಿರುತ್ತೇವೆ, ಜಿಲ್ಲಾವಾರು ಕೊಟ್ಟಿರುವುದಿಲ್ಲ. ಇಂಥ ಸಂದರ್ಭದಲ್ಲಿ ಜಿಲ್ಲೆ ಜಿಲ್ಲೆಗೂ ಕರಾರುವಾಕು ಲೆಕ್ಕಕೊಡುವುದು ಕಷ್ಟವಾಗುತ್ತದೆ. ಹೀಗೆ ದಕ್ಷಿಣ ಕನ್ನಡಕ್ಕೆ ಲೆಕ್ಕ ಹಾಕಿ ಅದು ಬಹಳ ಖೋತಾ ಪ್ರದೇಶವೆಂದು ಹೇಳಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆ ಖೋತಾ ಪ್ರದೇಶವಾಗುವುದಿಲ್ಲ.

ಇದರಲ್ಲಿ ಜಿಲ್ಲಾವಾರು ಲೆಖ್ಖಗಳನ್ನು ಕೊಡುವಾಗ, ಬಡ್ಡಿ ಅಂಶ, ರೈಲ್ವೆಯಿಂದ ಬಂದಿರುವ ಪ್ರತಿಫಲ, ಸ್ಯೂಪರಾನ್ಯುಯೇಷನ್ ಆದಾಯ, stationery ಮತ್ತು printing ಆದಾಯ, ರಸ್ತೆ ಮುಂತಾದ್ದರಿಂದ ಆದಾಯ, ಸಾಮೂಹಿಕಾಭಿವೃದ್ಧಿ ಯೋಜನೆಗಳಿಗೆ ಕೇಂದ್ರ ಸಹಾಯ, ಹೆಚ್ಚು ಆಹಾರ ಬೆಳೆಯಿರಿ ಇತ್ಯಾದಿ ವಿಷಯಗಳನ್ನು ಅವರು ಲೆಖ್ಖಕ್ಕೆ ತೆಗೆದುಕೊಂಡಿಲ್ಲ. ಮುಂಬಯಿ ಕರ್ನಾಟಕದಲ್ಲಿ ಇವುಗಳಿಂದ ಒಟ್ಟು ಎರಡು ಕೋಟಿ ರೂಪಾಯಿ ಆದಾಯ ಬಂದಿದೆ. ಆ ಜಿಲ್ಲೆಗಳು ತಮ್ಮ ಪಾಲು ತರುವುದಿಲ್ಲವೇ ಎಂಬುದನ್ನು ನೋಡಬೇಕು. ಹೈದರಾಬಾದ್ ಕರ್ನಾಟಕ ಈಗಲೇ ಉಳಿತಾಯದ ಪ್ರಾಂತ್ಯವಾಗಿರುತ್ತದೆ ಮತ್ತು ಉಳಿತಾಯದ ಪ್ರಾಂತ್ಯವಾಗುತ್ತದೆ ಎಂಬುದನ್ನು ಕೂಡ ನಾವು ತಿಳಿದುಕೊಳ್ಳಬಹುದು. ಆಮೇಲೆ ಮಾರಾಟ ತೆರಿಗೆಯಿಂದ ಬರತಕ್ಕಂಥ ಆದಾಯವನ್ನು ಕೂಡ ಲೆಕ್ಕಕ್ಕೆ ತೆಗೆದುಕೊಳ್ಳಬೇಕು. ಹೈದರಾಬಾದಿನಲ್ಲಿ ಅನೇಕ ಘಟ್ಟದ ತೆರಿಗೆ ಇದೆ. Multi-point tax ವಿಧಿಸುತ್ತಿದ್ದಾರೆ. ಇದು ಹೈದರಾಬಾದಿನ ಆದಾಯದ ಜೊತೆಯಲ್ಲಿ ಸೇರಿಸಬೇಕು. ಮುಂಬಯಿನಲ್ಲಿ ಎರಡು ಕೋಟಿ ಆದಾಯ ತೆರಿಗೆ ಹಾಕಿದ್ದಾರೆ. ಅಲ್ಲಿ ಸುಮಾರು 40-45 ಲಕ್ಷ ರೂಪಾಯಿ ಮುಂಬಯಿನ ಒಟ್ಟು ಆದಾಯದಲ್ಲಿ ಬರಬೇಕಾಗಿದೆ. ಈ ಅಂಕಿ ಅಂಶಗಳನ್ನು ನಾವು ಪರೀಕ್ಷೆ ಮಾಡಿನೋಡಿದರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಸಮಿತಿಯ ವರದಿ ಪ್ರಕಾರ, ನೇರವಾಗಿ ಬರುವ ಆದಾಯದಿಂದ ವೆಚ್ಚ ಕಳೆದರೆ, minus 8.8 ಲಕ್ಷ ಎಂದು ಹೇಳಿದ್ದಾರೆ, ಅದರ ಬದಲು ನಾನು ಮೇಲೆ ಹೇಳಿದ ಲೆಖ್ಖಗಳನ್ನೆಲ್ಲಾ ತೆಗೆದುಕೊಂಡು ವಿವೇಚನೆ ಮಾಡಿ ನೋಡಿದರೆ 3.49 ಲಕ್ಷ ಹೆಚ್ಚುವರಿ ಬರುತ್ತದೆ. That means it will become a surplus district. ಆಮೇಲೆ ಮುಂಬಯಿನಲ್ಲಿ ಸರ್ಕಾರ 1955 ಮಾರ್ಚಿ ತಿಂಗಳಿಗೆ ಇಷ್ಟು ಬಡ್ಡಿ ಕೊಡಬೇಕಾಗುತ್ತದೆ ಎಂದು ಹೇಳುವಾಗ, ಮುಂಬಯಿ ಸರ್ಕಾರಕ್ಕೆ ಬಡ್ಡಿ ಬರತಕ್ಕಂಥ ಸಾಲಗಳು ಎಷ್ಟು ಇವೆ ಎಂಬುದನ್ನು ಕೈಬಿಟ್ಟಿದ್ದಾರೆ. ಆದ್ದರಿಂದ ಈ ಜಿಲ್ಲೆಗಳ ವಿಷಯದಲ್ಲಿಯೂ ಕೂಡ 76.46 ಕೋಟಿ ರೂಪಾಯಿಗಳ ಬಡ್ಡಿ ತೆರಬೇಕಾದ ಸಾಲಗಳು ಇವೆ, ಆದರೆ ಬಡ್ಡಿ ಬರುವ ಆಸ್ತಿ ಎಷ್ಟು ಇವೆ ಎಂದು ಹೇಳಲಿಲ್ಲ. ಬಡ್ಡಿ ಬರುವ ಆಸ್ತಿ ವಾಸ್ತವವಾಗಿ 85.1 ಕೋಟಿ ರೂಪಾಯಿಗಳಷ್ಟು ಇದೆ. ಹೀಗೆಯೇ ಪ್ರಾವಿಡೆಂಟ್ ಫಂಡಿನ ಮೊತ್ತವನ್ನು ಸಹ ನೋಡಬೇಕು. ಆದರೆ ರಿಸರ್ವ್ ಫಂಡಿನಲ್ಲಿ ಇಷ್ಟು ಹಣ ಇದೆಯೆಂದು ಹೇಳಲಿಲ್ಲ. ಪ್ರಾವಿಡೆಂಟ್ ಫಂಡಿನಲ್ಲಿ 13.40 ಕೋಟಿ ಇದೆ ಎಂದು ಹೇಳಿ ರಿಜರ್ವ್ ಫಂಡಿನಲ್ಲಿದ್ದ 32.40 ಕೋಟಿಯಷ್ಟು ಹಣವನ್ನು ಅವರು ಕೈಬಿಟ್ಟಿದ್ದಾರೆ. ಹೈದರಾಬಾದಿನ ವಿಷಯದಲ್ಲಿ ತುಂಗಭದ್ರಾ ಯೋಜನೆಗೆ, ರಾಜಲ್ ಬಂಡ ಡೈವರ್ಷನ್ ಯೋಜನೆಗೆ 17 ಕೋಟಿ ಮತ್ತು ಘಟಪ್ರಭಾ ಯೋಜನೆಗೆ 17 ಕೋಟಿ ಬೇಕಾಗುತ್ತದೆ ಎಂದು ಹೇಳಿದ್ದಾರೆ. ಕೇಂದ್ರ ಸರ್ಕಾರದವರು ಅನೇಕ ವಿಧವಾಗಿ ಈ ವಿಚಾರದಲ್ಲಿ ಸಹಾಯ ಮಾಡುತ್ತಿದ್ದಾರೆ. ಇವೊತ್ತು ಕೂಡಾ ನಮ್ಮ ಸಂಸ್ಥಾನದಲ್ಲಿ ಮೊದಲನೆಯ ಪಾಂಚವಾರ್ಷಿಕ ಯೋಜನೆಗೆ ಸುಮಾರು 14 ಕೋಟಿ ರೂಪಾಯಿ ಕಡಮೆ ಬಿದ್ದಿದೆ. ಅದನ್ನು ಯಾವರೀತಿ ಭರ್ತಿಮಾಡಬೇಕು ಎಂಬುದನ್ನು ದಾರಿ ಕಾಣದೆ ಇದ್ದೇವೆ ಮತ್ತು ಕೇಂದ್ರದ ಕಡೆ ನೋಡುತ್ತಿದ್ದೇವೆ. ಹಾಗೆಯೇ ಪಾಂಚವಾರ್ಷಿಕ ಯೋಜನೆಗಳನ್ನು ಕಾರ್ಯಗತ ಮಾಡುವಾಗ ಅನೇಕ ವೇಳೆ ನಾವು ಕೇಂದ್ರ ಸರ್ಕಾರದ ಮೇಲೆ ಹೆಚ್ಚಿಗೆ ಅವಲಂಬಿಸಿಕೊಂಡಿರುತ್ತೇವೆ. ಇವೊತ್ತೂ ಈ ವಿಷಯಗಳನ್ನು ಪರಿಶೀಲನೆ ಮಾಡಿ ನೋಡಿದರೆ, ಕರ್ನಾಟಕ ಪ್ರಾಂತ್ಯ ನಿರ್ಮಾಣವಾದರೆ, ಹೊಸದಾಗಿ ಮೈಸೂರಿಗೆ ಬರತಕ್ಕಂಥ ಪ್ರದೇಶಗಳು ನಮಗೆ ಆದಾಯ ವಿಷಯದಲ್ಲಿ ಕೊರತೆ ಪ್ರದೇಶಗಳಾಗುವುದಿಲ್ಲ ಎನ್ನುವುದನ್ನು ನಾವು ಚೆನ್ನಾಗಿ ತಿಳಿದುಕೊಳ್ಳಬಹುದು. ಆದುದರಿಂದ ಒಂದು ಆರ್ಥಿಕ ದೃಷ್ಟಿಯಿಂದಲೂ ಕೂಡ ನಮಗೆ ಅವು ಹೊರೆಯಾಗುವುದಿಲ್ಲ ಎನ್ನುವುದನ್ನು ನಾವು ಚೆನ್ನಾಗಿ ಮನಗಾಣಬೇಕಾಗಿದೆ. ಇನ್ನು ಅಲ್ಲಿ ಪ್ರಾಕೃತಿಕ ಸಂಪತ್ತಿನ ಕೊರತೆ ಇದೆಯೆಂದು ಯಾರೂ ಹೇಳುವುದಕ್ಕಾಗುವುದಿಲ್ಲ. ಬಿಜಾಪುರದ ಕಪ್ಪು ಮಣ್ಣು ಇಡೀ ನಮ್ಮ ದೇಶದಲ್ಲಿ ಹೆಸರುವಾಸಿಯಾಗಿದೆ. ಆದರೆ

(ಶ್ರೀ ಎಸ್. ಗೋಪಾಲಗೌಡ).

ಅಲ್ಲಿ ನೀರಿನ ಆಸರೆಯಿಲ್ಲವೇನೋ ನಿಜ. ಆದ್ದರಿಂದ ನೀರಿಗೆ ತಕ್ಕ ಏರ್ಪಾಡನ್ನು ಮಾತ್ರ ಮಾಡಬೇಕಾಗಿದೆ. ಬಿಜಾಪುರದಲ್ಲಿ ಬೆಳೆಯುತಕ್ಕ ಗೋದಿಯನ್ನು ಇನ್ನೆಲ್ಲಿ ಬೆಳೆಯುವುದೂ ಕಷ್ಟ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಮಲೆನಾಡಿನಿಂದಲೂ ಸಂವೃದ್ಧಿಯಾಗಿದೆ.

ಶ್ರೀ ಎಸ್. ಗೋಪಾಲಗೌಡ.—ಆದ್ದರಿಂದ ಅಲ್ಲಿ ವಿವಿಧ ಸಂಪತ್ತು ಹೇರಳವಾಗಿದೆ. ಖನಿಜ ಸಂಪತ್ತು ಹೊರಗಡೆ ಇಂಡಿಯಾ ದೇಶದಲ್ಲಿ ಎಲ್ಲಿಯೂ ಇಲ್ಲದಷ್ಟು ದಕ್ಷಿಣ ಇಂಡಿಯಾದಲ್ಲಿ ಇದೆ, ಅದರಲ್ಲಿಯೂ ಹೆಚ್ಚಿನ ಭಾಗ ಇಲ್ಲಿ ಅಡಗಿದೆ ಎಂಬುದನ್ನು ಕಂಡುಕೊಳ್ಳಬಹುದು. ಯಾವುದಾದರೂ ಹೊರಗಡೆಯಿಂದ ಬರತಕ್ಕ ಪ್ರದೇಶಗಳನ್ನು ನಾವು ತಾತ್ಸಾರ ದೃಷ್ಟಿಯಿಂದ ನೋಡುವುದಕ್ಕೆ ಸಾಧ್ಯವಿಲ್ಲ.

ಇನ್ನೊಂದು ಅಂಶವನ್ನು ನಾವು ಈ ಸಂದರ್ಭದಲ್ಲಿ ಮನಗಾಣಬಹುದಾಗಿದೆ. ಮಲೆನಾಡು ಪ್ರಕೃತಿದತ್ತವಾದ ನಾನಾ ಸಂಪತ್ತುಗಳಿಂದ ಕೂಡಿದೆ; ಪ್ರಕೃತಿದೇವಿಯು ಮನಬಿಟ್ಟು ರಾರಾಜಿಸುತ್ತಿರುವ ಕಾಡುಗಳಿಂದ ಕೂಡಿದೆ; ಅವನ್ನು ರೂಢಿಸಿಕೊಂಡು, ಮನುಷ್ಯನು ತನ್ನ ಅನುಕೂಲಕ್ಕೆ ಅಳವಡಿಸಿಕೊಳ್ಳಬೇಕಾಗಿದೆ. ಅದನ್ನು ಇನ್ನೂ ಹಾಗೆ ಅಳವಡಿಸಿಲ್ಲ. ಆದ್ದರಿಂದ ಈಗ ಏನಾಗಿದೆ ಎಂದರೆ, ಮಲೆನಾಡು ಉದ್ದಕ್ಕೂ ಎರಡು ಸಾವಿರ ಮೈಲ ಮಲೇರಿಯಾ ತವರೂರು ಮಾಡಿಕೊಂಡಿರುವುದರಿಂದ, ಅಲ್ಲಿ ಜೀವನಕ್ಕೇ ಕಷ್ಟವಾಗಿದೆ; ಇಂಥ ಅನೇಕ ಕಾಡುಗಳಲ್ಲಿ ಮನುಷ್ಯ ಪ್ರಕೃತಿಯ ಪ್ರಕೋಪಕ್ಕೆ ಒಳಗಾಗಿ, ಅವನು ಪ್ರಕೃತಿಯ ದಾಸನಾಗಿ ಬೆಳೆಯುತಕ್ಕ ಸಂದರ್ಭಬಂದಿದೆ. ಮೈಸೂರು ದೇಶದ ಮಲೆನಾಡು ಹಾಸನ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಿಗೆ ಮುಗಿದುಹೋಗುವುದಿಲ್ಲ. ಮುಂಬಯಿನ ಸರಹದ್ದಿನಿಂದ ಪ್ರಾರಂಭವಾಗಿ, ಕೊನೆಯಲ್ಲಿ ಕಾಸರಗೋಡಿನಲ್ಲಿ ದಕ್ಷಿಣದ ತುದಿಯ ತನಕ ಹೋಗುತ್ತದೆ. ಇಷ್ಟು ಪ್ರಮಾಣವುಳ್ಳ ಮಲೆನಾಡಿನಲ್ಲಿ ಮನುಷ್ಯ ಪ್ರಾಕೃತಿಕ ಸಂಪತ್ತನ್ನು ತನ್ನ ಅನುಕೂಲಕ್ಕೆ ಮತ್ತು ಸುಖಕ್ಕೆ ಅಳವಡಿಸಿಕೊಳ್ಳಬೇಕಾದರೆ, ಮಲೆನಾಡಿಗೆ ಅನ್ವಯಿಸುವಂತೆ ಒಂದು ಬೃಹತ್ ಯೋಜನೆಯನ್ನು ತಯಾರುಮಾಡಿ, ಅದನ್ನು ಕಾರ್ಯಗತಮಾಡಬೇಕಾಗಿದೆ. ಈ ಅಂಶವನ್ನು ಗಣನೆಗೆ ತೆಗೆದುಕೊಂಡರೆ, ಮಲೆನಾಡಿನ ಬಹುಭಾಗ ಕರ್ನಾಟಕ ಪ್ರಾಂತ್ಯದಲ್ಲಿ ಸೇರಿರತಕ್ಕದ್ದನ್ನು ನಾವು ಕಂಡುಕೊಳ್ಳಬಹುದು. ಇಷ್ಟು ವಿಶಾಲವಾಗಿರತಕ್ಕ ಮಲೆನಾಡಿಗೆ ಒಂದು ಸಮಗ್ರ ಯೋಜನೆಯನ್ನು ನಾವು ರೂಪಿಸಿ, ಆಮೇಲೆ ಒಂದು ಕರ್ನಾಟಕ ಪ್ರಾಂತ್ಯವನ್ನು ಕೈಗೊಂಡದ್ದೇ ಆದರೆ, ಬಹು ದೊಡ್ಡ ಸಂಪತ್ತು ನಮ್ಮ ದೇಶದ ಅನುಕೂಲಕ್ಕೆ ಒದಗುತ್ತದೆ. ಅದು ಕರ್ನಾಟಕಕ್ಕೆ ಮಾತ್ರವೇ ಸಹಕಾರಿಯಾಗಿರುವುದಿಲ್ಲ, ಇಡೀ ಇಂಡಿಯಾ ದೇಶಕ್ಕೇ ಒಂದು ದೊಡ್ಡ ಸಂಪತ್ತನ್ನು ಈ ಕರ್ನಾಟಕ ಪ್ರಾಂತ್ಯ ಮಾಡುವುದರ ಮುಖಾಂತರ ತಂದುಕೊಳ್ಳಬಹುದಾಗಿದೆ. ಇದಕ್ಕೆ ಅನೇಕ ಮಾರ್ಗಗಳಿವೆ. ಶ್ರೀ ಮಾಧವಾಚಾರ್‌ರವರು ಹೇಳಿದಹಾಗೆ ಸಣ್ಣ ಸಣ್ಣ ಜರಿಗಳಿಂದ ಸಣ್ಣ ಸಣ್ಣ ವಿದ್ಯುಚ್ಛಕ್ತಿ ಉತ್ಪಾದನೆ ಮಾಡುವ ಕೇಂದ್ರಗಳನ್ನು ಸ್ಥಾಪಿಸಿ, ಲಕ್ಷೋಪಲಕ್ಷ ಕಿಲೋವಾಟ್ಸ್ ಪವರನ್ನು ಅಲ್ಲಿ ಅತ್ಯಂತ ಸುಲಭತರದಲ್ಲಿ ಪಡೆಯಬಹುದು. ಅಂಥ ಸಣ್ಣ ಯೋಜನೆಗಳು ತಮ್ಮ ಕಣ್ಣಿಗೆ ಕಾಣುತ್ತಾ ಇಲ್ಲ. ಆಮೇಲೆ ಅಲ್ಲಿ ಮರಮಟ್ಟುಗಳು ಎಷ್ಟು ಇವೆ ಎಂಬುದನ್ನು ನೋಡಬೇಕು. ಇವುಗಳನ್ನು ರೂಢಿಸಿಕೊಂಡು ಆ ಮುಖಾಂತರ ದೇಶದ ಸಂಪತ್ತನ್ನು ಹೆಚ್ಚಿಸಬಹುದು. ಆದ್ದರಿಂದ ಈ ಮಲೆನಾಡಿನ ಒಂದು ಅಭಿವೃದ್ಧಿಯ ದೃಷ್ಟಿಯಿಂದಲೂ ಕೂಡ ಈ ಮಲೆನಾಡು ಪ್ರಾಂತ್ಯ ಒಂದೇ ಅಡಳಿತಕ್ಕೆ ಒಳಪಡತಕ್ಕದ್ದು ಬಹಳ ಸೂಕ್ತವಾಗಿದೆ ಎನ್ನುವುದನ್ನು ಕೂಡ ನಾವು ಇವೊತ್ತು ಕಂಡು ಕೊಳ್ಳಬಹುದಾಗಿದೆ. ಇನ್ನು ಮಧ್ಯ ಪ್ರದೇಶವಾದ ನಮ್ಮ ಮೈಸೂರಿಗೆ ಸಮುದ್ರದ ಸಂಪರ್ಕ ದೊರೆತರೆ, ಬಟ್ಕಲ್, ಮಲ್ಪೆ, ಮಂಗಳೂರು ಮತ್ತು ಇತರ ಬಂದರುಗಳ ಮುಖಾಂತರ ನಾವು ವ್ಯಾಪಾರ ಮಾಡುವುದಕ್ಕೆ ತೊಡಗಿದ್ದೇ ಆದರೆ, ಆಗ ಮೈಸೂರಿನ ಆದಾಯ ಮತ್ತು ಉದ್ಯೋಗ ಬಹುವಾಗಿ, ಅಂದರೆ 10 ರಷ್ಟೋ 20 ರಷ್ಟೋ ನಾವು ರೂಢಿಸಿಕೊಳ್ಳುವ ರೀತಿಯಲ್ಲಿ ಹೆಚ್ಚಿ ಅದರಿಂದ ದೇಶದ ಸಂಪತ್ತು ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಿದೆ. ಇವೊತ್ತು ಏನಾಗಿದೆಯೆಂದರೆ, ಪಶ್ಚಿಮ ಘಟ್ಟಗಳು ನಾವು ಸಮುದ್ರಕ್ಕೆ ಹೋಗದಂತೆ ತಡೆದು ನಿಲ್ಲಿಸಿವೆ. ನಮ್ಮ ದೃಷ್ಟಿ ಕೋನವೇ ಅಲ್ಲಿಯತನಕ ಹೋಗದೆ ನಿಂತುಹೋಗಿದೆ. ಇಲ್ಲಿ ಎಷ್ಟೋ ಜನರಿಗೆ ಮಲೆನಾಡು ಎಂದರೆ, ಅಲ್ಲಿಗೆ ಹೋಗುವುದಕ್ಕೇ ಭಯ, ಆದ್ದರಿಂದ ಅದರ ಯೋಚನೆ ಕೂಡ ಮಾಡುವುದಿಲ್ಲ. ಮಲೆನಾಡನ್ನು ದಾಟಿಹೋದಾಗ ಮುಂದೆ ನಮ್ಮ ಕಣ್ಣಿಗೆ ವಿಶಾಲವಾದ ಸಮುದ್ರ ಕಾಣುತ್ತದೆ. ಅಲ್ಲಿ ಹವಾಗುಣ, ಪ್ರಕೃತಿ ಸಂಪತ್ತು, ಸಾಗರದ ಸಂಪತ್ತನ್ನು ನಾವು ಶೋಷಣೆ ಮಾಡಿದರೆ ನಮ್ಮ ದೇಶದ ಆದಾಯ ಬಹುವಾಗಿ ಹೆಚ್ಚುವುದಲ್ಲದೆ ಜನರ ಉದ್ಯೋಗವೂ ಹೆಚ್ಚುತ್ತದೆ. ಅದರಿಂದ ಜನ ಜೀವನವೂ ಸುಖವಾಗುತ್ತದೆ. ಅದನ್ನೂ ಕೂಡ ನಾವು ಮರೆಯಬಾರದು. ಹಾಗಾದರೆ ಅವರೇ ಏತಕ್ಕೆ ಆ ಪ್ರದೇಶವನ್ನು ಅಭಿವೃದ್ಧಿ ಮಾಡಿಕೊಂಡು ಹೋಗಬಾರದು ಎಂದು ಕೇಳಬಹುದು. ದಕ್ಷಿಣ ಕನ್ನಡಜಿಲ್ಲೆ ಮದ್ರಾಸ್ ಪ್ರಾಂತಕ್ಕೆ ಸೇರಿರುತ್ತದೆ. ಮದ್ರಾಸ್ ಪೂರ್ವಕ್ಕೆ ಆದರೆ ಇದು ಪಶ್ಚಿಮಕ್ಕೆ ಇದೆ. ಆದ್ದರಿಂದ ಈ ಜಿಲ್ಲೆಯನ್ನು ಯಾವ ರೀತಿಯಲ್ಲಾಗಲಿ ಮದ್ರಾಸ್ ಸರಕಾರದವರು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ. ದಕ್ಷಿಣ ಕನ್ನಡಜಿಲ್ಲೆಯನ್ನು ನೋಡಿದರೆ, ಪ್ರತಿಯೊಂದು ಕೆಲಸದಲ್ಲೂ ಅವರು ಶ್ರಮಪಟ್ಟು ಮುಂದುವರಿಯುತ್ತಿರುವುದು ಗೊತ್ತಾಗುತ್ತದೆ. ಸ್ಕೂಲುಗಳು, ಕಾಲೇಜುಗಳು, ಮುಂತಾದ ಸಂಸ್ಥೆಗಳನ್ನು ತೆಗೆದುಕೊಳ್ಳಿ, ಅವರು ತಾವೇ ಶ್ರಮಪಟ್ಟು ಅವನ್ನು ಸ್ಥಾಪನೆಮಾಡಿದ್ದಾರೆ. ಅವರು ಬಹಳ ಶ್ರಮ ಜೀವಿಗಳು. ಮೈಸೂರು ದೇಶದಲ್ಲಿ ಸೋಮಾರಿತನ ಇದೆ ಎಂದು ಹೇಳುವುದಿಲ್ಲ. ಆದರೆ ಇಲ್ಲಿಯ ಹವಾಗುಣಕ್ಕೆ ತಕ್ಕಂತೆ ಒಂದು ಆಲಸ್ಯ ಮನೋಭಾವ ಮನೆಮಾಡಿಕೊಂಡಿದೆ. ಇಲ್ಲಿ ಹೀಗೆ ಆಲಸ್ಯ ಮನೋಭಾವ ಇರುವುದರಿಂದ ದಕ್ಷಿಣ ಕನ್ನಡ ಜಿಲ್ಲೆಯವರು ಮಲೆನಾಡು ಪ್ಲಾಂಟೇಷನ್‌ಗಳಿಗೆ ಮತ್ತು ಅಡಿಕೆ ತೋಟಗಳಿಗೆ, ಗದ್ದೆಯಲ್ಲಿ ಕೃಷಿ ಕೆಲಸಕ್ಕೆ ಅವರು ಬರಬೇಕು. ಇಲ್ಲಿ ಕೆಲಸಮಾಡಿ ಆಮೇಲೆ ವಾಪಸ್ಸು ಹೋಗುತ್ತಾರೆ. ಹಾಗೆಯೇ ಇನ್ನೊಂದು ಕಡೆ ಕಡಪ, ಕರ್ನೂಲ್‌ನಿಂದ ನಮ್ಮ ದೇಶಕ್ಕೆ ಬರುತ್ತಾರೆ. ಮತ್ತೊಂದುಕಡೆ ನೀಲಗಿರಿ ಕಡೆಯಿಂದ ಜನರು ಇಲ್ಲಿಗೆ ಬರುತ್ತಾರೆ.

ಶ್ರೀ ಡಿ. ದೇವರಾಜ್ ಅರಸ್.—ಕೆಲವು ಜನರು ಮಲೆನಾಡೇ ಒಂದು ಪ್ರಾಂತ ಆಗಬೇಕೆಂದು ಹೇಳುತ್ತಿದ್ದಾರೆ, ಇದಕ್ಕೆ ಏನು ಹೇಳುತ್ತೀರಿ?

ಶ್ರೀ ಎಸ್. ಗೋಪಾಲಗೌಡ.—ಇವೊತ್ತು ನಾವು ಮೈಸೂರು, ಮೈಸೂರು ಎಂದು ಹೇಳುತ್ತಿದ್ದೇವೆಯೇ ಹೊರತು ನಾವು ಎಷ್ಟರಮಟ್ಟಿಗೆ ಕಾರ್ಯಪಟುತ್ವದಿಂದ ಕೂಡಿದ್ದೇವೆ ಎಂಬುದನ್ನು ನೋಡುತ್ತಿಲ್ಲ. ನಮ್ಮ

ದೇಶದಲ್ಲಿ ಎಷ್ಟರಮಟ್ಟಿಗೆ ಎಲ್ಲರೂ ಉದ್ಯೋಗಸ್ಥರು ಆಗಿದ್ದಾರೆ, ನಮ್ಮವರ ಸರಾಸರಿ ಆದಾಯವೆಷ್ಟು, ಜನರು ಎಷ್ಟರಮಟ್ಟಿಗೆ ಸುಖಿಗಳಾಗಿದ್ದಾರೆ ಎಂಬುದನ್ನೂ ಕೂಡ ನಾವು ನೋಡಬೇಕಾಗಿದೆ ಮತ್ತು ಇವರು ಅಷ್ಟು adventurous ಆಗಿದ್ದುಕೊಂಡು ಹೊರಗೆ ಹೋಗಿ ಯಾವಯಾವ ದೇಶವನ್ನು ದಿಗ್ವಿಜಯ ಮಾಡಿಕೊಂಡು ಬಂದಿದ್ದಾರೆಂಬುದನ್ನು ನಾವು ಪರಿಶೀಲನೆಮಾಡಬೇಕು. ಇವೊತ್ತು ನಾವು ಭದ್ರಾಜಲಾಶಯಕ್ಕೆ ಅಣೆಕಟ್ಟು ಕಟ್ಟುವಕಡೆ ಹೋದರೆ ಅಥವಾ ತುಂಗಾ ಜಲಾಶಯ ನಿರ್ಮಾಣ ಆಗುವಕಡೆ ಹೋಗಿ ನೋಡಿದರೆ ಮೈಸೂರು ದೇಶದವರು ಎಷ್ಟು ಜನ ಕೆಲಸ ಮಾಡಿ ದೇಶವನ್ನು ಕಟ್ಟುವುದಕ್ಕೆ ನಿಂತಿದ್ದಾರೆ, ಅದರಿಂದ ಉತ್ಪತ್ತಿಯನ್ನು ಪಡೆಯುತ್ತಿದ್ದಾರೆಂಬದನ್ನೂ ಕೂಡ ನಾವು ನೋಡಬಹುದು. ಮೈಸೂರು ಎಂದು ತಾವು ಏನು ಕರೆಯುತ್ತಿದ್ದೀರೋ ಅದನ್ನು ಯಾವುದೇ ಒಂದು ವಿಚಾರದಲ್ಲಿಯಾಗಲಿ ಅಭಿವೃದ್ಧಿ ಮಾರ್ಗದಲ್ಲಿ ಮುಂದುವರಿಸಿಕೊಂಡು ಹೋಗುವುದಕ್ಕೆ ನಾವೆಲ್ಲರೂ ತೊಡಗಿದ್ದೇವೆಯೋ ಮತ್ತು ಅದಕ್ಕೆ ಬೇಕಾದ ಕಾರ್ಯಪಟುತ್ವ ನಮ್ಮಲ್ಲಿದೆಯೋ ಎಂಬುದನ್ನು ನೋಡಬೇಕು. ನಾವು ಹೇಗೆ ಬೇರೆಯವರನ್ನು ಅವಲಂಬಿಸಿಕೊಂಡಿದ್ದೇವೆ, ಪರಾವಲಂಬಿಗಳಾಗಿದ್ದೇವೆ ಎಂಬುದನ್ನೂ ಕೂಡ ನಾವು ಮರೆಯಬಾರದು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—Then your arguments failed. ಮಲೆನಾಡು ಪ್ರಾಂತದವರು ಬಹಳ ಅಸಮರ್ಥರಾಗಿದ್ದಾರೆ, ಆದಕಾರಣ ಹೊರಗಿನಿಂದ ಜನರು ಬಂದು ಅಲ್ಲಿಯ ಸುಖಸಂಪತ್ತುಗಳನ್ನು ಬೆಳೆಯುವಂತೆ ಮಾಡಿದರು ಎಂದು ಹೇಳಿದ ಹಾಗಾಯಿತು. ಮೈಸೂರಿನವರು adventurous ಆಗಿಲ್ಲ, ಯಾವ ರೀತಿಯಲ್ಲೂ ಮುಂದುವರಿಯುವುದಕ್ಕೆ ಅಲ್ಲಿಯ ಜನರು ಸಾಮರ್ಥ್ಯವಂತರಲ್ಲ, ಬೇರೆಯವರು ಬಂದು ನಮ್ಮ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ನೆರವೇರಿಸಬೇಕಾಗಿದೆ, ಅವರಿಂದ ಅಭಿವೃದ್ಧಿಯಾಗುತ್ತಿದೆ ಎಂದು ಹೇಳಿದ ಹಾಗಾಯಿತು.

ಶ್ರೀ ಎಸ್. ಗೋಪಾಲಗೌಡ.—ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಮೈಸೂರಿನ ವೈಶಿಷ್ಟ್ಯವನ್ನು ಪ್ರತಿಪಾದಿಸಿಕೊಂಡು ಮೈಸೂರು ಬಹಳ ಸುಖಸಂಪತ್ತಿನಿಂದಲೂ ಸಮೃದ್ಧಿಯಿಂದಲೂ ತುಂಬಿ ತುಳುಕಾಡುತ್ತಿದೆ, ಎಲ್ಲವೂ ಸ್ವಪರಿಪೂರ್ಣತೆಯಿಂದ ಕೂಡಿದೆ ಎನ್ನುವ ವಾದಕ್ಕೆ ಪ್ರತಿವಾದವಾಗಿ ಬೇರೆಯವರನ್ನು ಈ ರೀತಿ ಮೈಸೂರಿನ ಜನತೆ ಅವಲಂಬಿಸಿಕೊಂಡಿರುವುದರಿಂದ, ಮೈಸೂರು ತಾನೇ ತಾನಾಗಿ ತನ್ನತನವನ್ನು ಒಂದೊಂದನ್ನಾಗಿ ಕಳೆದುಕೊಳ್ಳುತ್ತಿದೆ, ಮೈಸೂರು ಕ್ಷಿಪ್ರದಲ್ಲಿಯೇ ಮೈಸೂರಾಗಿ ಇರುವುದಿಲ್ಲ, ಎಂಬುದನ್ನು ತೋರಿಸಿಕೊಡುವುದಕ್ಕೆ ಇದನ್ನು ಹೇಳುತ್ತಿದ್ದೇನೆ. ಆದರೆ ನನ್ನ ವಾದದಿಂದ ನನ್ನನ್ನು ವಿರೋಧಿಸುವುದಕ್ಕೂ ಆಗುತ್ತದೆ ಎಂಬುದನ್ನೂ ಕೂಡ ಗಮನದಲ್ಲಿಟ್ಟುಕೊಂಡಿದ್ದೇನೆ. ಮಲೆನಾಡು ಏತಕ್ಕೆ ಹೀಗಿದೆ ಎಂದರೆ ಮಲೆನಾಡಿನ ಜನರಲ್ಲಿ ಕಾರ್ಯಪಟುತ್ವವಿಲ್ಲ, ಅವರಲ್ಲಿ ಚಟುವಟಿಕೆಯಿಲ್ಲ. ಅವರಿಗೆ ಅಲ್ಲಿಯ ಸಾಧನ ಸಂಪತ್ತುಗಳನ್ನು ರೂಢಿಸಿಕೊಳ್ಳುವುದಕ್ಕೆ ತಕ್ಕ ಶಕ್ತಿ ಇಲ್ಲ. ಆದ್ದರಿಂದ ಅವರು ಪರಾವಲಂಬಿಗಳಾಗಿದ್ದಾರೆ. ಅದನ್ನು ಅವರು ಬಿಟ್ಟು ಬಿಡಬೇಕು. ಬರೀ ಮೈಸೂರು ನಮ್ಮದು ಎಂದು ಹೇಳಿಕೊಂಡ ಮಾತ್ರಕ್ಕೆ ಮೈಸೂರಿನ ಜನರ ಹೊಟ್ಟೆ ತುಂಬುವುದಿಲ್ಲ, ಮೈಸೂರಿನಲ್ಲಿ ಜರೀಪೇಟ ವೈಶಿಷ್ಟ್ಯವಿದ್ದರೆ ಅದರಿಂದ ನಮ್ಮ ಹೊಟ್ಟೆ ತುಂಬುವುದಿಲ್ಲ. ಜರೀಪೇಟ ಒಂದೇ ಇದ್ದರೆ ಏನು ಬಂತು?

ಶ್ರೀ ಎಚ್. ಸಿದ್ದವೀರಪ್ಪ (ಒಳಾಡಳಿತ ಮತ್ತು ಕೈಗಾರಿಕೆ ಶಾಖೆಗಳ ಮಂತ್ರಿಗಳು).—ಮನಃ ಶಾಂತಿ ಬರುತ್ತದೆ.

ಶ್ರೀ ಎಸ್. ಗೋಪಾಲಗೌಡ.—ತಲೆಶಿರೋಭಾರವಾದಂತಾಯಿತು. ಈ ಮಹತ್ತರವಾದ ಸಮಸ್ಯೆಗಳು ಅಂದರೆ 2 ಕೋಟಿ ಜನರ ಜನಜೀವನವನ್ನು ಅನೇಕಾನೇಕ ವರ್ಷಗಳವರೆಗೆ ನಡೆಸಿಕೊಂಡು ಹೋಗತಕ್ಕಂಥ ಸಮಸ್ಯೆ ಇದು. ಯಾವ ಯಾವ ಸಂಪತ್ತು ನಮಲ್ಲಿದೆಯೋ ಅದನ್ನು ಹೇಗೆ ರೂಢಿಸಿಕೊಳ್ಳಬೇಕೆಂಬುದನ್ನು ನಾವು ವಿಶಾಲ ದೃಷ್ಟಿಯಿಂದ ಯೋಚನೆ ಮಾಡಬೇಕು.

Sri M. PALANIYAPPAN (Ulsoor).—How long are we going to sit ?

Mr. SPEAKER.—We have no time. Let him continue and finish now.

Sri M. PALANIYAPPAN.—He may continue for another hour.

Mr. SPEAKER.—Let us see.

ಶ್ರೀ ಎಸ್. ಗೋಪಾಲಗೌಡ.—ಉದ್ಯೋಗವನ್ನು ಹೆಚ್ಚಿಸಿಕೊಳ್ಳುವ ದೃಷ್ಟಿಯಿಂದ, ವ್ಯಾಪಾರವನ್ನು ಹೆಚ್ಚಿಸಿಕೊಳ್ಳುವ ದೃಷ್ಟಿಯಿಂದ, ಮಲೆನಾಡಿನ ಅಭಿವೃದ್ಧಿಗಾಗಿ ಒಂದು ಸಮಗ್ರ ಯೋಜನೆಯನ್ನು ಕಾರ್ಯಗತ ಮಾಡುವ ದೃಷ್ಟಿಯಿಂದ, ನಾವು ಒಂದು ಪ್ರಾಂತವನ್ನು ರಚಿಸಿಕೊಳ್ಳುವುದು ಅತ್ಯಾವಶ್ಯಕ. ಅದು ಬಿಟ್ಟು ಮೈಸೂರಿಗೆ ಕೊಡಗೂ ಮತ್ತು ದಕ್ಷಿಣ ಕನ್ನಡ ಬೇಕಾದರೆ ಸೇರಲಿ, ಇತರ ಹೈದರಾಬಾದ್, ಮುಂಬಯಿ ಕರ್ಣಾಟಕದವರು ಬೇರೆ ಪ್ರಾಂತವನ್ನು ರಚಿಸಿಕೊಳ್ಳಲಿ ಎನ್ನತಕ್ಕಂಥ ವಾದ ಬಹಳ ಘಾತಕವಾದ ವಾದ. ಅದರಿಂದ ಬಹಳ ತೊಂದರೆಯಾಗುತ್ತದೆ ಎಂದು ಹೇಳುತ್ತೇನೆ. ಇವೊತ್ತು ಯಾವುದೋ ಒಂದು ವಾದವನ್ನು ಕೆಲವು ಮೈಸೂರಿನ ಮಹನೀಯರು ನಮ್ಮಮುಂದೆ ಇಟ್ಟು ಇತರ ಕನ್ನಡ ಭಾಗಗಳು ಮುಖ್ಯವಾಗಿ ಮುಂಬಯಿ ಕರ್ಣಾಟಕ ಭಾಗಗಳು ಮೈಸೂರಿಗೆ ಸೇರುವುದರಿಂದ ಬಹಳ ತೊಂದರೆಯಾಗುತ್ತದೆ ಎಂದು ಹೇಳುತ್ತಿದ್ದಾರೆ. ಅದು ನಿರಾಧಾರವಾದುದು ಎಂಬುದನ್ನು ನಾನು ಸ್ಪಷ್ಟವಾಗಿ ಹೇಳಬೇಕಾಗಿದೆ.

12-30 P. M.

ಉತ್ತರ ಕರ್ಣಾಟಕ ಪ್ರಾಂತ್ಯಗಳು, ಮುಖ್ಯವಾಗಿ ಮುಂಬೈ ಕರ್ಣಾಟಕ ಪ್ರಾಂತ್ಯಗಳು ಮೈಸೂರಿಗೆ ಸೇರುವುದರಿಂದ ಏನೂ ತೊಂದರೆಯಾಗುವುದಿಲ್ಲ. ಶ್ರೀಮಾನ್ ಎಚ್. ಕೆ. ಶಿವರುದ್ರಪ್ಪನವರಂಥವರು ಮಾಡಿರುವ ಭಾಷಣದಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯ ನಿರಾಧಾರವಾದುದೆಂದು ನಾನು ಸ್ಪಷ್ಟವಾಗಿ ಹೇಳಬೇಕಾಗಿದೆ. ಇದು ಹೇಗಿದೆಯೆಂದರೆ, ಕಂಬಳಿಯನ್ನು ನೋಡಿ ಕರಡಿಯೆಂದು ಓಡುವವನ ಲಕ್ಷಣವನ್ನು ತೋರಿಸುತ್ತದೆ. ಅಲ್ಲದೆ, ನಾವು ಸಮಾಜವನ್ನು ಪುನರ್ನಿರ್ಮಾಣ ಮಾಡತಕ್ಕದು ನೂತನ ಮೌಲ್ಯಗಳ ಮೇಲೆ ಆಗಬೇಕಾಗಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಹಾಗಾದರೆ, ಮುಂಬೈ ಕನ್ನಡಿಗರು ಮತ್ತು ಹೈದರಾಬಾದು ಕನ್ನಡಿಗರು ಇನ್ನೂ ಕಂಬಳಿ ಹೊದ್ದುಕೊಂಡಿದ್ದಾರೆಯೋ!

ಶ್ರೀ ಎಸ್. ಗೋಪಾಲಗೌಡ.—ಆ ರೀತಿಯಲ್ಲ.

ಈ ರೀತಿಯಾಗಿ ನಾವು ಪ್ರತ್ಯೇಕ ಇಡೀ ರಾಷ್ಟ್ರವನ್ನು ನೂತನ ಮೌಲ್ಯಗಳ ಮೇಲೆ ಪುನರ್ನಿರ್ಮಾಣ ಮಾಡಬೇಕೆಂಬ ಗುರಿಯಿಟ್ಟುಕೊಂಡಿರುವಾಗ, ಈಗ

(ಶ್ರೀ ಎಸ್. ಗೋಪಾಲಗೌಡ.)

ನಮ್ಮಲ್ಲಿ ಇರಬಹುದಾದ ಕೆಲವು ಪದ್ಧತಿಗಳನ್ನು ರೂಡಿಸಿಕೊಳ್ಳಬೇಕಾದ ಮತ್ತು ನಮ್ಮ ಆಚಾರಗಳನ್ನು ಹೊಸ ಸಮಾಜಕ್ಕೆ ಅಳವಡಿಸಿಕೊಳ್ಳಬೇಕಾದ ಸಂದರ್ಭ ಬರುತ್ತದೆ, ನಮ್ಮ ದೃಷ್ಟಿ ಕೋನವನ್ನು ಬದಲಾಯಿಸಿಕೊಳ್ಳಬೇಕಾದ ಸಂದರ್ಭ ಬರುತ್ತದೆ. ಯಾವಾಗ್ಲೂ ಹಳೆಯದಕ್ಕೂ ಹೊಸದಕ್ಕೂ ನಿರಂತರವಾದ ಹೊಡೆದಾಟ ಘರ್ಷಣೆಗಳು ಇದ್ದೇ ಇರುತ್ತವೆ. ಇದು ಒಂದು ಕ್ರಾಂತಿಗೆ, ಒಂದು ಬದಲಾವಣೆಗೆ ಬದ್ಧವಾಗಿರತಕ್ಕದ್ದು. ಮನುಷ್ಯನ ಸಮಾಜ ಸಾಮಾನ್ಯವಾಗಿ ವಿಕಾಸಕ್ಕೆ ಕಾರಣವಾಗುತ್ತದೆ. ಅನೇಕ ಕಡೆ By Jerks ಹೋಗಿ ಕ್ರಾಂತಿಯಾಗುವುದೂ ಉಂಟು. ಇವೆರಡನ್ನೂ ನಾವು ಮರೆಯಬಾರದು. ಆದ್ದರಿಂದ ಈ ವಿಷಯವನ್ನು ನಾವು ನೋಡುವಾಗ ಸಮಾಜದ ವಿಕಾಸವನ್ನೂ, ಅದರಲ್ಲಿ ಪ್ರತಿ ಕ್ಷಣದಲ್ಲೂ ಆಗುತ್ತಿರತಕ್ಕ ಮಾರ್ಪಾಟನ್ನೂ ದೃಷ್ಟಿಯಲ್ಲಿಟ್ಟುಕೊಂಡು ಮುಂದುವರಿಯಬೇಕು. ಆದ್ದರಿಂದ ಈ ಹೊತ್ತು ಮೈಸೂರಿನಲ್ಲಿ ಕೆಲವು ಮಹನೀಯರು, ಇಂದು ನಾವು ಇದಕ್ಕೆ ಒಪ್ಪಿದರೆ, ಮುಂದೆ ಇದೇ ನಮಗೆ ತೊಂದರೆ ಯುಂಟುಮಾಡುತ್ತದೆಂದು ಹೇಳಿ, ಮೈಸೂರು ಈಗಿರುವಂತೆಯೇ ಇರಲಿ, ಬೇಕಾದರೆ ಕೊಡಗು ಹೈದರಾಬಾದು ಸೇರಲಿ ಎಂದು ಹೇಳುವ ಅಭಿಪ್ರಾಯ ಸರಿಯಲ್ಲವೆಂದು ಹೇಳುತ್ತೇನೆ.

ಅಖಿಲ ಕರ್ಣಾಟಕ ಪ್ರಾಂತ ದಕ್ಷಿಣ ಇಂಡಿಯಾದಲ್ಲಿ ಅತ್ಯಂತ ಸಂಪತ್ ಸಮೃದ್ಧಿಯಿಂದ ಕೂಡಿದ ಪ್ರಾಂತವಾಗುತ್ತದೆ. ಇದು ಬರೀ ಕರ್ಣಾಟಕ ಪ್ರಾಂತದಲ್ಲಿ ವಾಸಮಾಡತಕ್ಕ ಜನಕ್ಕೆ ಮಾತ್ರವಲ್ಲ, ಇಡೀ ಇಂಡಿಯಾ ದೇಶದ ಜನಕ್ಕೆ ಹೆಚ್ಚಿನ ಶಕ್ತಿಯನ್ನು ಕೊಡಬಹುದು. ನಾವು ಸುಖವಾಗಿ ಬೆಳೆದು ಬಂದರೆ, ನಮ್ಮ ನಿರುದ್ಯೋಗ ನಿವಾರಣೆಯಾದರೆ, ಎಲ್ಲರೂ ಸುಖವಾಗಿ ಬಾಳತಕ್ಕ ಪ್ರಾಂತ್ಯರಚನೆಮಾಡಿ ಒಂದು ವ್ಯವಸ್ಥಿತ ಆಡಳಿತದಲ್ಲಿ ನಾವು ಮುಂದುವರಿದರೆ, ಕರ್ಣಾಟಕ ಪ್ರಾಂತ್ಯ ಭಾರತದ ಚೌಕಟ್ಟಿನಲ್ಲಿ ಒಂದು ಪ್ರಮುಖ ಸ್ಥಾನವನ್ನು ಪಡೆಯುತ್ತದೆ. ಕೇಂದ್ರ ಸರ್ಕಾರದಲ್ಲೂ ಹೆಚ್ಚಿನ ಪ್ರಾತಿನಿಧ್ಯವನ್ನು ಕೂಡ ಪಡೆಯುತ್ತದೆ. ಈಗತಾನೆ ಒಬ್ಬರು ಮಹನೀಯರು ವ್ಯಕ್ತಪಡಿಸಿರುವ ಹಾಗೆ, ಉತ್ತರ ಪ್ರದೇಶ ಪಾರ್ಲಿಮೆಂಟಿನಲ್ಲಿ ಹೆಚ್ಚಿನ ಪ್ರಭಾವವನ್ನು ಬೀರುವಂತಿದೆ. ಒಬ್ಬರು ಇಬ್ಬರು ಹೋಗತಕ್ಕ ಪ್ರಾಂತ್ಯಗಳವರು ಕರ್ಣಾಟಕರೆಂದು ಹೇಳಿಕೊಳ್ಳುವುದಕ್ಕೂ ಕಷ್ಟವಾಗುತ್ತದೆಯೆಂಬುದನ್ನು ನಾವು ಮನಗಂಡಿದ್ದೇವೆ. ಹೀಗಿರುವಾಗ ನಮ್ಮ ದೇಶದ ಎಲ್ಲೆ ಕಟ್ಟುಗಳನ್ನು ಬದಲಾವಣೆ ಮಾಡುತ್ತೇವೆ, ಫಸ್ಲಾಲಿ ಕಮಿಷನ್ನಿನವರ ವರದಿಯನ್ನು ನಿರೀಕ್ಷಿಸುತ್ತಿದ್ದೇವೆ ಮತ್ತು A, B, C ಪ್ರಾಂತ್ಯಗಳೆಂಬ ವಿಂಗಡಣೆಗಳನ್ನೂ, ಇಂಡಿಯಾ ದೇಶದಲ್ಲಿ ಆಕಸ್ಮಿಕವಾಗಿ ಆಗಿರುವ ವಿಭಜನೆಗಳನ್ನೂ ಬದಲಾವಣೆ ಮಾಡುತ್ತೇವೆಂದು ಮುಂದೆ ಬಂದಿದ್ದಾರೆ. ಆದ್ದರಿಂದ ಈ ಸಂದರ್ಭವನ್ನು ಕಳೆದುಕೊಂಡಲೆ, ಈ ಮಹತ್ ಕಾರ್ಯಕ್ಕೆ ಆತಂಕ ಮಾಡಿದರೆ, ಈ ಘಳಿಗೆ ಹೋದಮೇಲೆ ಇನ್ನೊಂದು ಸಾರಿ ಈ ಸುಸಂದರ್ಭಗಳು ಬರುವುದಿಲ್ಲ. ಯಾವಾಗಲೂ ಸುಸಂದರ್ಭಗಳು ಬರುವುದು ಕೆಲವೇ ಸಲ. ಈ ಸಮಸ್ಯೆ ಈ ಹೊತ್ತು ಮಹತ್ತರವಾಗಿ ಬಂದಿದೆ. ಮುಂದೆ ಮತ್ತೊಮ್ಮೆ ಬರುತ್ತದೆಂದು ಕಾದು ಕೂತರೆ ಬರುವುದಿಲ್ಲ. ಆದ್ದರಿಂದ ಇಂಥ ಘಳಿಗೆಗಳಲ್ಲಿ ನಾವು ಕೂಲಂಕಷವಾಗಿ ವಿಚಾರಮಾಡಿ ಖಚಿತವಾದ ಅಭಿಪ್ರಾಯವನ್ನು ಕೊಡಬೇಕು. ಆದ್ದರಿಂದ ನಾನು ಮಾನ್ಯ ಸದಸ್ಯರಲ್ಲಿ ವಿನಂತಿಮಾಡಿಕೊಳ್ಳುವುದಿಷ್ಟೆ. ನಮ್ಮ ಮೆಮೊರಾಂಡಮ್‌ನಲ್ಲಿ ನಾವು ಮೈಸೂರಿನಲ್ಲಿರಬಹುದಾದ ಕನ್ನಡೇತರ ಪ್ರದೇಶಗಳು ಏನಾಗಬೇಕೆಂಬ ಬಗ್ಗೆ ನಾವು ಹೇಳಿದ್ದೇವೆ. ನಮ್ಮ ಮಾನ್ಯ ಸ್ನೇಹಿತರಾದ ಶ್ರೀ ಬಿ.ವಿ. ನಾರಾಯಣ ರೆಡ್ಡಿಯವರು ಇಲ್ಲಿಲ್ಲ. ಅವರು ಈಗಲೂ ಕೂಡ ಆಗ್ರಹಪೂರ್ವಕವಾಗಿಯೇ ಮೈಸೂರಿನ ತೆಲುಗು ಪ್ರದೇಶಗಳು ಆಂಧ್ರಕ್ಕೇ ಹೋಗಬೇಕು ಎಂದು ಹೇಳುತ್ತಿದ್ದಾರೆ. ಮೈಸೂರಿಗೆ ಬೇರೆ ಕನ್ನಡ ಪ್ರದೇಶಗಳನ್ನು ಸೇರಿಸಿಕೊಳ್ಳುವುದಾದರೆ ನಾವೂ ಈ ಪ್ರಾಂತ್ಯದಲ್ಲಿರಲು ಸಿದ್ಧರಾಗಿಲ್ಲವೆಂದು ಹೇಳಿದ್ದಾರೆ. ಅನೇಕ ವೇಳೆ ನಮ್ಮೊಡನೆ ಚರ್ಚೆ ಮಾಡುವಾಗಲೂ ತಾವು ಆಂಧ್ರ ಪ್ರಾಂತ್ಯಕ್ಕೆ ಹೋಗತಕ್ಕದ್ದೆಂದು ಸ್ಪಷ್ಟವಾಗಿ ಹೇಳಿದ್ದಾರೆ.

ನಾವು ಈ ವಿಷಯದಲ್ಲಿ ನಮ್ಮ ಪಾರ್ಟಿಯ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳಿಬಿಟ್ಟಿದ್ದೇವೆ. "ಆದರೂ ಇನ್ನೂ ನಿಮ್ಮ ಅಭಿಪ್ರಾಯವೇ ಸ್ಪಷ್ಟವಾಗಿಲ್ಲ. ನೀವು 'ಇಷ್ಟಪಟ್ಟರೆ' ಎಂದು ಹೇಳಿದ್ದೀರಿ. ಇದರಲ್ಲಿ ಅರ್ಥವಿಲ್ಲ. ಭಾಷೆಯ ಆಧಾರದ ಮೇಲೆ ಪ್ರಾಂತ್ಯಗಳ ವಿಭಜನೆಯಾಗಬೇಕು ಎಂದು ಮಾತನಾಡುವಾಗ ನೀವು ಖಚಿತವಾಗಿ ಅದಕ್ಕೆ ಯಾವ ಯಾವ ಪ್ರಾಂತ್ಯಗಳು ಸೇರುತ್ತವೆ ಎಂಬುದನ್ನೂ ಕೂಡ ಖಚಿತವಾಗಿ ಹೇಳಲೇಬೇಕು" ಎಂದು ನನ್ನ ಮಿತ್ರರಾದ ಶ್ರೀ ನಾರಾಯಣ ರೆಡ್ಡಿಯವರು ನನ್ನೊಡನೆ ಪದೇ ಪದೇ ಚರ್ಚೆ ಮಾಡುತ್ತಿರುತ್ತಾರೆ. ಆದರೆ ಅದನ್ನೂ ಕೂಡ ಹೇಳಿಬಿಡಬಹುದು. ಅದಕ್ಕೂ ನಾವೇನೂ ಹಿಂಜರಿಯಬೇಕಾದ್ದಿಲ್ಲ. ಎಲ್ಲ ಕನ್ನಡ ಭಾಗಗಳನ್ನೂ ಸೇರಿಸಿ ಒಂದು ಕನ್ನಡ ಪ್ರಾಂತ್ಯವನ್ನು ರಚನೆಮಾಡುವುದರಿಂದ—ಈ ಕನ್ನಡ ಜನರ ಜೀವನ, ಇವರ ಭಾಷೆ, ಇವರ ಕಲೆ, ಇವರ ಸಂಸ್ಕೃತಿ, ಇವರ ವಿದ್ಯೆ ಇತ್ಯಾದಿಗಳೆಲ್ಲವೂ ಬಹು ಸುಲಭವಾಗಿ ಅಭಿವೃದ್ಧಿಯಾಗುತ್ತವೆಯೆಂದು ನಾವು ಹೇಳುತ್ತಿರುವಾಗ ಈ ನಮ್ಮ ತೆಲಗರ ಭವಿಷ್ಯ ಕೂಡ ಅವರು ನಮ್ಮ ಮೈಸೂರಿನಲ್ಲೇ ಉಳಿದುಬಿಟ್ಟರೆ, ಆ ಆಂಧ್ರದ ಜೊತೆಗೆ ಸೇರುವುದಕ್ಕಿಂತಲೂ, ಹೆಚ್ಚಿನ ಒಂದು ಅನುಕೂಲವಿದೆ ಎಂದು ನಾವು ಅವರಿಗೆ ಹೇಳುವುದಾದರೆ ಆಗ ನಾವು ನಮ್ಮ ಆತ್ಮಕ್ಕೇ ಒಂದು ವಂಚನೆಮಾಡಿಕೊಂಡ ಹಾಗೆ ಆಗುತ್ತದೆ. ಆದರೆ ಅವರು ಈಗ ಸಭೆಯಲಿಲ್ಲ. ಅವರಿದ್ದಿದ್ದರೆ ಬಹಳ ಚೆನ್ನಾಗಿತ್ತು. ಈ ಅಂಕಿಅಂಶಗಳ ಆಧಾರದ ಮೇಲೆ ಮಾತನಾಡುತ್ತಿರುವಾಗ ಆಂಧ್ರಕ್ಕೆ ಹತ್ತಿಕೊಂಡಿರತಕ್ಕಂಥ ಮೈಸೂರು ಭಾಗಗಳು ಯಾವ ಯಾವವು ಇರುತ್ತವೆಯೋ ಅಂಥವುಗಳನ್ನೆಲ್ಲಾ ಬಯಸಿದರೆ ತೆಲುಗು ರಾಜ್ಯಕ್ಕೆ ಬಿಟ್ಟುಕೊಡಬೇಕಾದ್ದು ಅಗತ್ಯ. ಅಂಥ ಸಂಭವ ಬಂದರೆ ನಾವು ಬಿಟ್ಟುಕೊಡಬೇಕಾಗಬಹುದು. ಅಂಥ ಸಂಭವ ಬಂದರೆ ಆಗ ನಮ್ಮ ಕೋಲಾರದಲ್ಲಿರುವ ಆ ಚಿನ್ನದಗಣಿ ಹೋಗಿಬಿಡುತ್ತಲ್ಲ ಎಂದು ಕೇಳಿದರೆ—ನಮಗೆ ಇತ್ತ ಆ ಭಟ್ಕಲ್ ಬಂದರ್ ಸೇರುತ್ತದೆ ಎಂದು ಹೇಳಬಹುದು. ಆದರೆ ಈ ದಿವಸ ನಮಗೆ ಸೇರಿರತಕ್ಕಂಥ ಆದಾಯ ಬರುವ ಪ್ರದೇಶ ಅವರಿಗೆ ಸೇರಬಹುದು. ಆಗ ನಮಗೂ ಸಹ ಅದೇ ರೀತಿ ಇಲ್ಲಿ ಕಳೆದುಕೊಂಡ ಆದಾಯಕ್ಕೆ ಪ್ರತಿಫಲವಾಗಿ ಆ ಇನ್ನೂ ಹೆಚ್ಚು ಆದಾಯ ಬರುವ ಭಟ್ಕಲ್ ಬಂದರ್ ನಮಗೆ ಸೇರುತ್ತದೆ. ಒಂದು ದೇಶದ ಆದಾಯ ನಮಗೆ ಬರುವುದು ನಮಗೆ ಸೇರುತ್ತದೆ, ಅವರಿಗೆ ಸೇರಬೇಕಾದ್ದನ್ನು ಅವರಿಗೂ ಬಿಡಬೇಕು. ಇಂಥ ಒಂದು ಸರಳವಾದ ವ್ಯವಸ್ಥೆ ಇರಲೇಬೇಕು. ಈ ವಿಚಾರದಲ್ಲಿ ನನ್ನ ಸ್ಪಷ್ಟವಾದ ಅಭಿಪ್ರಾಯವೇನಿರುತ್ತೆಂದರೆ—ಹಾಗೆ ಅವರು ಆಂಧ್ರಕ್ಕೇ ಹೋಗುತ್ತೇವೆಂದರೆ ಅದಕ್ಕೆ ನಮ್ಮ

ಅಡ್ಡಿಯಿರಬಾರದು. ಅದಕ್ಕೂ ಕೂಡ ನಾವು ಅವಕಾಶವನ್ನು ಕಲ್ಪಿಸಿಕೊಡಬೇಕು. ಆದರೆ ಇದರಲ್ಲಿ ಏನು ಒಂದು ವಿಚಾರವಿದೆಯೆಂದರೆ—"ನೀವು ಹೊರಟು ಹೋಗಿ" ಎಂಬುದಾಗಿ ಹೇಳತಕ್ಕದ್ದು ಅದು ಕರ್ಟಸಿಯಲ್ಲ—ಅನ್ನತಕ್ಕಂಥ ಒಂದು ಮನೋಭಾವನೆಯಿಂದ ನೀವು ಹೋಗಬೇಡಿ ಎಂದು ಹೇಳಬೇಕಾಗಿದೆ. ಆದರೆ ಈ ಒಂದು ಪ್ರಾದೇಶಿಕ ವಿಚಾರವಾಗಿ ಕರ್ಣಾಟಕ ಪ್ರಾಂತ್ಯನಿರ್ಮಾಣ ಆಗಬಾರದು ಎಂದು ಹೇಳುವುದಕ್ಕೆ ಈ ಒಂದು ಕಾರಣ ಅಡ್ಡಿಯಾಗಬಾರದು ಎನ್ನುವುದಕ್ಕಾಗಿ ನಾನೀಗ ಇದನ್ನೆಲ್ಲಾ ಹೇಳಬೇಕಾಗಿ ಬಂತು. ಮೈಸೂರು, ಉತ್ತರ ಕರ್ಣಾಟಕ, ದಕ್ಷಿಣ ಕರ್ಣಾಟಕ ಜಿಲ್ಲೆಗಳೂ, ಹೈದರಾಬಾದಿನಲ್ಲಿರತಕ್ಕಂಥ ಪ್ರಾಂತ್ಯ ಈ ಪ್ರದೇಶಗಳೆಲ್ಲಾ ಸೇರಿ ಒಂದು ಕನ್ನಡ ಪ್ರಾಂತ್ಯ ರಚನೆಯಾಗಬೇಕಾಗಿದೆ. ಇದಕ್ಕೆ ಸರ್ಕಾರ ಸಮ್ಮತಿಸಬೇಕು. ಈ ಅಂಶಗಳಿಗೆ ಅವರು ಅಡ್ಡಿಯಾಗಬಾರದು. ಏನೋ ಈ ಒಂದು ಅಡ್ಡಿಯಿದೆಯೆಂಬ ನೆಪದಮೇಲೆ ಈ ಮಹಾ ಕಾರ್ಯವನ್ನು ನೀವು ಆಗುಗೊಳಿಸದೆ ಹೋದರೆ ಮುಂದೆ ಎರಡು ಕೋಟಿ ಜನಗಳ ಶ್ರೇಯಸ್ಸನ್ನು ಮೊಟಕು ಮಾಡಿದಹಾಗೆ ಆಗುತ್ತದೆ. ಮುಂದಿನ ಜನಾಂಗ ಇದರಿಂದ ಇನ್ನೂ ಹೆಚ್ಚಿನ ತೊಂದರೆ ಮತ್ತು ಅನೇಕ ಕಷ್ಟಗಳನ್ನೂ ನಾವೇ ಅವರಿಗೆ ತಂದೊಡ್ಡಿದ ಹಾಗೆ ಆಗುತ್ತದೆ. ಆದಕಾರಣ ಸರ್ವ ಮಾನ್ಯ ಸದಸ್ಯರುಗಳೂ ತಮ್ಮ ತಮ್ಮ ಅಭಿಪ್ರಾಯವನ್ನು ಈಗ ಸ್ಪಷ್ಟಪಡಿಸಬೇಕಾಗಿದೆ. ನಾನಾಗಲೇ ತಿಳಿಸಿರುವ ಹಾಗೆ ಈ ಕರ್ಣಾಟಕ ಪ್ರಾಂತ್ಯ ನಿರ್ಮಾಣದ ಬಗ್ಗೆ ನಮ್ಮ ಪಕ್ಷದ ಧೋರಣೆ ಏನಿರುತ್ತೆಂಬ ಬಗ್ಗೆ ನಾವು ಈಗಾಗಲೇ ನಮ್ಮ ಸ್ಪಷ್ಟವಾದ ಅಭಿಪ್ರಾಯಗಳನ್ನೊಳಗೊಂಡಂಥ ಒಂದು ಮೆಮೊರಾಂಡಮ್ಮನ್ನೂ ಒಪ್ಪಿಸಿದ್ದೇವೆ. ಅದರಲ್ಲಿ ಹೀಗೆ ಹೇಳಿದ್ದೇವೆ:—

"There seems to be however a feeling in the Mysore State that whilst they are willing to take in other areas, they are unwilling to part with portions of Mysore and in particular the eastern parts in the Kolar District which are inhabited by a predominantly Telugu speaking population. By reason of the long association of the people of this area with the Mysore Administration the area has become largely bi-lingual in that practically every one knows Kannada whilst his mother tongue is Telugu. The Party does not desire to stand in the way of these people joining the adjoining State of Andhra if they wish to do so, but if it is their united wish to continue in Mysore as hitherto, they should be allowed to do so. The matter should be left to them for their choice."

ಈ ರೀತಿಯಾಗಿ "choice" ಎಂದು ಒಂದು ಪದವನ್ನು ಇದರಲ್ಲಿ ಸೇರಿಸಿದ್ದೇವೆ. ಹೀಗ್ಗೆ ನಾವು ಈ "choice" ಅಂತ ಒಂದು ಪದವನ್ನು ಹಾಕಿರುವುದರಿಂದ ನೀವು ಹಾಗೆ ಜನಗಳು ತಮ್ಮ ಸ್ವತಂತ್ರವಾದ ಒಂದು ಅಭಿಪ್ರಾಯ ಕೊಡುವಷ್ಟುಮಟ್ಟಿಗೆ ಅವರನ್ನು ವಿದ್ಯಾವಂತರನ್ನಾಗಿ ಮಾಡಿದ್ದೀರಾ ಎಂದು ನನ್ನನೊಡನೆ ಶ್ರೀ ನಾರಾಯಣರೆಡ್ಡಿಯವರು ಆಗಾಗ್ಗೆ ವಾದ ಮಾಡುತ್ತಿರುತ್ತಾರೆ. ಆದರೆ ನಾವು ಅವರನ್ನು ಅವರ ಇಷ್ಟಕ್ಕೆ ವಿರೋಧವಾಗಿ ಹೊರದೂಡುವುದಕ್ಕಾಗುವುದಿಲ್ಲ. ಆದರೆ ಯಾರಾರು ಮೈಸೂರಿನವರೊಡನೆ ಇರುವುದಕ್ಕೆ ಇಷ್ಟಪಡುತ್ತಾರೋ ಅವರು ಇರಲಿ ಅನ್ನುವ ಉದ್ದೇಶದಿಂದ ನಾವು ಹಾಗೆ ಹೇಳಿರುತ್ತೇವೆ. ಆದರೆ ಈ ವಿಚಾರವಾಗಿ ಆ ಬೌಂಡರಿ ಕಮಿಷನ್ನಿನವರು ಯಾವ ರೀತಿ ಅಭಿಪ್ರಾಯಪಡುತ್ತಾರೋ ಮತ್ತು ಈ ಬೈಲಿಂಗ್ವಿಸ್ಟಿಕ್ ಪ್ರದೇಶಗಳ ಹಂಚಿಕೆಯನ್ನು ಯಾವ ರೀತಿ ಆಗಬೇಕೆಂದು ತಿಳಿಸುತ್ತಾರೋ, ಅವರು ಯಾವ ಯಾವ ಭಾಗಗಳು ಯಾವ ಯಾವ ರಾಜ್ಯಕ್ಕೆ ಸೇರಬೇಕೆಂದು ಕೊನೆಯ ಘಳಿಗೆಯಲ್ಲಿ ತಮ್ಮ ಒಂದು ತೀರ್ಮಾನ ನೀಡುತ್ತಾರೋ ಅಂಥ ಒಂದು ತೀರ್ಮಾನಕ್ಕೆ ನಾವೆಲ್ಲರೂ ಬಾಧ್ಯರಾಗಿರೋಣ. ಅವರು ಯಾವ ಯಾವ ಪ್ರದೇಶ ಯಾವ ಯಾವುದಕ್ಕೆ ಸೇರಬೇಕೆಂದು ತಿಳಿಸುತ್ತಾರೋ ಅದಕ್ಕೆ ನಮ್ಮ ಯಾವ ಭಿನ್ನಾಭಿಪ್ರಾಯವೂ ಇರಬಾರದು. ಅವರು ಹೈದರಾಬಾದು ಆ ಮಹಾರಾಷ್ಟ್ರಕ್ಕೆ ಹೋಗಬೇಕೆಂದರೆ ಆಗ ಸ್ವಲ್ಪ ಭಿನ್ನಾಭಿಪ್ರಾಯ ಬರಬಹುದು. ಆದರೆ ಅವರು ಈ ಕಾರ್ಯವನ್ನು ಹಳ್ಳಿಗಳ ಯೂನಿಟ್ ಮೇಲೆ ಅಥವಾ ತಾಲ್ಲೂಕುಗಳ ಯೂನಿಟ್ ಮೇಲೆ ಇಲ್ಲವೇ ಡಿಸ್ಟ್ರಿಕ್ಟುಗಳ ಯೂನಿಟ್ ಮೇಲೆ ಮಾಡುತ್ತಾರೆಯೋ, ಹೇಗೆ ಅನ್ನತಕ್ಕ ವಿಚಾರದಲ್ಲಿ ಕೂಡ ಸ್ವಲ್ಪ ಭಿನ್ನಾಭಿಪ್ರಾಯ ಆಗ ಬರಬಹುದು. ಆಗ ಕೆಲವರು ತಾಲ್ಲೂಕು ಯೂನಿಟ್ಟುಗಳಿರಲೆಂದು ಇಷ್ಟಪಡಬಹುದು. ಅಂತೂ ಯಾರು ಹೇಗೆ ಇಷ್ಟಪಟ್ಟರೂ ಈ ಪ್ರಶ್ನೆ ಆ ಬೌಂಡರಿ ಕಮಿಷನ್ನಿನವರ ತೀರ್ಮಾನದ ಪ್ರಕಾರ ನಿರ್ಧರಿಸಲ್ಪಡುತ್ತದೆ. ಆದರೆ ನಾವೆಲ್ಲರೂ ಒಂದಾಗಿ ಸೇರಿ ಈ ಕಾರ್ಯವನ್ನು ಹೆಚ್ಚು ಕಷ್ಟವಿಲ್ಲದಂತೆ, ಇತರ ಯಾವ ಭಾವನೆಗಳಿಗೂ ಅಥವಾ ಉದ್ರೇಕಗಳಿಗೂ ಅವಕಾಶವಿಲ್ಲದಿರುವಹಾಗೆ, ಇತರರಿಗೆ ಅನಾನುಕೂಲವಾಗದಂತೆ ಜನರ ಅಭಿಪ್ರಾಯಗಳನ್ನು ರೂಪಿಸಿ, ಈ ಕೆಲಸವನ್ನು ಒಂದು ಸುಗಮವಾದ ರೀತಿಯಲ್ಲಿ ಬಗೆಹರಿಸತಕ್ಕ ಬಗ್ಗೆ ನಾವೆಲ್ಲರೂ ಈ ದಿವಸ ಶ್ರಮಿಸಬೇಕಾಗಿದೆ. ಈಗಾಗಲೇ ಆ ಫಜಲಾಲಿ ಸಮಿತಿಯವರು ಈ ಭಾಷಾವಾರು ಪ್ರಾಂತ್ಯ ರಚನೆಯ ಬಗ್ಗೆ ಒಂದು ತೀರ್ಮಾನಕ್ಕೆ ಬರುವುದರಲ್ಲಿದ್ದಾರೆ. ಅವರು ಸರ್ಕಾರಕ್ಕೆ ಒಪ್ಪಿಸಬೇಕಾಗಿರುವ ವರದಿ ಪೂರೈಸುತ್ತಾ ಬಂದಿದೆ. ಅವರ ವರದಿಯನ್ನೂ ಬೇಗ ಕೊಡಬೇಕೆಂದು ಕೇಂದ್ರಸರ್ಕಾರ ಅವರನ್ನು ಒತ್ತಾಯಪಡಿಸುತ್ತಿದೆ. ಆದರೆ ಅದು ಇನ್ನೂ ಪೂರ್ತಿಯಾಗಿಲ್ಲ ಇಷ್ಟರೊಳಗಾಗಿಯೆ ನಾವು ಈ ಬಗ್ಗೆ ನಮ್ಮ ಖಚಿತವಾದ ಅಭಿಪ್ರಾಯವನ್ನು ಅವರಿಗೆ ತಿಳಿಸಬೇಕಾಗಿತ್ತು. ಆದರೆ ಈ ದಿವಸ ಕೂಡ ಈ ವಿಚಾರವನ್ನು ಬರಿ ಚರ್ಚೆಯಲ್ಲೇ ಮುಗಿಸಿಬಿಡೋಣ ಅನ್ನತಕ್ಕಂಥ ಒಂದು ಮನೋಭಾವ ಸರ್ಕಾರಕ್ಕಿರುವ ಹಾಗೆ ಕಾಣಬರುತ್ತಿದೆ. ಆದರೆ ನಾವು ಮುಖ್ಯಮಂತ್ರಿಗಳು ಮಾಡಿರತಕ್ಕಂಥ ಭಾಷಣವನ್ನು ನೋಡಿದರೆ ಅವರು "ಜನಾಭಿಪ್ರಾಯದಂತೆ ನಾನು ವರ್ತಿಸುತ್ತೇನೆ. ಬೇರೆ ದೇಶದ ಜನರನ್ನೂ ನಾನು ಆಹ್ವಾನಿಸುತ್ತೇನೆ" ಎಂದು ಹೇಳಿದ್ದಾರೆ. ಇದರಿಂದ ಅವರ ಅಭಿಪ್ರಾಯವೇನಿರುತ್ತದೆಯೆಂಬುದನ್ನು ನಾವು ಅರ್ಥಮಾಡಿಕೊಳ್ಳಬಹುದು. ಅವರು "ನಾನು ಈ ಕರ್ಣಾಟಕ ಪ್ರಾಂತ ನಿರ್ಮಾಣ ಕಾರ್ಯಕ್ಕೆ

(ಶ್ರೀ ಎಸ್. ಗೋಪಾಲಗೌಡ.)

ಅಡ್ಡಿ ಬರುವುದಿಲ್ಲ'' ಎಂದು ಹೇಳಿದ್ದಾರೆ. ಅವರು ಇನ್ನು ಮುಂದೆಯೂ ಸಹ ಇದೇ ರೀತಿಯಾಗಿ ತಮ್ಮ ಒಂದು ಸ್ಪಷ್ಟವಾದ ಅಭಿಪ್ರಾಯವನ್ನು ಕೊಡುತ್ತಾರೆಂದು ನಾನು ಆಶಿಸುತ್ತೇನೆ. ಆದರೆ ಈ ಸಂದರ್ಭದಲ್ಲಿ ನಾನು ಇನ್ನೂ ಕೆಲವು ವಿಷಯಗಳನ್ನು ಹೇಳಬೇಕಾಗಿತ್ತು. ಅದಕ್ಕೆಲ್ಲಾ ಕಾಲಾವಕಾಶವಿಲ್ಲ, ನಾನಿನ್ನೂ ನನ್ನ ಮಾನ್ಯ ಸ್ನೇಹಿತರಿಗೆ ಮಾತನಾಡಲು ಕಾಲಾವಕಾಶ ಮಾಡಿ ಕೊಡಬೇಕಾಗಿರುವುದರಿಂದ ನಾನು ನನ್ನ ಭಾಷಣವನ್ನು ಇನ್ನು ಒಂದೆರಡು ಮಾತುಗಳನ್ನು ಹೇಳಿ ಮುಗಿಸಿಬಿಡುತ್ತೇನೆ. ಕೆಲವುಕಾಲದೊಳಗಾಗಿಯೇ ಸಮಗ್ರ ವಿಷಯಗಳನ್ನೂ ಚಿತ್ರಿಸುವುದಕ್ಕೆ ಈ ಭಾಷಾವಾರು ಪ್ರಾಂತ್ಯವಾದರೇನೇ ಸಾಧ್ಯ. ಸೂಕ್ಷ್ಮದಲ್ಲಿ ಹೇಳುವುದಾದರೆ ಈ ಕರ್ಣಾಟಕ ಪ್ರಾಂತ್ಯ ರಚನೆಯಾದಲ್ಲಿ ಕನ್ನಡನಾಡಿನ ಜನರ ಭವಿಷ್ಯವು ಬಹಳ ಉಜ್ವಲವಾಗಿರುತ್ತದೆ. ಇವರು ತಮ್ಮ ಅಭಿವೃದ್ಧಿಯನ್ನು ಆಗ ಬಹಳ ಬೇಗ ಸಾಧಿಸಿಕೊಳ್ಳಬಹುದು. ಹೀಗೆ ಭಾಷಾವಾರು ಪ್ರಾಂತ್ಯ ಸಾಧನೆ ಆಗಬೇಕಾದಲ್ಲಿ ಕೇರಳ, ಮಹಾರಾಷ್ಟ್ರ ಮತ್ತು ಹೈದರಾಬಾದ್ ಇವುಗಳ ವಿಭಜನೆಯ ಸಮಸ್ಯೆ ನಮ್ಮ ಮುಂದೆ ಬರುತ್ತದೆ. ಇವುಗಳು ನಮ್ಮ ನೆರೆಹೊರೆಯಲ್ಲಿರುವುದರಿಂದ ಇವುಗಳೆಲ್ಲ ಸಹಕರಿಸಿ ನಡೆಯಬೇಕಾಗಿರುತ್ತೆಂಬುದು ಅಗತ್ಯ ಎಂದು ನಾನು ಒತ್ತಿ ಹೇಳಬಯಸುತ್ತೇನೆ. ಈ ಸಂಬಂಧವಾಗಿ ಈಗಾಗಲೇ ಆ ಫಜಲಾಲ ಸಮಿತಿಯವರು ಈ ಭಾಷಾವಾರು ಪ್ರಾಂತ್ಯಗಳ ರಚನೆಯ ಬಗ್ಗೆ ಜನರೆಲ್ಲರ ಆಶೋತ್ತರಗಳು ಯಾವ ರೀತಿ ಇರುತ್ತವೆ ಎನ್ನತಕ್ಕ ಬಗ್ಗೆ ಅನೇಕ ರೀತಿಯಲ್ಲಿ ಅವರು ಅಭಿಪ್ರಾಯಗಳನ್ನು ಕ್ರೋಢೀಕರಿಸಿರುತ್ತಾರೆ. ಆದರ ಪ್ರಕಾರ ಈ ಪ್ರಾಂತ್ಯಗಳ ಪುನರ್ನಿರ್ಮಾಣವಾಗುವಂತೆ ನಾವು ಪ್ರಯತ್ನಗಳನ್ನು ನಡೆಸಿ ಅದು ಬೇಗ ಕಾರ್ಯರೂಪಕ್ಕೆ ಬರುವಂತೆ ಮಾಡಲು ಅವರಿಗೆ ನಮ್ಮೆಲ್ಲರ ಸಹಾಯ ಮತ್ತು ಬೆಂಬಲವನ್ನು ನೀಡಬೇಕಾಗಿದೆ. 1957 ನೆಯ ಇಸವಿಯೊಳಗೇ ಈ ಕಾರ್ಯಸಾಧನೆಯಾಗಿ ಮುಂದಿನ ಮಹಾ ಚುನಾವಣೆಗಳು ನಡೆಯುವಲ್ಲಿ ಇಂದು ಹೊರಗಡೆ ಇರುತಕ್ಕ ಎಲ್ಲಾ ಕನ್ನಡನಾಡಿನ ಪ್ರತಿನಿಧಿಗಳೂ ಈ ಸಭೆಗೆ ಬಂದು ಅವರು ನಮ್ಮೊಡನೆ ಸೇರುವಂತಾಗಲಿ, ಇದಕ್ಕೆ ನಮ್ಮೆಲ್ಲರ ಸೌಹಾರ್ದವಿರಲಿ, ಅವರನ್ನು ನಾವೆಲ್ಲರೂ ಆಹ್ವಾನಿಸೋಣ, ಅವರಿಗೆ ಈ ಸಂಬಂಧವಾಗಿ ನಾವೆಲ್ಲಾ ಶುಭಾಶಯಗಳನ್ನೂ ಕೋರೋಣ ಅನ್ನುವುದಾಗಿ ನಾನು ನನ್ನ ಈ ಎರಡು ಮಾತುಗಳನ್ನು ಹೇಳಿ ನನ್ನ ಭಾಷಣವನ್ನು ಮುಕ್ತಾಯಗೊಳಿಸುತ್ತೇನೆ.

Mr. **SPEAKER.**—The House will now rise for the day and meet at 12 Noon on Monday.

The House adjourned for the day at Fifty-two Minutes past Twelve of the Clock to meet again at Twelve Noon on Monday the 7th March 1955.

WD 4508—GPB—550—22-4-55